ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 26 ಶನಿವಾರ 2024

45

ಸಂಪುಟ: 45 | ಸಂಚಿಕೆ: 190

ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com,

website: www.mysurumithra.com



Joyalukkas

THE HEART OF EVERY

Celebration

₹ 1,000 ಗಿಫ್ಟ್ ವೋಚರ್
ರೂ.50,000 ಮತ್ತು ಅಧಿಕ ಮೌಲ್ಯದ ಚಿನ್ನ ಮತ್ತು ಅಮೂಲ್ಯವಾದ ಆಭರಣ ಖರೀದಿಯ ಮೇಲೆ

ಉಚಿತ 1ಗ್ರಾಂ ಚಿನ್ನದ ನಾಣ್ಯ
ರೂ.1,00,000 ಮತ್ತು ಅಧಿಕ ಮೌಲ್ಯದ ವಜ್ರ ಮತ್ತು ಅನ್‌ಕಟ್ ವಜ್ರಾಭರಣ ಖರೀದಿಯ ಮೇಲೆ

₹ 500 ಗಿಫ್ಟ್ ವೋಚರ್
ರೂ.10,000 ಮತ್ತು ಅಧಿಕ ಮೌಲ್ಯದ ಬೆಳ್ಳಿಯ ಆಭರಣ ಖರೀದಿಯ ಮೇಲೆ

*T&C apply

SCAN TO SHOP ONLINE

OFFER VALID TILL 3RD NOVEMBER

HDFC BANK FESTIVE TREATS UPTO ₹3000 INSTANT DISCOUNT* On Credit Cards.
2% Instant discount. Min Trxn.: ₹75000, Max Discount: ₹3000. Validity: 15th to 31st Oct 2024. T&C Apply.

ಪಾವತಿಸಿ 10% ಮುಂಗಡ ನೀಡಿ ಹಾಗೂ ಚಿನ್ನದ ದರ ಸುರಕ್ಷತೆಯ ಖಾತರಿ ಪಡೆಯಿರಿ

ನಿಮ್ಮ ಹಳೆಯ ಚಿನ್ನವನ್ನು ವಿನಿಮಯ ಮಾಡಿ 100% HUID 916 ಚಿನ್ನವನ್ನು ನಿಮ್ಮದಾಗಿಸಿಕೊಳ್ಳಿ.

B N ROAD, MYSURU. PH: 0821 2442200

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI
PHOENIX MARKETCITY • KAMMANAHALLI • FORUM SOUTH BENGALURU, PRESTIGE FALCON CITY | MANGALURU
MYSURU • HUBBALLI • SHIVAMOGGA • BELAGAVI • UDUPI • HASSAN • DAVANGERE • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA

ದೀಪಾವಳಿ ಹಬ್ಬದ ಪ್ರಯುಕ್ತ!
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ



LAST 2 DAYS

ಸಿಲ್ಕ್ ಇಂಡಿಯ® 2024

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...

18 ರಿಂದ 27 ಅಕ್ಟೋಬರ್ 2024 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ

ನಂಜರಾಜ ಬಹದ್ದೂರ್ ಛತ್ರ


ವಿನೋಬಾ ರಸ್ತೆ, ಮೈಸೂರು

Entry Free | All Credit & Debit Cards Accepted | Contact : 98977 09954, 99008 03345

(Registered with O/o D C (H) Ministry of Textiles, Govt. of India)

ESSENCE OF THE BHAGAVAD GITA

Discourse in English by
Shri Eswaran
Founder-Acharya, Vedanta Institute



Saturday 26 Oct & Sunday 27 Oct, 2024
6:45 pm - 7:45 pm

Bharatiya Vidya Bhavan
Prof Y.T Thathachari Auditorium
Vijayanagar 1st Stage
Mysuru

All are Welcome

WWW.VEDANTAINSTITUTE.ORG
For Details Contact : 90358 96665

WANTED

Any degree with fluency in english (to teach 1st Std to 5th Std English language)
B.Sc / M.Sc, B.Ed. (PCM)
B.A, B.Ed / M.A, B.Ed (Hindi)
Apply within 5 days
srignaneshwari.vidyasamsthe@gmail.com

Address:
SRI GNANESHWARI VIDYASAMSTHE,
P-1, 8th Main, Hebbal 1st stage, Mysore-16
0821-2302072

Exchange your old sofa set to brand new sofa set also repair Done, Contact
9591012944

ದಾಸ್ತಿ ಪ್ಯಾರಾ ಮೆಡಿಕಲ್ ಕಾಲೇಜು

#ಎಲ್.46/4, ಎಂ.ಜಿ.ಟವರ್ಸ್, 2ನೇ ಮಹಡಿ, (ಜಿ.ಹೆಚ್.ಐ. ಕಾಂಪ್ಲೆಕ್ಸ್ ಹಿಂಭಾಗ) ಇನೇ ಹಂತ, ಕುವೆಂಪುನಗರ, ಮೈಸೂರು – 570023, (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಈ ಸಂಸ್ಥೆಯಲ್ಲಿ ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ ಹಾಗೂ ಕೆ.ಆರ್.ಆಸ್ಪತ್ರೆ ಮೈಸೂರಿನಲ್ಲಿ ಕ್ಲಿನಿಕಲ್ ತರಬೇತಿ
ಎಸ್.ಎಸ್.ಎಲ್.ಸಿ. ಪಾಸಾದವರಿಗೆ

ಪ್ರವೇಶ ತೆರೆದಿದೆ, ತ್ವರೆಮಾಡಿ (ಕೆಲವೇ ಸೀಟುಗಳು ಲಭ್ಯ)

ಡಿಪ್ಲೋಮಾ-ಇನ್-ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT)
(ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಟೆಕ್ನಿಷಿಯನ್ ಹುದ್ದೆಗೆ ಅವಕಾಶ)

8904403905 | 9731507047

WANTED SUPERVISOR

- With basic computer knowledge
- Should be able to speak Kannada, Hindi and English
- Should be capable of handling operations independently
- Responsible for the Overall Growth of the Industry
- Age no bar
- Accommodation will be provided for Selected Candidate

Call: 88844 22225

22 ಕ್ಯಾರೆಟ್ ಚಿನ್ನದ ದರ
@ ತೊಳಸಿ

ತೊಳಸಿ THOLASI JEWELS

₹ 7295/-

ಅಶೋಕ ರಸ್ತೆ, ಮೈಸೂರು. ಫೋ: 0821-2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು.
ನಂಜನಗೂಡು. ಫೋ: 08221-200926

HUGE DISCOUNTS ON BIGGER DIMENSION SITES

MUDA Approved Ready to Construct

TO BUY / INVEST
Call : 98442 05017 / 80883 28484

ಟ್ರೈನಿಂಗ್ ನಂತರ ಕೆಲಸ ಗ್ಯಾರಂಟಿ

ಹಿರಿಯರನ್ನು ಆರೈಕೆ ಮಾಡುವ ಕೆಲಸದಲ್ಲಿ ಆಸಕ್ತಿ ಇದೆಯೇ? ಹೌದಾದರೆ, ಈ ಅವಕಾಶ ನಿಮಗಾಗಿ. ಸೇವಂತಿ ಎಂಪತೆಟಿಕ್ ಸಲ್ಯೂಶನ್ಸ್ ಸಂಸ್ಥೆಯು ಮೈಸೂರಿನಲ್ಲಿ 15 ದಿನಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅನುಭವೀ ಶಿಕ್ಷಕರು ಹಿರಿಯರ ಯೋಗಕ್ಷೇಮದ ಎಲ್ಲ ಆಯಾಮಗಳ ಬಗ್ಗೆ ತರಬೇತಿ ನೀಡಲಿದ್ದಾರೆ. ಮುಖ್ಯವಾದ ಸೂಚ್ಯಂಕಗಳನ್ನು ತೆಗೆದುಕೊಳ್ಳುವುದು, ದಿನನಿತ್ಯದ ನೈರ್ಮಲ್ಯ, ಸಂವಹನ ಮತ್ತು ಶಿಷ್ಟಾಚಾರ ಇತ್ಯಾದಿಗಳನ್ನು ಒಳಗೊಂಡು ಹಿರಿಯರನ್ನು ಗೌರವಪೂರ್ಣವಾಗಿ ಹೇಗೆ ನೋಡಿಕೊಳ್ಳುವುದು ಸಾಧ್ಯ ಎನ್ನುವುದನ್ನು ಹೇಳಿಕೊಡಲಿದ್ದಾರೆ. ಟ್ರೈನಿಂಗ್ ನಲ್ಲಿ ಆದ ಬಳಿಕ ಅರ್ಹರಿಗೆ ಉದ್ಯೋಗ ಇರುತ್ತದೆ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ/ಪಿ.ಯು.ಸಿ. ಪಾಸ್/ಫೈಲ್ ಆಸಕ್ತರು caremanager@sevanti.in ಗೆ ಮೈಲ್ ಮಾಡಿ ಇಲ್ಲವೇ **7795126346 / 7795371794** ಗೆ ಕರೆ ಮಾಡಿ/ವಾಟ್ಸಪ್ ಮಾಡಿ.

2.5 BHK
HOME INTERIORS @ ₹ 2.5 Lakh*

Home Space Mart

*T&C Apply

✆91089 23123

ಸೈಟುಗಳು ಮಾರಾಟಕ್ಕಿವೆ

ಮೈಸೂರು ನಗರದ ಇಲವಾಲದಲ್ಲಿ ಮೈಸೂರು, ಕುಶಾಲನಗರ ಎಕ್ಸ್‌ಪ್ರೆಸ್ ಹೈವೇಗೆ ಹೊಂದಿಕೊಂಡಿರುವ ಡಿ.ಟಿ.ಸಿ.ಪಿ ಅನುಮೋದಿತ ಹಾಗೂ ನೋಂದಣಿಗೆ ಸಿದ್ಧವಿರುವ ನಿವೇಶನಗಳು ಮಾರಾಟಕ್ಕಿವೆ. ಮೊದಲ ಆದ್ಯತೆ: ಗೃಹ ನಿರ್ಮಾಣ, ಸೊಸೈಟಿಗಳು, ಸಂಘ ಸಂಸ್ಥೆಗಳು & ಸಹಕಾರ ಸಂಸ್ಥೆಗಳು

ಸಂಪರ್ಕಿಸಿ: **90085 87466**

SITE FOR SALE

50x80 North facing 40 feet road, Roopa Nagar, Attached to SBM bogadi, 3600 per sq feet. Price 1.50cr
8884616461 | 8792235466

SITE FOR SALE

Site no 330 Vidyashankara layout, near Rajakumar Road, Price 98 Lakh, Negotiable contact:
8970537475

ಹ್ಯೂಂಡಾಯ್ ಮೆಗಾ ಎಕ್ಸ್‌ಚೇಂಜ್ ಮತ್ತು ಲೋನ್ ಮೇಳ.
26ನೇ ಮತ್ತು 27ನೇ ಅಕ್ಟೋಬರ್ 2024 ರಂದು
ಎಲ್ಲಾ ಅದ್ವೈತ್ ಹ್ಯೂಂಡಾಯ್ ಶೋರೂಮ್‌ಗಳಲ್ಲಿ.

Offer valid till 31st October 2024.*

Hy-CNG Duo available in Hyundai EXTER and Grand i10 NIOS.



VENUE benefits up to	EXTER benefits up to	i20 benefits up to	Grand i10 NIOS benefits up to
₹80 629*	₹42 972*	₹55 000*	₹58 000*

^^VENUE accessory package worth ₹ 21 628 can be availed on payment of ₹ 5 999.
EXTER accessory package worth ₹ 17 971 can be availed on payment of ₹ 4 999.
##Additional scrappage bonus available against valid certificate of deposit. #Special benefits for CSD and KPKB customers.

HYUNDAI

Advaith Hyundai

Mysore: **Belwadi - Hunsur road:** Chandan: 9538970802, Ranjith: 9945773944; **JLB Road:** Rakesh: 9538971141, Arun: 9538971183; **V V Nagar:** Ningaraju: 9945773967, Vicky Shekar: 9663376058

Kodagu: **Gonikoppal:** Kaushik: 9880577675, Chethan: 9538971188; **Madikeri:** Shrinidhi: 9538971151, Pradeep: 6364575893; **Kushalnagara:** Roy Ponnappa: 9538971149, Puneeth: 9620002587

Mandya: Deepak: 9740060075, Vishwa: 9538970804

Hassan: Kumaraswamy: 9620004782, Nandan: 9538971132

Terms & Conditions apply. *Scheme is applicable on select variants of Hyundai VENUE, Hyundai EXTER, Hyundai i20 & Hyundai Grand i10 NIOS cars purchased between 1st - 31st October 2024. ^^Accessories package will not be applicable for EXTER Knight, VENUE Knight, VENUE Adventure and Diesel variants. Accessory packages payment to be made to dealer need to be purchased as a whole, and if accessories parts are purchased independently, then offer will not be applicable. Cash discount can't be availed against this offer. Benefits mentioned include applicable cash, exchange and accessories package benefits. Benefits may vary with variants. This advertisement and car shown here is for creative representation purposes only and the depictions are for illustrative purposes. Features and specifications shown may vary or may not be a part of standard fitment and are subject to change without prior notice. Hyundai Motor India reserves the right to change specifications, colour, equipment and schemes at any time without prior notice. The black shade on glasses are due to lighting effect. Size and colour may appear to vary due to lighting and position effect. Scrappage bonus is applicable on select models subject to receipt of valid Certificate of Deposit issued by Govt. approved & operational vehicle scrappage center. #CSD: Canteen Stores Department, KPKB: Kendriya Police Kalyan Bhandar.

ಮುಖ್ಯಮಂತ್ರಿ ಸಿದ್ದರಾಮಯ್ಯ ಪದಚ್ಯುತಿಗೆ ಬಿಜೆಪಿ, ಜೆಡಿಎಸ್ ಕುತಂತ್ರ ಆರೋಪ

ನ.7ರಂದು ದೆಹಲಿಯಲ್ಲಿ ಅಹಿಂದ ಪ್ರತಿಭಟನೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಮತ್ತು ಶೋಷಿತ ಸಮುದಾಯಗಳ ಅಹಿಂದ ಮುಖಂಡರ ದುಂಡು ಮೇಜಿನ ಸಭೆ ನಡೆಯಿತು.

ಮೈಸೂರು, ಅ.25(ಬಿಎಲ್‌ಯು)– ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಿಗೊಳಿಸಲು ನಡೆಸುತ್ತಿರುವ ಬಿಜೆಪಿ ಹಾಗೂ ಜೆಡಿಎಸ್ ಕುತಂತ್ರ ಖಂಡಿಸಿ ನವೆಂಬರ್ 7 ರಂದು ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಮತ್ತು ಶೋಷಿತ ಸಮುದಾಯಗಳ ಅಹಿಂದ ಮುಖಂಡರ ಸಭೆ ನಿರ್ಣಯ ಕೈಗೊಂಡಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ದುಂಡು ಮೇಜಿನ ಸಭೆಯಲ್ಲಿ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಂಡು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಸ್ಥಿರಗೊಳಿಸಲು ಮುಂದಾಗಿದ್ದು, ಇದನ್ನು ತಡೆಯಲು ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸುವಂತೆ ಮನವಿ ಮಾಡಲು ಸಭೆಯಲ್ಲಿ ತೀರ್ಮಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್, ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ನವೆಂಬರ್ 7 ರಂದು ಪ್ರತಿಭಟನೆ ನಡೆಸಲಿದ್ದು, ಸಾಹಿತಿ ಬಂಜಗೆರೆ ಜಯಪ್ರಕಾಶ್, ನಾ.ದಿವಾಕರ್, ದಿನೇಶ್ ಅಮಿನ್‌ಮಟ್ಟು ಪ್ರತಿಭಟನೆಯ ನೇತೃತ್ವ ವಹಿಸಲಿದ್ದಾರೆ ಎಂದು ತಿಳಿಸಿದರು.

ಕೋಮುವಾದಿ ಹಾಗೂ ಜಾತಿವಾದಿಗಳ ಗಟ್ಟಿ ಧ್ವನಿಯಾಗಿರುವ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಿದರೆ ಕೋಮುವಾದ ಮತ್ತು ಜಾತಿವಾದವನ್ನು ವ್ಯಾಪಕವಾಗಿ ಹರಡಬಹುದು ಎಂಬ ದುರುದ್ದೇಶದಿಂದ ಬಿಜೆಪಿ ಮತ್ತು ಜೆಡಿಎಸ್ ರಾಜಕೀಯ ತಂತ್ರಗಾರಿಕೆ ರೂಪಿಸಿದೆ ಎಂದು ಆರೋಪಿಸಿದರು.

ಕೇಂದ್ರದ ತನಿಖಾ ಸಂಸ್ಥೆಗಳು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕೈಗೊಂಬೆಯಾಗಿ ಕೆಲಸ ಮಾಡುತ್ತಿವೆ. ಇವರ ಅಣತಿಯಂತೆ ತನಿಖೆ ಸಂಸ್ಥೆಗಳು ಸಿದ್ದರಾಮಯ್ಯ ವಿರುದ್ಧ ತನಿಖಾಸ್ತ್ರ ಪ್ರಯೋಗಿಸುತ್ತಿದೆ ಎಂದು ಆಪಾದಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿ, ಜನ ವಿರೋಧಿ ನೀತಿ ಅನುಸರಿಸುತ್ತಿರುವ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಚಾಟಿ ಬೀಸಬೇಕು ಎಂದು ಮನವಿ ಮಾಡಿದರು. ಬಿಜೆಪಿ ಮತ್ತು ಜೆಡಿಎಸ್ ನಾಯಕರು ನೂರಾರು ಕೋಟಿ ಆಸ್ತಿ ಮಾಡಿದ್ದರೂ, ಅವರ ಬಗ್ಗೆ ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳ ಗಮನ ಹರಿಸುತ್ತಿಲ್ಲ. ಎರಡು ಪಕ್ಷಗಳು ಏನೇ ರಾಜಕೀಯ ತಂತ್ರಗಾರಿಕೆ ಮಾಡಿದರೂ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ಸಾಧ್ಯವಿಲ್ಲ ಎಂದು ಮಾಜಿ ಸಂಸದ ಕಾಗಲವಾಡಿ ಶಿವಣ್ಣ ಹೇಳಿದರು.

ಮಾಜಿ ಸಚಿವ ಎಂ.ಶಿವಣ್ಣ, ಉಪ್ಪಾರ ಸಮುದಾಯದ ಮುಖಂಡ ಯೋಗೇಶ್ ಉಪ್ಪಾರ್, ಸವಿತಾ ಸಮಾಜದ ಮುಖಂಡ ಎನ್.ಆರ್.ನಾಗೇಶ್, ಕುರುಬರ ಸಂಘದ ಮುಖಂಡ ಶಿವಪ್ಪ ಕೋಟೆ, ವಿಶ್ವಕರ್ಮ ಸಮುದಾಯದ ಮುಖಂಡ ಮೊಗ್ಗಣ್ಣಾ ಚಾರ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಹಾಜರಿದ್ದರು.

'ಸುಪ್ರೀಂಕೋರ್ಟ್ ಒಳಮೀಸಲಾತಿ ತೀರ್ಪು ಮತ್ತು ಜಾರಿ' ಕುರಿತು ನ.1, ವಿಚಾರ ಸಂಕಿರಣ

ಮೈಸೂರು, ಅ.25(ಜಿಎ)–ಜನಚೈತನ್ಯ ಫೌಂಡೇಷನ್ ವತಿಯಿಂದ ನ.1ರಂದು ಸಂಜೆ 4 ಗಂಟೆಗೆ ನಗರದ ಇನ್ಸ್‌ಟಿಟ್ಯೂಷನ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಸಹಯೋಗದಲ್ಲಿ 'ಸುಪ್ರೀಂಕೋರ್ಟ್ ಒಳಮೀಸಲಾತಿ ತೀರ್ಪು ಮತ್ತು ಜಾರಿ' ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಚಿಂತಕ ಪ್ರೊ.ಹೆಚ್. ಗೋವಿಂದಯ್ಯ, ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ, ಮಾಜಿ ಮೇಯರ್ ನಾರಾಯಣ, ಅರಕಲವಾಡಿ ನಾಗೇಂದ್ರ, ಹಿರಿಯ ವಕೀಲರಾದ ದಾಸಯ್ಯ, ಮಾಳಪ್ಪ ಕುರ್ಕಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ಕಳೆದ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆ ವೇಳೆ ಪಕ್ಷದ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಒಳಮೀಸಲಾತಿ ಜಾರಿಗೊಳಿಸುವ ಆಶ್ವಾಸನೆ ನೀಡಿತ್ತು. ಹಾಗೇ ಸಿದ್ದರಾಮಯ್ಯ ಅವರು ಹಲವಾರು ಬಾರಿ ಒಳ ಮೀಸಲಾತಿ ಜಾರಿ ಭರವಸೆ ನೀಡಿದ್ದರು. ಇದಲ್ಲದೆ, ಸುಪ್ರೀಂಕೋರ್ಟ್ ಸಹ ತೀರ್ಪು ನೀಡಿ ಮೂರು ತಿಂಗಳು ಕಳೆಯುತ್ತ ಬಂದಿದ್ದರೂ, ರಾಜ್ಯ ಸರ್ಕಾರ ಇದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ಈ ಕುರಿತು ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಇಂದು ಎಐಯುಟಿಯುಸಿ ಸಂಘಟಿತ 4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನದ ಬೃಹತ್ ಮೆರವಣಿಗೆ; ಬಹಿರಂಗ ಅಧಿವೇಶನ

ಮೈಸೂರು, ಅ. 25– ಮೈಸೂರಿನಲ್ಲಿ ನಾಳೆ (ಅ. 26) ಎಐಯುಟಿಯುಸಿ ಸಂಘಟಿತ 4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನದ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಅಧಿವೇಶನ ಏರ್ಪಡಿಸಲಾಗಿದೆ.

ಇದರ ಅಂಗವಾಗಿ ಕಾರ್ಮಿಕರ ಬೃಹತ್ ಮೆರವಣಿಗೆ ನಂಜರಾಜ ಬಹದ್ದೂರ್ ಛತ್ರದಿಂದ ಬೆಳಗ್ಗೆ 11ಕ್ಕೆ ಆರಂಭವಾಗಿ ಟೌನ್ ಹಾಲ್ ಮೈದಾನದವರೆಗೆ ನಡೆಯಲಿದೆ.

ಸಮ್ಮೇಳನದ ಬಹಿರಂಗ ಅಧಿವೇಶನ ಮಧ್ಯಾಹ್ನ 12ಕ್ಕೆ ಟೌನ್ ಹಾಲ್ ಮೈದಾನದಲ್ಲಿ ನಡೆಯಲಿದ್ದು, ಇದರ ಉದ್ಘಾಟನೆಯನ್ನು ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷ ಕಾ.ಕೆ.ರಾಧಾಕೃಷ್ಣ ನೆರವೇರಿಸುವರು. ಮುಖ್ಯ ಭಾಷಣಕಾರರಾಗಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾ.ಶಂಕರ್ ದಾಸ್ ಗುಪ್ತ ಹಾಗೂ ರಾಜ್ಯ ಅಧ್ಯಕ್ಷ ಕಾ.ಕೆ.ಸೋಮಶೇಖರ್ ಮಾತನಾಡುವರು. ಅಧ್ಯಕ್ಷತೆಯನ್ನು ರಾಜ್ಯ ಕಾರ್ಯದರ್ಶಿ ಕಾ. ಕೆ.ಸೋಮಶೇಖರ್ ಯಾದಗಿರಿ ವಹಿಸಲಿದ್ದಾರೆ.

ರಾಜ್ಯ ಸೆಕ್ರೆಟೇರಿಯಟ್ ಸದಸ್ಯರಾದ ಕಾ.ಚಂದ್ರಶೇಖರ್ ಮೇಟಿ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ. ಸೂಕ್ತಿ ಹಾಗೂ ಛಾಯಾಚಿತ್ರ ಪ್ರದರ್ಶನವನ್ನು ನಿವೃತ್ತ ಪ್ರಾಧ್ಯಾಪಕರು, ಸ್ವಾಗತ ಸಮಿತಿ ಗೌರವಾಧ್ಯಕ್ಷ ಡಾ.ಕೆ.ಕಾಳಚನ್ನೇಗೌಡ ಉದ್ಘಾಟಿಸಲಿದ್ದಾರೆ. ಪ್ರತಿನಿಧಿ ಅಧಿವೇಶನವು ಸಂಜೆ 5ಕ್ಕೆ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಎಸ್‌ಯುಸಿಐ (ಸಿ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾ.ಕೆ.ಉಮಾ ಮಾತನಾಡಲಿದ್ದಾರೆ.

ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ರೈಲ್ವೆ, ಕೈಗಾರಿಕಾ ಕಾರ್ಮಿಕರು, ವೈದ್ಯಕೀಯ ಕಾಲೇಜು, ಸರ್ಕಾರಿ ಹಾಸ್ಟೆಲ್, ವಿಶ್ವವಿದ್ಯಾಲಯ ಹಾಗೂ ಇನ್ನಿತರ ಕ್ಷೇತ್ರಗಳ ಗುತ್ತಿಗೆ ಕಾರ್ಮಿಕರು, ಗಣಿ ಕಾರ್ಮಿಕರು, ವಿದ್ಯುತ್ ಕ್ಷೇತ್ರದ ನೌಕರರು, ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ನೌಕರರು, ಕಟ್ಟಡ ಕಾರ್ಮಿಕರು, ಇನ್ನಿತರ ಕ್ಷೇತ್ರಗಳ ಕಾರ್ಮಿಕರು ಬಹಿರಂಗ ಹಾಗೂ ಪ್ರತಿನಿಧಿ ಅಧಿವೇಶನಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಟಿ.ಎನ್.ನರಸಿಂಹಮೂರ್ತಿ ಅವರ 23ನೇ ಪುಣ್ಯಸ್ಮರಣೆ



ಮೈಸೂರಿನ ಶಾಂತಿ ಸ್ಥಳದಲ್ಲಿ ಏರ್ಪಡಿಸಿದ್ದ ಟಿ.ಎನ್.ನರಸಿಂಹಮೂರ್ತಿ ಅವರ 23ನೇ ಪುಣ್ಯಸ್ಮರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯದ ಅಧ್ಯಕ್ಷ ಎಂ. ಪ್ರಫುಲ್‌ಕುಮಾರ್, ಕಾರ್ಯದರ್ಶಿ ಡಾ.ಆಶಾ ಮಂಜುನಾಥ್, ಎಂ.ಪಾಟೀಲ್, ಪುಟ್ಟರಾಜು, ಪ್ರಸಾದ್, ಅಪ್ಸರ್ ಪಾಷಾ, ಜೆ. ಮಹದೇವ್, ಸುಭಾಷ್ ಮತ್ತಿತರರು ಹಾಜರಿದ್ದರು.

ಇಂದಿನಿಂದ ಕಿರು ರಂಗಮಂದಿರದಲ್ಲಿ ಮಹಿಳಾ ಏಕವ್ಯಕ್ತಿ ನಾಟಕೋತ್ಸವ

ಮೈಸೂರು, ಅ.25(ಜಿಎ)–ರಂಗವಲ್ಲಿ ತಂಡದ ವತಿಯಿಂದ ಅ.26 ಮತ್ತು 27 ರಂದು ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಮಹಿಳಾ ಏಕವ್ಯಕ್ತಿ ನಾಟಕೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಉದ್ಯಮಿ ವಿದ್ಯಾ ಕಾಮತ್ ಈ ವಿಷಯ ತಿಳಿಸಿ, ಅ.26 ರಂದು ಸಂಜೆ 7 ಗಂಟೆಗೆ ಖ್ಯಾತ ಕಲಾವಿದರಾದ ಸುಧಾ ನರಸಿಂಹರಾಜು ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಂಗಕರ್ಮಿ ಆಶಾರಾಣಿ, ರಂಗವಲ್ಲಿ ಸಂಸ್ಥೆ ಕಾರ್ಯದರ್ಶಿ ಬಿ.ರಾಜೇಶ್, ಖಜಾಂಚಿ ಮಂಜುನಾಥ್ ಶಾಸ್ತ್ರಿ ಆಗಮಿಸಲಿದ್ದಾರೆ ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮ ನಂತರ ಮೊದಲ ದಿನ ತಾವು ಅಭಿನಯಿಸಲಿರುವ ಸುಧಾ ಆಡುಕಳ ರಚಿಸಿರುವ 'ದೀಪಧಾರಿಣಿ' ನಾಟಕ ಪ್ರದರ್ಶನಗೊಳ್ಳಲಿದೆ. ಅನುಭೂತಿ ಸಂಸ್ಥೆ ಇದನ್ನು ಪ್ರಸ್ತುತಪಡಿಸಲಿದ್ದು, ನಾಟಕದಲ್ಲಿ ದೀಪಗಳು ಕತ್ತಲೆಯ ಅಸ್ತಿತ್ವ ನಿರಾಕರಿಸದೇ ಜೀವ, ಪರಿಸರವನ್ನು ಬೆಚ್ಚಗಿಡುತ್ತವೆ. ಇದರ ಕುರಿತು ಜನಪದ ಕಥೆಗಳಿವೆ, ನಂಬಿಕೆಗಳಿವೆ, ಆಚರಣೆಗಳಿವೆ. ಹಿರಿಯರ ವಿವೇಕ ನುಡಿಗಳಿವೆ. ಹೀಗಾಗಿ ಈ ರೀತಿಯ ಮಹತ್ವ ಕುರಿತ ಕಥೆ ಆಧರಿಸಿದ ನಾಟಕ ಇದಾಗಿದೆ ಎಂದರು.

ಬಳಿಕ ನುಡಿರಂಗ ಸಂಸ್ಥೆಯ ನುಡಿ ಸುದರ್ಶನ್ ಮಾತನಾಡಿ, ಅ.27ರಂದು ತಾವು ಅಭಿನಯಿಸಲಿರುವ ನಾದಿರಾ ಬಬ್ಬರ್ ಅವರ ಹಿಂದಿ ಮೂಲದ ಹಾಗೂ ಡಿ.ಎಸ್. ಚೌಗಲೆ ಅವರು ಕನ್ನಡಾನುವಾದ ಮಾಡಿರುವ 'ಸಕುಬಾಯಿ ಕಾಮ್‌ವಾಲಿ' ನಾಟಕ ಪ್ರದರ್ಶನಗೊಳ್ಳಲಿದ್ದು, ಮಹಾರಾಷ್ಟ್ರದ ಹಳ್ಳಿಯೊಂದರಲ್ಲಿ ಹುಟ್ಟಿ ಹೊಟ್ಟೆಪಾಡಿಗಾಗಿ ಮುಂಬಯಿ ನಗರಕ್ಕೆ ಬಂದ ಬಾಲಕಿ, ಎಲ್ಲರಂತೆ ತಾನೂ ಓದಬೇಕು ಎಂಬ ಕನಸನ್ನು ಅನಿವಾರ್ಯವಾಗಿ ಮೊಟಕುಗೊಳಿಸಿಕೊಳ್ಳುತ್ತಾಳೆ. ಕೊನೆಯಲ್ಲಿ ಆಕೆಯ ಮಗಳೇ ಆಕೆ ಓದುವಂತೆ ಪ್ರೇರೇಪಿಸುತ್ತಾಳೆ. ಈ ರೀತಿಯ ಎಳೆಯಲ್ಲಿ ನಾಟಕ ಸಾಗುತ್ತದೆ ಎಂದರು. ಗೋಷ್ಠಿಯಲ್ಲಿ ರಂಗವಲ್ಲಿ ಟ್ರಸ್ಟಿ ರವಿಪ್ರಸಾದ್ ಉಪಸ್ಥಿತರಿದ್ದರು.

ಮೈಸೂರು ವಿವಿ ಯೋಗ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು,ಅ.25–ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯೋಗ ವಿಜ್ಞಾನ ಕಾರ್ಯಕ್ರಮದ ಪಿಜಿ ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲಾಗಿದೆ. ಅರ್ಜಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಅಂಕಿ ಅಂಶಗಳ ಅಧ್ಯಯನ ವಿಭಾಗದಲ್ಲಿ ನೀಡಲಾಗುತ್ತಿದೆ. ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅ.28 ಕೊನೆ ದಿನ. ಮಾಹಿತಿಗೆ ಮೈಸೂರು ವಿವಿ ವೆಬ್‌ಸೈಟ್ ಮತ್ತು ಯೋಗ ವಿಜ್ಞಾನ ಕಾರ್ಯಕ್ರಮ ಅಧ್ಯಯನ ವಿಭಾಗವನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಮೊ. 8740231972, 9019785995, 9449331882 ಸಂಪರ್ಕಿಸಬಹುದು.

ಗುಂಡು ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ 14 ವರ್ಷದೊಳಗಿನ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ಶಾಲೆ ವಿದ್ಯಾರ್ಥಿನಿ ಸೊವಾಕ ನಾನ್ಗುಡು ಗುಂಡು ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಈ ವಿದ್ಯಾರ್ಥಿನಿಯನ್ನು ಸಂಸ್ಥೆ ಮುಖ್ಯಸ್ಥರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಅಭಿನಂದಿಸಿದ್ದಾರೆ.

ನಿಧನ



ಆಲತ್ತೂರು ಸಿದ್ದಲಿಂಗಪ್ಪ

ಸುತ್ತೂರು, ಅ.25– ನಂಜನಗೂಡು ತಾಲೂಕು ಆಲತ್ತೂರು ಗ್ರಾಮದ ಸಿದ್ದಲಿಂಗಪ್ಪ(72) ಶುಕ್ರವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರು, ಪ್ರತಿ ವರ್ಷ ಸುತ್ತೂರು ಕ್ಷೇತ್ರದಲ್ಲಿ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರು. ಅಲ್ಲದೇ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾಗಿದ್ದರು. ಗ್ರಾಮದಲ್ಲಿ ತೋಟಗಾರಿಕೆ ಬೆಳೆಗಳಾದ ಕಲ್ಲಂಗಡಿ, ರಸಬಾಳೆ, ಪಚ್ಚಬಾಳೆ ಸೇರಿದಂತೆ ಹಲವು ಬೆಳೆಗಳನ್ನು ಬೆಳೆದು, ಪ್ರಶಸ್ತಿಗಳನ್ನು ಸಹ ಪಡೆದಿದ್ದರು. ಮೃತರ ಅಂತ್ಯಕ್ರಿಯೆ ಗ್ರಾಮದ ಅವರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ತಾಲೂಕಿನ ಎಲ್ಲಾ ಗ್ರಾಮಗಳ ರೈತ ಸಂಘದ ಮುಖಂಡರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.


ಅಲ್‌ಹಾಜ್ ಜಿ.ನೂರ್ ಹುಸೇನ್



ಮೈಸೂರು, ಅ. 25–ತಿ.ನರಸೀಪುರ ತಾಲೂಕು ಗರ್ಗೇಶ್ವರಿಯ ಮಸೀದಿ ಕೌಸರ್–ಒ–ಮದ್ರಸ ಕೌಸಾರಿಯ ಸಂಸ್ಥಾಪಕ ಕಾರ್ಯದರ್ಶಿ ಅಲ್‌ಹಾಜ್ ಜಿ. ನೂರ್ ಹುಸೇನ್ (ಅ.24) ಗುರುವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ (ಅ.25) ಗರ್ಗೇಶ್ವರಿ ಮುಸ್ಲಿಮರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.10.2024 ಶನಿವಾರ, ಮಳೆ ನಕ್ಷತ್ರ: ಸ್ವಾತಿ, 24.10.2024 ರಿಂದ 05.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ.

■ **ಮಹಾಜನ ಕಾನೂನು ಕಾಲೇಜು :** ಪುನಶ್ಚೇತನ ಕಾರ್ಯಕ್ರಮ, ಉದ್ಘಾಟನೆ : ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪಿ.ಜೆ. ಸೋಮಶೇಖರ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಮಹಾಜನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಪ್ರಾಂಶುಪಾಲರಾದ ಕೆ. ಸೌಮ್ಯಾ, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮೀಪುರಂ, ಬೆಳಗ್ಗೆ 9.30ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಬೆಳಗ್ಗೆ 9.30ಕ್ಕೆ ರಾಜ್ಯ ಮಟ್ಟದ ಅಂತರ ಕಾಲೇಜುಗಳ ಕಲಾ ಉತ್ಸವ "ಕಲಾ ಸಂಭ್ರಮ–2024". ಉದ್ಘಾಟನೆ : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ.ನಾಗರಾಜು, ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಬೆಳಗ್ಗೆ 11 ಗಂಟೆಗೆ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ 'ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಗಿಂತ ಧಾರ್ಮಿಕ ಪ್ರಜ್ಞೆ ಜಾಗೃತವಾಗುತ್ತಿದೆಯೇ' ವಿಷಯ ಕುರಿತು ಕನ್ನಡ ಚರ್ಚಾ ಸ್ಪರ್ಧೆ, ಅಧ್ಯಕ್ಷತೆ : ಪಾಂಡವಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಭಾರ ಪ್ರಾಂಶುಪಾಲ ರಾಮಕೃಷ್ಣೇಗೌಡ, ಪದವಿ ವಿದ್ಯಾರ್ಥಿಗಳಿಗಾಗಿ 'ಒಂದು ದೇಶ–ಒಂದು ಚುನಾವಣೆ: ಒಕ್ಕೂಟ ಪ್ರಧಾನ ರಾಷ್ಟ್ರವಾದ ಭಾರತಕ್ಕೆ ಸೂಕ್ತವೇ' ವಿಷಯ ಕುರಿತು ಕನ್ನಡ ಚರ್ಚಾ ಸ್ಪರ್ಧೆ, ಅಧ್ಯಕ್ಷತೆ : ಕೆ.ಆರ್.ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎಂ.ಎಸ್.ಮಹದೇವ, ಮಧ್ಯಾಹ್ನ 1.30 ಗಂಟೆಗೆ ಭಾವಗೀತೆ ಗಾಯನ ಸ್ಪರ್ಧೆ, ಅಧ್ಯಕ್ಷತೆ : ಮೈಸೂರು ಕೋಟೆಹುಂಡಿಯ ಶ್ರೀಶಾಂತಿನಿಕೇತನ ಶಿಕ್ಷಣ ಸಂಸ್ಥೆಯ ಶಿಕ್ಷಕ ಎಸ್.ವಿ.ರಾಘವೇಂದ್ರ, ಸಂಜೆ 4 ಗಂಟೆಗೆ ಬಹುಮಾನ ವಿತರಣಾ ಕಾರ್ಯಕ್ರಮ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ

■ **ಸ್ವರಾಂಜಲಿ :** ಹಿರಿಯ ನಾಗರಿಕರಿಗೆ ಗಾಯನ ಸ್ಪರ್ಧೆ, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ವ್ಯವಸ್ಥಾಪಕರು :** ಛಾಯಾಚಿತ್ರ ಕಲಾಕೃತಿಗಳ ಪ್ರದರ್ಶನ, ಖ್ಯಾತ ವನ್ಯಜೀವಿ ಛಾಯಾಚಿತ್ರ ಕಲಾವಿದರಾದ ಎಸ್.ರಾಮಪ್ರಸಾದ್ ಅವರ ಬೆರಗುಕಾರಿ 3ಡಿ ಛಾಯಾಚಿತ್ರ ಕಲಾಕೃತಿಗಳ ಪ್ರದರ್ಶನ, ಅಲೇಖ್ಯ ಮತ್ತು ವಿನ್ಯಾಸ: 3ಡಿ ಅರಸಿಕುಮಾರ್, ಉದ್ಘಾಟನೆ: ಹಾಸ್ಯಪಟು ಪ್ರೊ. ಎಂ.ಕೃಷ್ಣೇಗೌಡ, ಮುಖ್ಯ ಅತಿಥಿಗಳು: ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಐ.ಬಿ.ಪ್ರಭುಗೌಡ, ಉಪಸ್ಥಿತರು: ಎಸ್. ರಾಮಪ್ರಸಾದ್, ಅರಸಿಕುಮಾರ್, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ರಂಗಾಯಣ :** ಮಾತಿನ ಮನೆ ಕಲಾವಿದರೊಂದಿಗೆ ತಿಂಗಳ ಮಾತುಕತೆ, ಹಿರಿಯ ವೃತ್ತಿ ರಂಗಭೂಮಿ ಕಲಾವಿದೆ ಶ್ರೀಮತಿ ಸರಸ್ವತಿ ಉರುಫ್ ಜುಲೇಖಾ ಬೇಗಂ ಅವರೊಂದಿಗೆ ಮಾತುಕತೆ, ಉದ್ಘಾಟನೆ: ಹಿರಿಯ ಕವಿ ಕೋಟಿಗಾನಹಳ್ಳಿ ರಾಮಯ್ಯ, ಮಾತುಕತೆ ನಡೆಸಿಕೊಡುವವರು: ಕವಿ ಅಬ್ದುಲ್ ರಶೀದ್, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಭೂಮಿಗೀತ ರಂಗಮಂದಿರ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ಭೀಮ್ ಸೇನೆ :** ಗ್ರಾಮ ಶಾಖೆ ಉದ್ಘಾಟನಾ ಕಾರ್ಯಕ್ರಮ, ಸಾನ್ನಿಧ್ಯ : ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಶಾಸಕ ಜಿ.ಡಿ. ಹರೀಶ್‌ಗೌಡ, ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಸಚಿವ ಎನ್. ಮಹೇಶ್, ಸ್ಥಳ: ಮರಟಿಕ್ಯಾತನಹಳ್ಳಿ ಗ್ರಾಮ, ಬೆಳಗ್ಗೆ 10.30ಕ್ಕೆ.

■ **ಅಭಿವೃದ್ಧಿ ಸಿಲ್ಕ್ ಇಂಡಿಯಾ :** ದೀಪಾವಳಿ ಹಬ್ಬದ ಪ್ರಯುಕ್ತ ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ :** ವಜ್ರ ಮಹೋತ್ಸವದ ಸಂಭ್ರಮಾಚರಣೆ ಅಂಗವಾಗಿ ಹಿರಿಯ ರಂಗಕರ್ಮಿ ಸಂತೋಷ್ ಕುಮಾರ್ ಅವರಿಂದ ಪ್ರಸಾದನ ಮತ್ತು ಮುಖವಾಡ ತಯಾರಿಕಾ ಕಾರ್ಯಾಗಾರ, ಸ್ಥಳ: ವಿವಿ ಲಲಿತಕಲಾ ಕಾಲೇಜು, ಬೆಳಗ್ಗೆ 11 ರಿಂದ.

■ **ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) :** 24ನೇ ಮೈಸೂರು ಜಿಲ್ಲಾ ಸಮ್ಮೇಳನ ಬಹಿರಂಗ ಸಭೆ, ಪ್ರಧಾನ ಭಾಷಣ : ಸಂಸದ ಕಾಂ. ವಿ. ಶಿವದಾಸನ್, ಮುಖ್ಯ ಅತಿಥಿಗಳು : ಸಿಪಿಐ ರಾಜ್ಯ ಕಾರ್ಯದರ್ಶಿ ಯು. ಬಸವರಾಜ್, ಸದಸ್ಯ ಹೆಚ್.ಎಸ್. ಸುನಂದ, ಅಧ್ಯಕ್ಷತೆ : ಸಿಪಿಐ, ಮೈಸೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಜಗದೀಶ್ ಸೂರ್ಯ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ನಾಯಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ :** ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ, ಪ್ರತಿಭಾ ಪುರಸ್ಕಾರ, ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಸಿ. ಅನಿಲ್ ಚಿಕ್ಕಮಾದು, ಅಧ್ಯಕ್ಷತೆ : ಸಂಘದ ಅಧ್ಯಕ್ಷ ನಾಗಲಿಂಗಪ್ಪ, ಮಹರ್ಷಿ ವಾಲ್ಮೀಕಿ ಭಾವಚಿತ್ರ ಅನಾವರಣ : ಮಾಜಿ ಜಿಪಂ ಅಧ್ಯಕ್ಷ ಎಸ್.ಸಿ. ಬಸವರಾಜು, ಉಪಸ್ಥಿತರು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜವರೇಗೌಡ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 2.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI 'ಶೋಧ – ಅನುಶೋಧ' ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 8.45 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 9.45ಹಾಸನ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾ ಪ್ರವಾಸೋದ್ಯಮ ಇಲಾಖೆ, ಹಾಸನ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಪಿ.ಎನ್. ಸೇತುರಾಮನ್ ಮತ್ತು ಎಂ.ಪಿ.ಎನ್ ಪೊನ್ನುಸ್ವಾಮಿ– ಯುಗಳ ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ–ಅಂಜನ. ಎನ್, 12.45 ಜನಪದ ಸಂಗೀತ, 1.20 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 1.25 ಭಾವಗೀತೆಗಳು–ಸ್ಟ್ಯಾನ್ಲೀ ಪಾರ್ಕರ್, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ : ಪ್ರತಿಭಾ ಪಲ್ಲವ –ಹಾಡುವ ಪುಟ್ಟ ಪ್ರತಿಭೆ ಗಾನವಿ. ಆರ್ ಪರಿಚಯ, ಪ್ರಸ್ತುತಿ: ಎಂ. ಎಸ್. ಭಾರತಿ, 4.00 ನಾಟಕ 'ಅದಲು ಬದಲು', ರಚನೆ–ಕೆ. ಟಿ. ಗಟ್ಟಿ, ನಿರ್ಮಾಣ–ಡಾ. ಬಿ.ಎಂ. ಶರಬೇಂದ್ರಸ್ವಾಮಿ ಹಾಗೂ ಕಾನ್ಸೆಪ್ಟಾ ಫರ್ನಾಂಡೀಸ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಚಿತ್ರ ಕಲಾವಿದ ಬಸವಣ್ಣಾಚಾರ್ ಅವರೊಂದಿಗೆ ಜಿ.ಕೆ.ರವೀಂದ್ರಕುಮಾರ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಮಂಡ್ಯ ತಾಲೂಕು ಚಾಮಲಾಪುರದ ಕೃಷಿಕ ದಂಪತಿ ಸಿ.ಎಲ್.ವಿವೇಕಾನಂದ ಮತ್ತು ಎನ್. ಎಸ್. ರಮ್ಯಾ, ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಯುವವಾಣಿ–ದೀಪಾವಳಿ ಹಬ್ಬದ ಸಂದರ್ಭದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ, ಪ್ರಸ್ತುತಪಡಿಸುತ್ತಾರೆ : ಮೈಸೂರಿನ ಸವಿಗಾನ ಸಂಗೀತ ಶಾಲೆಯ ವಿದ್ಯಾರ್ಥಿಗಳು. ನಿರ್ದೇಶನ–ಗಾಯತ್ರಿ ಸತ್ಯನಾರಾಯಣ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ರಾಕೇಶ್ ಕುಮಾರ್ ಪಾಠಕ್ – ಹಾಡುಗಾರಿಕೆ

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ–851 ಕಾರ್ಯಕ್ರಮ, ಕಥೆ ಹೇಳುವವರು : ಆಕಾಶವಾಣಿ ಕಲಾವಿದೆ ಮತ್ತು ಬರಹಗಾರ್ತಿ ಅನಿತಾ ಅಶೋಕ್, ಸ್ಥಳ: ಕಲಾಸುರುಚಿ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಗಾನ ವೈದ್ಯಲೋಕ :** ಎಂದೂ ಮರೆಯದ ಹಾಡು–10 ಭಾವಪೂರ್ಣ ಗೀತೆಗಳ ಸಂಗೀತ ಸಂಜೆ, ಉದ್ಘಾಟನೆ : ಸಾಹಿತಿ ಡ. ಟಿ.ಸಿ. ಪೂರ್ಣಿಮಾ, ವಿಶೇಷ ಆಹ್ವಾನಿತರು : ಕಥೆಗಾರ ಹನೂರು ಚೆನ್ನಪ್ಪ, ಅಧ್ಯಕ್ಷತೆ : ಗಾನ ವೈದ್ಯಲೋಕ ಗೌರವಾಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಪ್ರಾಸ್ತಾವಿಕ ನುಡಿ : ಗಾನ ವೈದ್ಯಲೋಕ ಅಧ್ಯಕ್ಷ ಡಾ. ಟಿ. ರವಿಕುಮಾರ್, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಿಕ್ಷಣ ಸಂಸ್ಥೆ ಆವರಣ, ಸಂಜೆ 5ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ :** ಮಹರ್ಷಿ ಶ್ರೀ ನಾಗರಾಜ ಸೂರ್ಯನಾರಾಯಣ ಪಾಂಡೇಜಿ ಅವರ ಸಂಸ್ಮರಣೋತ್ಸವ, ಉದ್ಘಾಟನೆ : ವಿಜಯ ಫೌಂಡೇಷನ್ ಸಂಸ್ಥಾಪಕ ಡಾ. ಬಿ.ಆರ್. ಪೈ, ಗುರುಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗ ಪ್ರಕಾಶ್, ಉಪಸ್ಥಿತರು : ಆಧ್ಯಾತ್ಮಿಕ ಚಿಂತಕ ಮುಕುಂದನ್, ಹಿರಿಯ ಯೋಗಾಚಾರ್ಯ ಎಸ್.ವಿ. ವೆಂಕಟೇಶಯ್ಯ, ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕರಾದ ಡಾ. ಕೆ. ಲೀಲಾಪ್ರಕಾಶ್, ಎನ್. ಶಿವಪ್ರಕಾಶ್, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ :** ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರ 109ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಶ್ರೀ ನಟರಾಜ ಸ್ವಾಮೀಜಿ, ಉದ್ಘಾಟನೆ : ಮೈಸೂರು ಜಿಲ್ಲಾ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಹಿನಕಲ್ ಬಸವರಾಜು, ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಸಮಾಜದ ಅಧ್ಯಕ್ಷೆ ಡಾ. ರತ್ನ ಹಾಲಪ್ಪಗೌಡ, ಪ್ರಾಸ್ತಾವಿಕ ನುಡಿ : ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಮಾಜಿ ವಿಧಾನ ಪರಿಷತ್ ಸದಸ್ಯ ತೋಂಟದಾರ್ಯ ಅವರಿಂದ ರಾಜೇಂದ್ರ ಶ್ರೀಗಳ ಕೊಡುಗೆಗಳ ಬಗ್ಗೆ ಉಪನ್ಯಾಸ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಡಾ. ಎಂ.ಜಿ.ಆರ್. ಅರಸ್, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು ಹಾಸ್ಟೆಲ್ ಸಭಾಂಗಣ, ಸರಸ್ವತಿಪುರಂ, ಸಂಜೆ 5ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ದೇಸಿರಾಜು ಕುಟುಂಬ :** ಡಿ.ವಿ. ನರಸಿಂಹರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮ, ಗೌರವ ಭಾಷಣಕಾರರು : ಪ್ರೊಲೀಡ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ ಮ್ಯಾನೇಜಿಂಗ್ ಪಾರ್ಟನರ್ ಕಂದಸ್ವಾಮಿ ಅನ್‌ಬಳಗನ್, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಗಾನಭಾರತಿ :** ಗಾನಭಾರತಿ ದಿನಾಚರಣೆ ಅಂಗವಾಗಿ ವಿದುಷಿ ಗೀತಾ ಪುಟ್ಟಿ ಅವರಿಂದ ಗಾಯನ, ವಿದುಷಿ ಸಿ.ವಿ. ಶೃತಿ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಮೈಸೂರಿನ ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಕು. ಅನಘ ಭಾರದ್ವಾಜ್‌ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಪಕ್ಕವಾದ್ಯದಲ್ಲಿ ವಿದ್ವಾನ್ ಯಶಸ್ವಿ–ಪಿಟೀಲು, ವಿದ್ವಾನ್ ಡಾ.ವಿ.ಪ್ರಹ್ಲಾದ್–ಮೃದಂಗ, ಸ್ಥಳ: ರಾಮಮಂದಿರದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ

■ **ವೇದಾಂತ ಇನ್ಸ್‌ಟಿಟ್ಯೂಟ್, ಬೆಂಗಳೂರು :** ಬೆಂಗಳೂರು ವೇದಾಂತ ಇನ್ಸ್‌ಟಿಟ್ಯೂಟ್‌ನ ಸಂಸ್ಥಾಪಕ ಆಚಾರ್ಯ ಈಶ್ವರನ್ ಅವರಿಂದ ಭಗವದ್ಗೀತೆಯ ಸಾರ ಕುರಿತು ಇಂಗ್ಲಿಷ್‌ನಲ್ಲಿ ಪ್ರವಚನ, ಸ್ಥಳ: ಪ್ರೊ. ವೈ.ಟಿ. ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 6.45 ರಿಂದ.

■ **ರಂಗವಲ್ಲಿ :** ಮಹಿಳಾ ಏಕವ್ಯಕ್ತಿ ನಾಟಕೋತ್ಸವ, ಉದ್ಘಾಟನೆ : ಚಲನಚಿತ್ರ ನಟಿ ಶ್ರೀಮತಿ ಸುಧಾ ನರಸಿಂಹರಾಜು, ಉಪಸ್ಥಿತರು : ರಂಗಭೂಮಿ ಕಲಾವಿದೆ ಶ್ರೀಮತಿ ಆಶಾರಾಣಿ, ರಂಗವಲ್ಲಿ ಕಾರ್ಯದರ್ಶಿ ಬಿ. ರಾಜೇಶ್, ಖಜಾಂಚಿ ಮಂಜುನಾಥಶಾಸ್ತ್ರಿ, ಶ್ರೀ ವಿದ್ಯಾ ಕಾಮತ್ ಅಭಿನಯಿಸುವ ನಾಟಕ ದೀಪಧಾರಿಣಿ, ನಿರ್ದೇಶನ : ಡಾ. ಶ್ರೀಪಾದ ಭಟ್, ಪಸ್ತುತಿ : ಅನುಭೂತಿ, ಮೈಸೂರು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 26 ಶನಿವಾರ 2024



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 190 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಲೋಕಾಯುಕ್ತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ವಿಚಾರಣೆ

ಮೂರು ಗಂಟೆ ವಿಚಾರಣೆ ಎದುರಿಸಿ ವಾಪಸ್ಸಾದರು: ಲೋಕಾಯುಕ್ತ ಎಸ್ಪಿ



ಮೈಸೂರು ಲೋಕಾಯುಕ್ತ ಕಚೇರಿ

ಮೈಸೂರು, ಅ.25(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) 50:50 ಅನುಪಾತದಡಿ 14 ನಿವೇಶನ ಅಕ್ರಮವಾಗಿ ಮಂಜೂರಾಗಿರುವ ಆರೋಪದ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದ ಮೇರೆಗೆ ಲೋಕಾಯುಕ್ತದಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಆರೋಪಿಯಾಗಿರುವ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರು ಶುಕ್ರವಾರ ಮೈಸೂರಿನ ಲೋಕಾಯುಕ್ತ ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸಿದ್ದಾರೆ. ಇದನ್ನು ಲೋಕಾಯುಕ್ತ ಎಸ್ಪಿ ಉದೇಶ್ ಖಚಿತಪಡಿಸಿದ್ದಾರೆ.

ಈ ಪ್ರಕರಣದ ತನಿಖಾಧಿಕಾರಿಯಾಗಿರುವ ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ನೀಡಿದ ನೋಟಿಸ್ ಆಧರಿಸಿ ಇಂದು ಬೆಳಗ್ಗೆ 10 ಗಂಟೆ ಸುಮಾರಿಗೆ ಕಚೇರಿಗೆ ಆಗಮಿಸಿದ ಪಾರ್ವತಿ ಅವರು ಮಧ್ಯಾಹ್ನ 1 ಗಂಟೆವರೆಗೆ, ಸುಮಾರು 3 ಗಂಟೆಗಳ ಕಾಲ ■6ನೇ ಪುಟಕ್ಕೆ

ಬಂದಿದ್ದೂ ಗೊತ್ತಾಗಿಲ್ಲ... ಹೋಗಿದ್ದೂ ಗೊತ್ತಾಗಿಲ್ಲ....

ಶ್ರೀಮತಿ ಪಾರ್ವತಿಯವರು ಮುಖ್ಯಮಂತ್ರಿಗಳ ಪತ್ನಿಯಾದರೂ ಎಲ್ಲೂ



ಶ್ರೀಮತಿ ಪಾರ್ವತಿ



ಸಿದ್ದರಾಮಯ್ಯ

ಸಾರ್ವಜನಿಕವಾಗಿ ಇದುವರೆಗೂ ಕಾಣಿಸಿಕೊಂಡಿದ್ದಿಲ್ಲ. ಇಂದು ಶ್ರೀಮತಿ ಪಾರ್ವತಿ ಅವರು ಮುಡಾ ನಿವೇಶನ ಹಂಚಿಕೆ ಹಗರಣದ ವಿಚಾರಣೆಗಾಗಿ ಮೈಸೂರು ಲೋಕಾಯುಕ್ತ ಕಚೇರಿಗೆ ಬಂದಿದ್ದು, ಹೋಗಿದ್ದು ಅಲ್ಲಿದ್ದ ಮಾಧ್ಯಮದವರಿಗೆ ಗೊತ್ತೆ ಆಗಿಲ್ಲ. ಮುಡಾ ಹಿಂದಿನ ಆಯುಕ್ತರಾದ ಟಿ.ಬಿ.ನಟೇಶ್ ಮತ್ತು ಜಿ.ಟಿ.ದಿನೇಶ್ ಕುಮಾರ್ ಇಂದು ಲೋಕಾಯುಕ್ತ ಕಚೇರಿಗೆ ವಿಚಾರಣೆಗಾಗಿ ಹಾಜರಾಗುತ್ತಾರೆ ಎಂಬ ನಂಬಲರ್ಹ ಮಾಹಿತಿ ಆಧರಿಸಿ ಮಾಧ್ಯಮದವರ ದಂಡು ಬೆಳಗ್ಗೆಯಿಂದಲೇ ಲೋಕಾಯುಕ್ತ ಕಚೇರಿ ಎದುರು ಠಿಕಾಣಿ ಹೂಡಿತ್ತು. ಅವರ ಕ್ಯಾಮರಾ ಕಣ್ಣಲ್ಲಿ ಸೆರೆ ಹಿಡಿಯಲು ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್‌ಗಳು ಹಾಗೂ ಅವರನ್ನು ಮಾತನಾಡಿಸಲು ದೃಶ್ಯ ಮಾಧ್ಯಮದ ವರದಿಗಾರರು ಲೋಗೋ ಹಿಡಿದು ಮಧ್ಯಾಹ್ನದವರೆಗೂ ಚಾತಕ ಪಕ್ಷಿಯಂತೆ ಕಾಯುತ್ತಿದ್ದರು. ಕೊನೆಗೂ ಮುಡಾದ ಹಿಂದಿನ ಇಬ್ಬರು ಆಯುಕ್ತರು ಬರಲಿಲ್ಲ. ವಿಚಿತ್ರವೆಂದರೆ ಬೆಳಗ್ಗೆ 10 ಗಂಟೆಗೆ ಸಿಎಂ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರು ಲೋಕಾಯುಕ್ತ ಕಚೇರಿಗೆ ಆಗಮಿಸಿ, 3 ಗಂಟೆ ನಂತರ ಹೊರಹೋದರು ಎಂಬ ವಿಚಾರ ಮಾಧ್ಯಮದವರಿಗೆ ವಿಶ್ವಾಸನೀಯ ಮೂಲಗಳಿಂದ ತಿಳಿದು ಬಂತು. ನಂತರ ಲೋಕಾಯುಕ್ತ ಎಸ್ಪಿ ಅವರನ್ನು ಸಂಪರ್ಕಿಸಿದಾಗ ಅದು ಖಚಿತವಾಯಿತು. ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಲೋಕಾಯುಕ್ತ ಕಚೇರಿ ಮುಂದೆಯೇ ಕಾಯುತ್ತಿದ್ದರೂ ಪಾರ್ವತಿ ಅವರು ಬಂದ ಸುಳಿವೂ ಸಿಗದೇ ಹೋಗಿದ್ದೂ ಅಚ್ಚರಿ ಸಂಗತಿ.

ಚನ್ನಪಟ್ಟಣ ಉಪಚುನಾವಣೆ: ಎನ್‌ಡಿಎ ಅಭ್ಯರ್ಥಿ

ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ

ಬಿಜೆಪಿ, ಜೆಡಿಎಸ್ ಕಾರ್ಯಕರ್ತರ ಮಹಾ ಮೆರವಣಿಗೆ



ಚನ್ನಪಟ್ಟಣ ಉಪಚುನಾವಣೆಗೆ ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ನಿಖಿಲ್ ಪತ್ನಿ ರೇವತಿ, ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಸಿಎಂ ಸದಾನಂದಗೌಡ, ಸಂಸದ ಬಿ.ವೈ.ರಾಘವೇಂದ್ರರನ್ನು ಚಿತ್ರದಲ್ಲಿ ಕಾಣಬಹುದು.

ಬೆಂಗಳೂರು, ಅ.25 (ಕೆಎಂಶಿ)–ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಮೈತ್ರಿ ಅಭ್ಯರ್ಥಿಯಾಗಿ ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಆಯ್ಕೆ ಬಯಸಿ ಇಂದು ನಾಮಪತ್ರ ಸಲ್ಲಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಮುಖಂಡರ ಜೊತೆಗೂಡಿ ಅದ್ಧೂರಿ ಮೆರವಣಿಗೆಯಲ್ಲಿ ತೆರಳಿ ನಿಖಿಲ್ ನಾಮಪತ್ರ ಸಲ್ಲಿಸಿದರು. ಇದಕ್ಕೂ ಮುನ್ನ ತಮ್ಮ ತಾತ ಹೆಚ್.ಡಿ. ದೇವೇಗೌಡ ಹಾಗೂ ಕುಟುಂಬ ಸದಸ್ಯರೊಂದಿಗೆ ನಗರದ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು.

ಅಲ್ಲಿಂದ ತಮ್ಮ ತಂದೆ ಕುಮಾರಸ್ವಾಮಿ ಹಾಗೂ ಪತ್ನಿ ಜೊತೆಗೂಡಿ ಚನ್ನಪಟ್ಟಣದ ಕೆಂಗಲ್ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಬಿಜೆಪಿ ಹಿರಿಯ ಮುಖಂಡರಾದ ಡಿ.ವಿ.ಸದಾನಂದಗೌಡ, ಆರ್.ಅಶೋಕ್, ಡಾ.ಅಶ್ವತ್ಥನಾರಾಯಣ, ಸಂಸದರಾದ ಡಾ.ಕೆ.ಸುಧಾಕರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತಿತರ ಗಣ್ಯರ ಜೊತೆ ಚನ್ನಪಟ್ಟಣದ ಹೊರವಲಯದ ಶೇರ್ವಾ ವೃತ್ತದಿಂದ ಜನಸಾಗರದೊಂದಿಗೆ ಬೃಹತ್ ಮೆರವಣಿಗೆಯಲ್ಲಿ ತೆರಳಿ ಚುನಾವಣಾಧಿಕಾರಿಯೂ ಆದ ತಹಸೀಲ್ದಾರ್ ಕಚೇರಿ ತಲುಪಿದರು. ರೋಡ್ ಶೋದಲ್ಲಿ ಜನಸಾಗರವೇ ಬಂದಿದ್ದರಿಂದ ಶೇರ್ವಾ ವೃತ್ತದಿಂದ ತಹಸೀಲ್ದಾರ್ ಕಚೇರಿ ಮುಟ್ಟಲು ಒಂದು ತಾಸಿಗೂ ಹೆಚ್ಚು ಸಮಯ ಹಿಡಿಯಿತು. ನಂತರ ನಿಖಿಲ್ ಅವರು, ಸಂಸದ ಬಿ.ವೈ.ರಾಘವೇಂದ್ರ, ಸದಾನಂದ ಗೌಡ, ಕುಮಾರಸ್ವಾಮಿ ಹಾಗೂ ಪತ್ನಿ ಜೊತೆ ತೆರಳಿ ನಾಮಪತ್ರ ಸಲ್ಲಿಸಿದರು.

ಬಿಜೆಪಿ ತೊರೆದು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸಿ.ಪಿ.ಯೋಗೇಶ್ವರ್, ಗುರುವಾರವಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂಡಿ ಅದ್ಧೂರಿ ಮೆರವಣಿಗೆಯಲ್ಲಿ ತೆರಳಿ ನಾಮಪತ್ರ ಸಲ್ಲಿಸಿದ್ದರು.

ಇಂದು ಎನ್‌ಡಿಎ ಮೈತ್ರಿಕೂಟದ ಕಾರ್ಯಕರ್ತರು, ಅಭ್ಯರ್ಥಿ ಹಾಗೂ ರಾಜ್ಯ ನಾಯಕರನ್ನು ಜಯಘೋಷದೊಂದಿಗೆ ಬೃಹತ್ ಮೆರವಣಿಗೆಯಲ್ಲಿ ಕೊಂಡೊಯ್ದರು. ನಾಮಪತ್ರ ಸಲ್ಲಿಕೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ವಿ.ಸದಾನಂದಗೌಡ ಹಾಗೂ ಆರ್.ಅಶೋಕ್, ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ವಿರುದ್ಧ ಕಿಡಿಕಾರಿದರು.

ಸ್ವಾರ್ಥಕ್ಕಾಗಿ ರಾಜಕೀಯ ಮಾಡುವ ವ್ಯಕ್ತಿ ಯೋಗೇಶ್ವರ್ ಎಂದು ಬಣ್ಣಿಸಿದ ಗೌಡರು, ಮುಂದಿನ ■6ನೇ ಪುಟಕ್ಕೆ

ಭೂ ಒತ್ತುವರಿ: ಕುಮಾರಸ್ವಾಮಿಗೆ ಸಂಕಷ್ಟ

ಬೆಂಗಳೂರು, ಅ.25–ರಾಮನಗರದ



ಬಿಡದಿಯ ಕೇತಗಾನಹಳ್ಳಿಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮತ್ತಿತರರು ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆ ಎನ್ನಲಾದ ಪ್ರಕರಣ ಸಂಬಂಧ ಸಮಗ್ರ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಸ್ತೃತ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತರು ಹೊರಡಿಸಿರುವ ಆದೇಶ ಜಾರಿಗೊಳಿಸುವಂತೆ ಹೈಕೋರ್ಟ್ ಈ ಹಿಂದೆ ಆದೇಶಿಸಿತ್ತು. ಈ ಆದೇಶ ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ■6ನೇ ಪುಟಕ್ಕೆ

ಕರ್ನಾಟಕದಲ್ಲಿ ಕನ್ನಡ ಬೋರ್ಡ್ ಹಾಕಲೇಬೇಕು; ವಿನಾಯಿತಿ ಇಲ್ಲ





ಬೆಂಗಳೂರು, ಅ.25– ವಾಣಿಜ್ಯ, ವ್ಯವಹಾರ ನಡೆಸುವ ಅಂಗಡಿಗಳ ಮುಂದಿನ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು ಎಂದು ಬಿಬಿಎಂಪಿ ಸುತ್ತೋಲೆ ಪ್ರಶ್ನಿಸಿ ಪ್ರತಿಷ್ಠಿತ ವಾಣಿಜ್ಯ ಸಂಸ್ಥೆಗಳು ಅರ್ಜಿಯನ್ನು ತುರ್ತು ವಿಚಾರಣೆಗೆ ನಿಗದಿಪಡಿಸಲು ನಿರಾಕರಿಸಿರುವ ಹೈಕೋರ್ಟ್, ನೀವು ಕರ್ನಾಟಕದಲ್ಲಿದ್ದ ಮೇಲೆ ಸೂಚನಾ ಫಲಕಗಳನ್ನು ಕನ್ನಡದಲ್ಲಿ ಪ್ರದರ್ಶಿಸಲೇಬೇಕು ಎಂದು ಅರ್ಜಿದಾರ ಸಂಸ್ಥೆಗಳ ಪರ ವಕೀಲರಿಗೆ ಮೌಖಿಕವಾಗಿ ಹೇಳಿದೆ.

ಈ ಸಂಬಂಧ ರಿಟೇಲರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಆದಿತ್ಯ ಬಿರ್ಲಾ ಫ್ಯಾಷನ್ ಅಂಡ್ ರೀಟೇಲ್ ಲಿಮಿಟೆಡ್, ಟೈಟಾನ್ ಕಂಪನಿ ಲಿಮಿಟೆಡ್, ಅಡಿಡಾಸ್ ಇಂಡಿಯಾ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್ ಸೇರಿದಂತೆ 24 ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ಅರ್ಜಿದಾರ ಸಂಸ್ಥೆಗಳ ಪರ ವಕೀಲರು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರ ಪೀಠದ ಮುಂದೆ ಹಾಜರಾಗಿ, ಅರ್ಜಿಯನ್ನು ತುರ್ತು ■6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಯಶಸ್ವಿ ಆಪರೇಷನ್ ಹಸ್ತ

ಯೋಗೇಶ್ವರ್ ಚನ್ನಪಟ್ಟಣ 'ಕೈ' ಅಭ್ಯರ್ಥಿ!

- ಇದು ಮೂರು ತಿಂಗಳ ರಹಸ್ಯ ಕಾರ್ಯಾಚರಣೆ
- ಕೆಪಿಸಿಸಿ ಅಧ್ಯಕ್ಷರ ಅರಿವಿಗೂ ಬಾರದಂತೆ ಸಿಎಂ ರಾಜಕೀಯ ತಂತ್ರ
- ಕೇಂದ್ರ ಸಚಿವ ಕುಮಾರಸ್ವಾಮಿಗೆ ಮುಖಭಂಗ ಮಾಡುವ ಟಾರ್ಗೆಟ್

ಬೆಂಗಳೂರು, ಅ.25(ಕೆಎಂಶಿ)– ಉಪಮುಖ್ಯಮಂತ್ರಿ



ಡಿ.ಕೆ.ಶಿವಕುಮಾರ್ ಸಹೋದರರ ವಿರೋಧದ ನಡುವೆಯೂ ಸಿ.ಪಿ. ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಕರೆತಂದು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಶಸ್ವಿಯಾಗಿದ್ದಾರೆ. ಶಿವಕುಮಾರ್ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಎಷ್ಟು ವಿರೋಧಿಯೋ ಅಷ್ಟೇ ಸಮನಾಗಿ ಯೋಗೇಶ್ವರ್ ಅವರನ್ನೂ ವಿರೋಧಿಸುತ್ತಾರೆ. ಕುಮಾರಸ್ವಾಮಿ ಅವರನ್ನು ನಂಬಿದರೂ, ಯೋಗೇಶ್ವರ್ ಅವರನ್ನು ರಾಜಕೀಯವಾಗಿ ನಂಬಲು ಶಿವಕುಮಾರ್ ಸಹೋದರರು ಸಿದ್ಧರಿಲ್ಲ. ಆದರೆ, ಸಿದ್ದರಾಮಯ್ಯ ಅವರಿಗೆ ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಮುಖಭಂಗ ಮಾಡಬೇಕೆಂಬುದೇ ಟಾರ್ಗೆಟ್.

ಈ ಗುರಿ ಸಾಧಿಸಲು ಚನ್ನಪಟ್ಟಣದಲ್ಲಿ ಸಮರ್ಥ ಅಭ್ಯರ್ಥಿಗಳು ಇಲ್ಲದ ಕಾರಣ ಕಳೆದ ಎರಡು ತಿಂಗಳ ಹಿಂದಿನಿಂದಲೂ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಕರೆತಂದು ಉಪಚುನಾವಣಾ ಕಣಕ್ಕಿಳಿಸಲು ತೆರೆಮರೆಯಲ್ಲಿ ಕಸರತ್ತು ನಡೆದಿದ್ದವು. ಕಳೆದ ತಿಂಗಳು ಸಚಿವ ಜಾರ್ಜ್ ನಿವಾಸದಲ್ಲಿ ಮುಖ್ಯಮಂತ್ರಿ ಅವರು, ಯೋಗೇಶ್ವರ್ ಅವರೊಂದಿಗೆ ಮುಖಾಮುಖಿ ಚರ್ಚೆ ನಡೆಸಿ, ಅಂದೇ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದರು. ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಉಪಚುನಾವಣೆಯಲ್ಲಿ ಗೆದ್ದು ಬನ್ನಿ, ನಿಮ್ಮನ್ನು ಬರುವ ಜನವರಿಯಲ್ಲಿ ಮಂತ್ರಿ ಮಾಡುವುದಾಗಿ ಭರವಸೆ ನೀಡಿದ್ದಲ್ಲದೆ, ಚುನಾವಣೆಯಲ್ಲಿ ಗೆಲ್ಲಿಸುವುದೂ ನನ್ನ ಹೊಣೆ ಎಂದಿದ್ದರು.


ಈ ಯಾವ ಬೆಳವಣಿಗೆಗಳೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಗಮನಕ್ಕೆ ಬಂದಿರಲಿಲ್ಲ. ಅವರಿಗೆ ಚನ್ನಪಟ್ಟಣ ಕ್ಷೇತ್ರದಲ್ಲಿ ಪಕ್ಷದ ಶಕ್ತಿ ಏನು ಎಂಬುದು ತಿಳಿದಿತ್ತು. ಮೊದಲು ತಮ್ಮ ಸಹೋದರ ಡಿ.ಕೆ.ಸುರೇಶ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಸಿ ಕ್ಷೇತ್ರದಲ್ಲಿ ಹಲವು ಬಾರಿ ಸುತ್ತಾಟವನ್ನೂ ನಡೆಸಿದ್ದರು. ನಂತರ ತಮ್ಮ ನಿಲುವಿನಿಂದ ಹಿಂದೆ ಸರಿದು, ದೂರದ ಸಂಬಂಧಿ ಹಾಗೂ ಕೆಪಿಎಸ್‌ಸಿ ಮಾಜಿ ಸದಸ್ಯ ರಘುನಂದ ರಾಮಣ್ಣ ಅವರನ್ನು ಕಣಕ್ಕಿಳಿಸುವ ತೀರ್ಮಾನ ■6ನೇ ಪುಟಕ್ಕೆ

ವಿದೇಶಿ ಪ್ರವಾಸಿಗರಿಗೆ ಅರಮನೆ ಪ್ರವೇಶ ಶುಲ್ಕ ಭಾರೀ ಹೆಚ್ಚಳ; ತೀವ್ರ ಆಕ್ಷೇಪ

- ಏಕಾಏಕಿ 100 ರಿಂದ 1000 ರೂ.ಗೆ ಶುಲ್ಕ ಹೆಚ್ಚಿಸಿರುವುದಕ್ಕೆ ಪ್ರವಾಸೋದ್ಯಮಕ್ಕೆ ಒತ್ತಾಸೆಯಾಗಿರುವ ಉದ್ಯಮಿಗಳ ವಿಷಾದ
- ವಿದೇಶಗಳಲ್ಲಿ ರಿಯಾಯ್ತಿ ನೀಡಿ ದೇಶದ ಪ್ರವಾಸೋದ್ಯಮ ಬೆಳವಣಿಗೆಗೆ ಸಹಕರಿಸಿದರೆ ನಮ್ಮಲ್ಲಿ ತದ್ವಿರುದ್ಧ ನಿಲುವು; ಖಂಡನೆ

ಮೈಸೂರು, ಅ.25(ಜಿಎ)–ಮೈಸೂರು ಅರಮನೆ ಪ್ರವೇಶ ಶುಲ್ಕ ಪರಿಷ್ಕರಿಸಿ, ವಿದೇಶಿ ಪ್ರವಾಸಿಗರಿಗೆ 1,000 ರೂ. ನಿಗದಿಪಡಿಸಿರುವುದು ಮೈಸೂರು ಪ್ರವಾಸೋದ್ಯಮ ಬೆಳವಣಿಗೆಗೆ ಕಂಟಕಪ್ರಾಯ ಎಂದು ಆಕ್ರೋಶ ವ್ಯಕ್ತವಾಗಿದೆ. ವಿದೇಶಿ ಪ್ರವಾಸಿಗರೂ ಇದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ಇಂದಿನಿಂದ (ಅ.25) ಅರಮನೆ ಪರಿಷ್ಕೃತ ಪ್ರವೇಶ ಶುಲ್ಕವನ್ನು ಪ್ರಕಟಿಸಿದ್ದು, ವರಹಾ ಗೇಟ್ ಮುಂಭಾಗದ ಟಿಕೆಟ್ ಕೌಂಟರ್ ಬಳಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪರಿಷ್ಕೃತ ದರದ ಬೋರ್ಡ್‌ಗಳನ್ನು ಅಳವಡಿಸಿರುವುದು ಪ್ರವಾಸಿಗರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಈ ಹಿಂದೆ (ಜಿಎಸ್‌ಟಿ ಒಳಗೊಂಡಂತೆ) ದೇಶೀಯ ವಯಸ್ಕರಿಗೆ 100 ರೂ., 10ರಿಂದ 18 ವರ್ಷದೊಳಗಿನ ಮಕ್ಕಳಿಗೆ 50 ರೂ., ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿಯಲ್ಲಿ 30 ರೂ., ಹಾಗೂ ವಿದೇಶಿ ಪ್ರವಾಸಿಗರಿಗೆ 100 ರೂ. ದರ ನಿಗದಿಪಡಿಸಲಾಗಿತ್ತು. ಆದರೆ ಈಗ ಅರಮನೆ ಮಂಡಳಿ ಸಭೆಯ ತೀರ್ಮಾನದಂತೆ ಪರಿಷ್ಕೃತ ಪ್ರವೇಶ ಶುಲ್ಕ (ಜಿಎಸ್‌ಟಿ ಒಳಗೊಂಡಂತೆ) ವಯಸ್ಕರಿಗೆ 120 ರೂ., 10ರಿಂದ 18 ವರ್ಷದೊಳಗಿನ ಮಕ್ಕಳಿಗೆ 70 ರೂ., ಶೈಕ್ಷಣಿಕ ■6ನೇ ಪುಟಕ್ಕೆ





ಅರಮನೆಯ ವರಹಾ ದ್ವಾರದ ಮುಂಭಾಗ ಟಿಕೆಟ್ ಕೌಂಟರ್ ಬಳಿ ಪ್ರವಾಸಿಗರ ಸರದಿ ಸಾಲು. ಪರಿಷ್ಕೃತ ಶುಲ್ಕದ ಫಲಕವನ್ನು ವಿದೇಶಿ ಪ್ರವಾಸಿಗರು ಗಮನಿಸುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಸರ್ಕಾರ ಇಂತಹ ನಿರ್ಧಾರ ಕೈಗೊಳ್ಳಬಾರದಿತ್ತು

ಅರಮನೆ ಮಂಡಳಿ ನಿರ್ಧಾರವನ್ನು ಖಂಡಿಸಿರುವ ಮೈಸೂರು ಜಿಲ್ಲಾ ಹೋಟೆಲ್



ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರಲ್ಲಿ ಈಗಾಗಲೇ ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆ ಆಗುತ್ತಿದೆ. ಈ ನಡುವೆ ಅರಮನೆ ಮಂಡಳಿ ವಿದೇಶಿಗರಿಗೆ ಪ್ರವೇಶ ದರ 100 ರಿಂದ 1,000 ರೂ., ಹೆಚ್ಚಳ ಮಾಡಿದ್ದು, ಸರಿಯಲ್ಲ. ಇದರಿಂದ ವಿದೇಶಿಗರು ಪ್ರವಾಸಿತಾಣಗಳತ್ತ ಸುಳಿಯದೇ ಇರುವ ಸಾಧ್ಯತೆ ಇದೆ. ಸರ್ಕಾರವೂ ಇಂತಹದ್ದಕ್ಕೆ ಅನುಮತಿ ನೀಡಬಾರದಾಗಿತ್ತು. ವಿದೇಶಿ ಪ್ರವಾಸಿಗರ ಪ್ರವೇಶ ದರವನ್ನು ಬರೋಬ್ಬರಿ 900 ರೂ. ಹೆಚ್ಚಳ ಮಾಡುವ ಬದಲು 100 ರಿಂದ 200 ರೂ. ಮಾಡಬಹುದಿತ್ತು ಎಂದು ಆಗ್ರಹಿಸಿದ್ದಾರೆ.

ಏಕಾಏಕಿ ಅರಮನೆ ಪ್ರವೇಶ ದರ ಏರಿಕೆ ಖಂಡನೀಯ

ಮೈಸೂರು ಅರಮನೆ ವೀಕ್ಷಿಸಲು ಬರುವ ವಿದೇಶಿಯರಿಗೆ 100 ರೂ. ಇದ್ದ ಪ್ರವೇಶ ದರ ಈಗ 1000 ರೂ. ಆಗಿದೆ. ಮೈಸೂರು ಅರಮನೆ ಮಂಡಳಿಯ ಈ ನಿರ್ಧಾರವನ್ನು ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ತೀವ್ರವಾಗಿ ಖಂಡಿಸುತ್ತದೆ.



ಟ್ರಾವೆಲ್ ಏಜೆಂಟ್‌ಗಳಾದ ನಾವು ಹಲವು ತಿಂಗಳುಗಳ ಮುನ್ನವೇ ವಿದೇಶಿಯರ ಬಳಿ ಹಳೇ ದರಕ್ಕೆ ಬುಕ್ಕಿಂಗ್ ಪಡೆದು, ಟೂರ್ ಪ್ಲಾನ್ ಮಾಡಿರುತ್ತೇವೆ. ಅರಮನೆ ಪ್ರವೇಶಕ್ಕೂ ಹಳೆಯ ದರಕ್ಕೆ ಅನುಗುಣವಾಗಿ ಹಣ ಪಡೆದಿರುತ್ತೇವೆ. ಹೀಗೆ ಏಕಾಏಕಿ ಟಿಕೆಟ್ ದರ ಏರಿಕೆ ಮಾಡಿದರೆ ನಾವು ನಮ್ಮ ಗ್ರಾಹಕರಿಗೆ ಏನು ಉತ್ತರ ನೀಡಬೇಕು? ಇದರಿಂದ ಆಗುವ ನಷ್ಟವನ್ನು ನಾವು ಹೇಗೆ ಭರಿಸಬೇಕು? ಈ ರೀತಿ ನಿರ್ಧಾರ ಕೈಗೊಳ್ಳುವ ಕನಿಷ್ಠ ಆರು ತಿಂಗಳ ಮುನ್ನ ಮಾಹಿತಿ ನೀಡಬೇಕಿತ್ತು. ಈ ರೀತಿ ಇದ್ದಕ್ಕಿದ್ದಂತೆ ದರ ಏರಿಕೆ ಮಾಡಿರುವುದು ಖಂಡನೀಯ. ಈ ಬಗ್ಗೆ ಮರುಪರಿಶೀಲನೆ ನಡೆಸಿ, ಸೂಕ್ತ ನಿರ್ಧಾರ ಕೈಗೊಳ್ಳಬೇಕು. –ಬಿ.ಎಸ್.ಪ್ರಶಾಂತ್, ಅಧ್ಯಕ್ಷರು, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್

ಪ್ರವಾಸಿಗರಿಗೆ ರಿಯಾಯ್ತಿ

ವಿದೇಶಿಯರಿಗೆ 100 ರೂ. ಇದ್ದ ಅರಮನೆ ಪ್ರವೇಶ ದರವನ್ನು 1,000



ರೂ. ಮಾಡಿರುವುದು ತಪ್ಪು ನಿರ್ಧಾರ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ ಪ್ರತಿಕ್ರಿಯಿಸಿದ್ದಾರೆ. ಸಿಂಗಾಪುರದ ಮೃಗಾಲಯ ಅಥವಾ ಅಲ್ಲಿನ ಪ್ರಖ್ಯಾತ ಸ್ಥಳಗಳಲ್ಲಿ ಸ್ಥಳೀಯರಿಗೆ ಶೇಕಡ ಶೇ.10 ರಿಯಾಯಿತಿ ನೀಡುತ್ತಾರೆ. ಆಸ್ಟ್ರೇಲಿಯಾದ ಪ್ರಖ್ಯಾತ ಸ್ಥಳಗಳಿಗೆ ಭೇಟಿ ನೀಡಿದರೆ, ಪ್ರವಾಸಿಗರಿಗೆ ರಿಯಾಯಿತಿ ಇದೆ. ಆದರೆ, ದುರದೃಷ್ಟಕರ ಸಂಗತಿ ಎಂದರೆ ಮೈಸೂರಲ್ಲಿ ಅದಕ್ಕೆ ತದ್ವಿರುದ್ಧವಾಗಿ ಯೋಚನೆ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತ ಪಡಿಸಿದ್ದಾರೆ. ವಿದೇಶಿ ಪ್ರವಾಸಿಗರು ಮೈಸೂರಿಗೆ ಬಂದಾಗ ಕೇವಲ ಅರಮನೆಗೆ ಮಾತ್ರ ಹೋಗಲ್ಲ. ಮೈಸೂರಿನ ಸುತ್ತಮುತ್ತಲ ಪ್ರವಾಸಿ ಕೇಂದ್ರಗಳಿಗೂ ಆದಾಯ ಬರುತ್ತೆ ಆದ್ದರಿಂದ ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶಿಸಿ ಪ್ರವೇಶ ದರ ಏರಿಕೆ ಕೈಬಿಡಬೇಕು. ಹೊರ ದೇಶಗಳಲ್ಲಿ ಇರುವಂತೆ ಪ್ರವಾಸಿ ಸ್ನೇಹಿ ದರ ನಿಗದಿಗೆ ಯೋಚನೆ ಮಾಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇದರೊಂದಿಗೆ ಸ್ಥಳೀಯ ಮತ್ತು ಸಾಮಾನ್ಯ ಪ್ರವಾಸಿಗರ ಶುಲ್ಕ ಹೆಚ್ಚಳ ಮಾಡಿರುವುದಕ್ಕೂ ಪ್ರವಾಸಿಗರು ಬೇಸರ ವ್ಯಕ್ತ ಪಡಿಸಿ, ಈಗ ಅರಮನೆ ಶುಲ್ಕ ಪರಿಷ್ಕರಣೆ ಅಗತ್ಯವಿರಲಿಲ್ಲ ಎಂದಿದ್ದಾರೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಹೇಗಿದ್ದೀರಿ? ಕುಡಿಯೋದನ್ನು ಬಿಟ್ಟಿದ್ದೀರೋ ಇಲ್ಲವೋ?

ರೋಗಿ : ಈಗ ಕುಡಿಯೋದನ್ನ ಬಿಟ್ಟಿದ್ದೀನಿ ಡಾಕ್ಟ್ರೆ, ಆದ್ರೆ, ಯಾರಾದ್ರೂ ಜಾಸ್ತಿ ಫೋರ್ಸ್ ಮಾಡಿದ್ರೆ ಕುಡೀತೀನಿ ಅಷ್ಟೇ.

ಡಾಕ್ಟರ್ : ಸೂಪರ್... ನಿಮ್ ಜೊತೆ ಇದಾರಲ್ಲ ಇವರು ಯಾರು? ನಿಮ್ಮ ತಮ್ಮನಾ?

ರೋಗಿ : ನಂಗೆ ಕುಡಿಯೋದಕ್ಕೆ ಫೋರ್ಸ್ ಮಾಡೋಕೆ ಅಂತ ನಾನೇ ಇವನನ್ನು ಇಟ್ಟುಕೊಂಡಿದ್ದೀನಿ ಸಾರ್.

ಮೈಸೂರು ಮಿತ್ರ

ಶನಿವಾರ, 26 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಬ್ಬರ ಮನ ನೋಯಿಸಲು ನಿಮಿಷ ಸಾಕು. ಆದರೆ, ಆ ನೊಂದ ಮನಸ್ಸನ್ನು ಸರಿಪಡಿಸಲು ವರ್ಷಗಳೇ ಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತೊಟ್ಟಿಲ ತೂಗುವ ಕೈ ದೇಶವನ್ನು ಆಳಬಲ್ಲದು

ನಿಮ್ಮ ಪತ್ರಗಳು

ಭಾರತ–ಚೀನಾ ದೇಶಗಳ ನಡುವಿನ ಮಾತುಕತೆ ಆಶಾದಾಯಕ

ಮಾನ್ಯರೆ,

ರಷ್ಯಾದಲ್ಲಿ ನಡೆದ ಬ್ರಿಕ್ಸ್ ಶೃಂಗ ಸಭೆ ವೇಳೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಜತೆ ಪ್ರಧಾನಿ ನರೇಂದ್ರ ಮೋದಿಯವರು ಮಹತ್ವದ ಮಾತುಕತೆ ನಡೆಸಿರುವುದು ಆಶಾದಾಯಕ ಬೆಳವಣಿಗೆ. ಗಡಿಯಲ್ಲಿ ಶಾಂತಿ, ಪರಸ್ಪರ ನಂಬಿಕೆ ಮತ್ತು ಗೌರವದಿಂದ ಇದ್ದಾಗ ಮಾತ್ರ ಎರಡೂ ದೇಶಗಳ ನಡುವೆ ಸ್ನೇಹ ಸಂಬಂಧ ಮುಂದುವರಿಯಲು ಸಾಧ್ಯ. ಈ ಅರಿವನ್ನು ನೆರೆಯ ಚೀನಾ ರಾಷ್ಟ್ರಕ್ಕೆ ಭಾರತ ಮನವರಿಕೆ ಮಾಡಿರುವುದು ಶ್ಲಾಘನೀಯ.

ನಮ್ಮ ಭಾರತ ಹಾಗೂ ಚೀನಾ ನಡುವೆ ಹಲವಾರು ಸಮಸ್ಯೆಗಳಿವೆ. ಹೀಗಿರುವಾಗ ಉಭಯ ದೇಶಗಳ ನಡುವೆ ಪರಸ್ಪರ ವಿಶ್ವಾಸ, ಗೌರವ ಮತ್ತು ಸಂವೇದನಾಶೀಲತೆಯಂತ ದ್ವಿಪಕ್ಷೀಯ ಬಾಂಧವ್ಯಗಳಿಗೆ ಮಾರ್ಗದರ್ಶಿ ಸೂತ್ರವನ್ನು ಉಭಯ ದೇಶಗಳು ಭಿನ್ನಾಭಿಪ್ರಾಯಗಳನ್ನು ಮರೆತು ವಿವಾದಗಳನ್ನು ಸೂಕ್ತವಾಗಿ ನಿಭಾಯಿಸುವುದು ಅಗತ್ಯವೆಂದು ಪ್ರತಿಪಾದಿಸಿರುವುದು ಎರಡು ದೇಶಗಳ ಮಟ್ಟಿಗೆ ಮಹತ್ವದ ಮುನ್ನಡೆಯಾಗಿದೆ. ಉಭಯ ದೇಶಗಳು ಎಂದೂ ಸಹ ಶಾಂತಿ ಮತ್ತು ನೆಮ್ಮದಿಯನ್ನು ಹಾಳು ಮಾಡಲು ಅವಕಾಶ ಕೊಡಬಾರದು. ಭಾರತ–ಚೀನಾ ಸಂಬಂಧ ಜಾಗತಿಕ ಶಾಂತಿ ಮತ್ತು ಸ್ಥಿರತೆಗೆ ಮುನ್ನುಡಿಯಾಗಬೇಕು. ವಿವಾದವನ್ನು ಬಗೆಹರಿಸುವಲ್ಲಿ ಮತ್ತು ಗಡಿ ಭಾಗಗಳಲ್ಲಿ ಶಾಂತಿ ನೆಮ್ಮದಿ ನೆಲೆಸುವಂತಾಗುವಲ್ಲಿ ಭಾರತ–ಚೀನಾ ದೇಶಗಳು ಸದಾ ಶ್ರಮಿಸಬೇಕಿದೆ. ಈ ನಿಟ್ಟಿನಲ್ಲಿ ತಮ್ಮ ದೇಶದ ಪ್ರಧಾನಿಗಳಾದ ಮೋದಿಯವರು ನೆರೆಯ ಚೀನಾ ದೇಶದೊಂದಿಗಿನ ಬಾಂಧವ್ಯದ ವೃದ್ಧಿಗಾಗಿ ಮಾತುಕತೆ ನಡೆಸಿರುವುದು ಪ್ರಸಂಶನೀಯ ಸಂಗತಿಯಾಗಿದೆ. ಅಲ್ಲದೇ ಚೀನಾ ಎಷ್ಟೋ ಬಾರಿ ತಾನು ಹೇಳಿದಂತೆ ನಡೆದುಕೊಂಡಿಲ್ಲ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಆದ್ದರಿಂದ ಚೀನಾ ರಾಷ್ಟ್ರದ ಹೆಜ್ಜೆಗಳನ್ನು ಭಾರತ ಎಚ್ಚರಿಕೆಯಿಂದಲೇ ಗಮನಿಸಿ, ಮುಂದಡಿ ಇಡುವುದು ಕೂಡ ಹೆಚ್ಚು ಸೂಕ್ತ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಅನ್ಯಾಯದ ಪರಮಾವಧಿ !

ಮಾನ್ಯರೆ,

ಅರಮನೆ ಆಡಳಿತ ಮಂಡಲಿ ಅರಮನೆಯ ಪ್ರವೇಶ ದರಗಳನ್ನು ಹೆಚ್ಚಿಸಿ ಆದೇಶ ಮಾಡಿದೆ. ಈಗಿರುವ ದರಗಳೇ ಹೆಚ್ಚಿನದಾಗಿದ್ದು ಪ್ರವಾಸಿಗರು ಇನ್ನೂ ಹೆಚ್ಚು ಹಣ ನೀಡಿ ಅರಮನೆಯನ್ನು ನೋಡುವುದು ಕಷ್ಟಸಾಧ್ಯವಾಗುತ್ತದೆ. ಅದರಲ್ಲೂ ವಿದೇಶ ಪ್ರವಾಸಿಗರಿಗೆ ರೂ.1000 ದರ ವಿಧಿಸಿರುವುದು ಅನ್ಯಾಯದ ಪರಮಾವಧಿ ಎನಿಸುತ್ತದೆ. ದೇಶೀ–ವಿದೇಶೀ ಪ್ರವಾಸಿಗರ ನಡುವೆ ತಾರತಮ್ಯವೇಕೆ ಗೊತ್ತಾಗುತ್ತಿಲ್ಲ.

–ಕೊ.ಸು. ನರಸಿಂಹಮೂರ್ತಿ, ಚಾಮರಾಜಪುರಂ, ಮೈಸೂರು.

ಸುಧಾರಿಸಿದ ಲಡ್ಡು ಗುಣಮಟ್ಟ

ಮಾನ್ಯರೆ,

ಕಳೆದ ತಿಂಗಳು ನಾವು ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದಾಗ ದೇವಸ್ಥಾನದ ಲಡ್ಡು ಉತ್ತಮ ಗುಣಮಟ್ಟ ಇಲ್ಲ ಎಂಬ ಬಗ್ಗೆ ಇದೇ ಅಂಕಣದಲ್ಲಿ ಪತ್ರ ಪ್ರಕಟವಾಗಿತ್ತು. ಅದೇ ಸಮಯದಲ್ಲಿ ತಿರುಪತಿ ಲಡ್ಡು ತುಪ್ಪದಲ್ಲಿ ಕಲಬೆರಕೆಯ ವರದಿ ದೇಶಾದ್ಯಂತ ಸದ್ದು ಮಾಡಿತ್ತು.

ಮೊನ್ನೆ ನಮ್ಮ ಪರಿಚಿತರು ಮಹದೇಶ್ವರ ಬೆಟ್ಟದ ದೇವಸ್ಥಾನಕ್ಕೆ ಹೋಗಿ ಬಂದು ನಮಗೆ ಪ್ರಸಾದವನ್ನು ತಂದು ಕೊಟ್ಟಿದ್ದರು. ಈಗಿನ ಲಡ್ಡುವಿನ ಗುಣಮಟ್ಟದಲ್ಲಿ ಸುಧಾರಣೆಯಾಗಿದ್ದು, ತಿನ್ನಲು ರುಚಿಕರವಾಗಿಯೂ ಮುರಿಯಲು ಸ್ವಲ್ಪ ಮೃದುವಾಗಿಯೂ ಇದ್ದು ಸುಧಾರಣೆ ಕಂಡಿತ್ತು. ಹಗರಣ ಬಯಲಾದ ಬೆನ್ನಲ್ಲೇ ಮುಜರಾಯಿ ಸಚಿವರು ರಾಜ್ಯದ ಎಲ್ಲಾ ದೇವಸ್ಥಾನಗಳಲ್ಲೂ ಪ್ರಸಾದ ತಯಾರಿಸಲು ನಂದಿನಿ ತುಪ್ಪವನ್ನೇ ಬಳಸಬೇಕು ಎಂದು ಆದೇಶ ನೀಡಿದ್ದು, ಲಡ್ಡು ತಯಾರಿಕೆ ಗುಣಮಟ್ಟದ ಬಗ್ಗೆ ಪತ್ರಿಕೆಯಲ್ಲಿ ವರದಿಯಾದದ್ದು, ಪರಿಣಾಮ ಬೀರಿದಂತೆ ಕಾಣುತ್ತದೆ. ಸಂಬಂಧಿಸಿದ ಅಧಿಕಾರಿಗಳು ಪ್ರಸಾದ ಗುಣಮಟ್ಟದ ಬಗ್ಗೆ ಸತತ ನಿಗಾ ಇಡುವುದು ಅವಶ್ಯ ಹಾಗೂ ಪ್ರಸಾದ ಗುಣಮಟ್ಟದ ಬಗ್ಗೆ ಗ್ರಾಹಕರಿಗೆ ದೂರು ಸಂಖ್ಯೆ ನೀಡಿ, ದೂರು, ಸಮಸ್ಯೆಗಳನ್ನು ಆಲಿಸುವ ವ್ಯವಸ್ಥೆ ಇಂತಹ ಯಾತ್ರಾ ಸ್ಥಳಗಳಲ್ಲಿ ಕಡ್ಡಾಯವಾಗಿ ಇರಬೇಕು. ಅದು ಗ್ರಾಹಕರ ಹಕ್ಕು ಕೂಡ.

–ಬಿ.ಎಂ.ಭ್ರಮರಾಂಭ, ಕನಕದಾಸನಗರ, ಮೈಸೂರು.

ಮಾಜಿ ಕಾರ್ಪೊರೇಟರ್‌ಗಳ ಸಮಾಜ ಸೇವೆ



ಮಾನ್ಯರೇ,

ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಬರುವ ವಾರ್ಡ್ ನಂ.19ರ ವಿ.ವಿ. ಮೊಹಲ್ಲಾದ ಕ್ಲಬ್ ಹಿಂಭಾಗ ಇರುವ ಕನ್ಸರ್‌ವೆನ್ಸಿಯಲ್ಲಿ ಗಿಡಗಂಟಿಗಳು ಬೆಳೆದು ಕಾಡಿನಂತೆ ಹಬ್ಬಿದ್ದವು. ನಾನು ಪಾಲಿಕೆ ಸಿಬ್ಬಂದಿಗೆ ದೂರವಾಣಿ ಮೂಲಕ ಇರುವ ಸಮಸ್ಯೆಯನ್ನು ತಿಳಿಸಿದೆ. ಆಗ ಅದಕ್ಕೆ ಪ್ರತಿಕ್ರಿಯಿಸಿದ ಸಿಬ್ಬಂದಿ ಈಗ ದಸರಾ ಹಬ್ಬ ಇರುವುದರಿಂದ ಜೆಸಿಬಿ ಕೊರತೆ ಇದೆ. ಹಬ್ಬ ಮುಗಿದ ತಕ್ಷಣ ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಈಗ ಪಾಲಿಕೆ ಅವಧಿ ಮುಗಿದಿದ್ದರೂ ಮಾಜಿ ಪಾಲಿಕೆ ಸದಸ್ಯರಾದ ಪುಟ್ಟು ಹಾಗೂ ಲಕ್ಷ್ಮಣ್ ನಮ್ಮ ಮನವಿಗೆ ತಕ್ಷಣ ಸ್ಪಂದಿಸಿ, ಜೆಸಿಬಿ ತರಿಸಿ ಕನ್ಸರ್‌ವೆನ್ಸಿಯನ್ನು ಸ್ವಚ್ಛಗೊಳಿಸಿ, ಈಗ ವಾಕಿಂಗ್ ಮಾಡುವ ಹಾಗೆ ಮಾಡಿದ್ದಾರೆ. ಹೀಗೆ ಬೇರೆ ಬೇರೆ ವ್ಯಾಪ್ತಿಗೆ ಒಳಪಡುವ ವಾರ್ಡ್‌ಗಳಲ್ಲಿಯೂ ಇದೇ ಸಮಸ್ಯೆ ಇದ್ದು, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿವರ್ಗದವರು ಇವರ ಮಾದರಿಯನ್ನು ಅನುಸರಿಸಿದರೆ ಆಗ ರೋಗ, ರುಜಿನಗಳಿಗೆ ಆಸ್ಪದ ಇರುವುದಿಲ್ಲ. ಪುಟ್ಟು ಹಾಗೂ ಲಕ್ಷ್ಮಣ್ ಅವರ ಈ ಕಾರ್ಯಕ್ಕೆ ಅಭಿನಂದನೆಗಳು.

– ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಸ್ವಯಂಪ್ರಕಾಶಿತ ಸಂಸ್ಕೃತದತ್ತ ವಿಶ್ವದ ಚಿತ್ತ

ಓಜಸ್ವಿ, ತೇಜಸ್ವಿ ಗುಣವುಳ್ಳ ಸ್ವಯಂಪ್ರಕಾಶಿತ ಸಂಸ್ಕೃತ ಭಾಷೆಯನ್ನು ಕಲಿತರೆ ಕನ್ನಡವನ್ನು ಚೆನ್ನಾಗಿ ಕಲಿತಂತೆ. ಇದರಿಂದ ಕನ್ನಡ ಭಾಷೆಯ ಮೇಲೆ ಇನ್ನಷ್ಟು ಹೆಚ್ಚು ಪರಿಣಿತಿ ಹೊಂದಬಹುದು. ಇದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಖ್ಯಾತ ಸಾಹಿತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹೇಳುವ ಮಾತುಗಳು. ಇದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ನಿಜ ಹೇಳಬೇಕೆಂದರೆ ಸಂಸ್ಕೃತವನ್ನು ಕಲಿತರೆ ಎಲ್ಲಾ ಭಾಷೆಗಳನ್ನೂ ಕಲಿತಂತೆಯೇ ಸರಿ. ಏಕೆಂದರೆ ಇದು ಕನ್ನಡವೂ ಸೇರಿದಂತೆ ದೇಶ ವಿದೇಶಗಳ ವಿವಿಧ ಭಾಷೆಗಳ ಮೇಲೆ ತನ್ನದೇ ಆದ ಪ್ರಭಾವದ ಪ್ರಭೆಯನ್ನು ಬೀರುವ ಸ್ವಯಂ ಪ್ರಭೆಯುಳ್ಳ ಭಾಷೆಯಾಗಿದೆ. ಒಂದು ರೀತಿ ಎಲ್ಲಾ ಭಾಷೆಗಳ ತಾಯಿಭಾಷೆ ಸಂಸ್ಕೃತವಾಗಿದೆ. ಇಂಥ ಉತ್ಕೃಷ್ಟ ಭಾಷೆಗೆ ಭಾರತವೇ ತಾಯಿ ಎಂಬುದು ಭಾರತೀಯರೆಲ್ಲರೂ ಹೆಮ್ಮೆಪಡಬೇಕಾದ ವಿಷಯ. ಜಾಗತಿಕವಾಗಿಯೂ ಸಂಸ್ಕೃತ ಎಷ್ಟೊಂದು ಪ್ರಭಾವಶಾಲಿ ಭಾಷೆ ಎಂಬುದಕ್ಕೆ ಇಲ್ಲಿದೆ ನೋಡಿ ಉದಾಹರಣೆ –

ನಮ್ಮ ದೇಶ ಕಂಡ ಶ್ರೇಷ್ಠ ರಾಷ್ಟ್ರಪತಿಗಳಲ್ಲೊಬ್ಬರಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಗಳಾಗಿದ್ದ ಸಂದರ್ಭದಲ್ಲಿ ಒಮ್ಮೆ ಗ್ರೀಸ್ ದೇಶದ ಅಥೆನ್ಸ್‌ಗೆ ಭೇಟಿ ನೀಡಿದ್ದರಂತೆ. ಅಲ್ಲಿನ ರಾಷ್ಟ್ರಪತಿಗಳಾಗಿದ್ದ ಪೆಪೇಲಿಯಸ್ ಅವರು ನಮ್ಮ ಕಲಾಂ ಅವರನ್ನು ಬಹು ಆತ್ಮೀಯತೆಯಿಂದ ಸ್ವಾಗತಿಸಿಕೊಂಡು ಅಧ್ಯಕ್ಷ ಮಹೋದಯ, ಭವತೇ ಯವನ ದೇಶೇ ಸ್ವಾಗತಂ.... ಎಂದು ಅಚ್ಚ ಸಂಸ್ಕೃತ ಭಾಷೆಯಲ್ಲೇ ಬರಮಾಡಿಕೊಂಡಿದ್ದರಂತೆ. ಇಷ್ಟೇ ಅಲ್ಲದೆ ಗ್ರೀಸ್ ರಾಷ್ಟ್ರಪತಿ ಪೆಪೇಲಿಯಸ್ ಅವರು ಆಗ ಬಹಳ ಹೊತ್ತು ಅಪ್ಪಟ ಸಂಸ್ಕೃತದಲ್ಲೇ ಸಲೀಸಾಗಿ ಅರಳು ಉರಿದಂತೆ ಮಾತನಾಡಿದ್ದರಂತೆ. ಎಲ್ಲಿಯ ಗ್ರೀಸ್, ಎಲ್ಲಿಯ ಸಂಸ್ಕೃತ.... ಎಂದು ಆ ಕ್ಷಣ ನಮ್ಮ ಕಲಾಂ ಅವರು ಆಶ್ಚರ್ಯಚಕಿತರಾಗಿ ಬಿಟ್ಟಕಣ್ಣು ಬಿಟ್ಟಂತೆಯೇ ಪೆಪೇಲಿಯಸ್ ಅವರನ್ನು ನೋಡುತ್ತಾ ಅವರ ಸಂಸ್ಕೃತ ಮಾತುಗಳಿಗೆ ಬೆರಗಾಗಿ ನೀವು ಗ್ರೀಸ್ ದೇಶದವರು. ಗ್ರೀಕ್ ಭಾಷೆ ಮಾತನಾಡುವವರು. ನಮ್ಮ ಸಂಸ್ಕೃತ ಭಾಷೆಯನ್ನು ಎಲ್ಲಿ ಕಲಿತೀರಿ? ಏಕೆ ಕಲಿತೀರಿ? ಎಂದು ಕೇಳಿದ್ದರಂತೆ. ಅದಕ್ಕೆ ಪೆಪೇಲಿಯಸ್‌ರವರು ನಮ್ಮ ಗ್ರೀಕ್ ಕೂಡ ಪ್ರಾಚೀನ ಭಾಷೆಯೇ. ಆದರೆ ಹೀಗಿದ್ದೂ ಕೂಡ ನಿರ್ಜೀವ ಭಾಷೆಯೆಂದೇ ಪರಿಗಣಿಸಲ್ಪಟ್ಟಿತ್ತು. ಹಾಗಾಗಿ ನಾನು ಜರ್ಮನಿಗೆ ಹೋಗಿದ್ದಾಗ ನನ್ನ ದೇಶದ ಪ್ರಾಚೀನ ಭಾಷೆಯಾದ ಗ್ರೀಕ್ ಅನ್ನು ಅರ್ಥ ಮಾಡಿಕೊಳ್ಳಲು ಮೊದಲು ಸಂಸ್ಕೃತ ಭಾಷೆಯನ್ನು ಕಲಿತೆ ಎಂದರಂತೆ. ನಮ್ಮ ಕಲಾಂ ಅವರು ಮಹದಾಶ್ಚರ್ಯಗೊಂಡಿದ್ದೇ ಅಲ್ಲದೆ ಎಲ್ಲಾ ಭಾಷೆಗಳಿಗೂ ತಾಯಿಬೇರಿನಂತಿರುವ ನಮ್ಮ ಸಂಸ್ಕೃತ ಭಾಷೆಗೆ ಮನದಲ್ಲೇ ಸಲಾಂ ಮಾಡಿದ್ದರಂತೆ.

ಭಾರತದ ಇಂಥ ಶ್ರೇಷ್ಠ ಪ್ರಾಚೀನ ಭಾಷೆ ಸಂಸ್ಕೃತದ ಸ್ಥಿತಿ ಕೂಡ ಒಂದು ಕಾಲದಲ್ಲಿ ಬಹು ಪ್ರಾಚೀನ ಭಾಷೆಗಳಾದರೂ ನಿರ್ಜೀವ ಭಾಷೆಗಳಾಗಿಬಿಟ್ಟಿದ್ದ ಗ್ರೀಸ್ ದೇಶದ ಗ್ರೀಕ್ ಭಾಷೆಗಿಂತ, ಇಸ್ರೇಲಿನ ಹೀಬ್ರೂ ಭಾಷೆಗಿಂತ ಭಿನ್ನವಾಗೇನೂ ಭಾರತದಲ್ಲಿರಲಿಲ್ಲ. ಸಂಸ್ಕೃತ ಅಮೃತ ಭಾಷೆಯಾಗಿದ್ದರೂ ಮೃತ ಭಾಷೆಯೆಂದು ಪರಿಗಣಿಸಲ್ಪಟ್ಟು ಬಳಕೆಯಾಗದೆ ಬಸವಳಿದಿತ್ತು. ಇದಕ್ಕೆ ಮೂಲ ಕಾರಣ ಸಂಸ್ಕೃತ ಭಾಷೆಯು ಎಲ್ಲರಿಗೂ ಅಲ್ಲ, ಅದೊಂದು ದೇವಭಾಷೆ. ದೇವರು ಮಾತ್ರ ಸಂಸ್ಕೃತದಲ್ಲಿ ಮಾತನಾಡಬಹುದು. ಅದು ಬಿಟ್ಟರೆ ಪಂಡಿತರು, ವಿದ್ವಾಂಸರುಗಳಷ್ಟೇ ಸಂಸ್ಕೃತದಲ್ಲಿ ಮಾತನಾಡಲು ಅರ್ಹರು. ಮಿಕ್ಕ ಪಾಮರರೆಲ್ಲಾ ಅನರ್ಹರು. ಹಾಗಾಗಿ ಜನಸಾಮಾನ್ಯರೆಲ್ಲರೂ ಸಂಸ್ಕೃತವನ್ನು ಕಲಿಯುವಂತಿಲ್ಲ, ನುಡಿಯುವಂತಿಲ್ಲ. ಒಂದು ಪಕ್ಷ ಹಾಗೇನಾದರೂ ಮಾಡಿದರೆ ಅದು ಅಪಚಾರವಾಗುತ್ತದೆ, ದೈವ ದ್ರೋಹವಾಗುತ್ತದೆಂಬ ಭಾವನೆಯೇ ಆಗಿತ್ತು. ಇಂಥ ಮೂಢನಂಬಿಕೆಯನ್ನು ಬಿತ್ತಿದ್ದವರ ಕಪಿಮುಷ್ಟಿಯಲ್ಲಿ ಸಂಸ್ಕೃತ ಭಾಷೆ ಸಿಕ್ಕಿಕೊಂಡು ಅಕ್ಷರಶಃ ಮೃತ ಸ್ಥಿತಿಯಲ್ಲಿತ್ತು. ದೇಶಕ್ಕೆ ಸಂವಿಧಾನವನ್ನು ಕೊಟ್ಟಂತಹ ಭಾರತರತ್ನ ಬಿ.ಆರ್. ಅಂಬೇಡ್ಕರ್ ಅವರಂತಹ ಮೇಧಾವಿಗೂ ಆ ಕಾಲದಲ್ಲಿ ಸಂಸ್ಕೃತ ಕಲಿಯಲು ಅಡ್ಡಿಯಾಗಿತ್ತು. ಸಂಸ್ಕೃತದ ಮಹತ್ವ ಅರಿತಿದ್ದ ಅಂಬೇಡ್ಕರ್ ಅವರು ಇಂಥ ಮೌಢ್ಯವನ್ನೆಲ್ಲಾ ಮೆಟ್ಟಿ ನಿಂತು ಹಠತೊಟ್ಟು ಸಂಸ್ಕೃತವನ್ನು ಕಲಿತು ಹಲವಾರು ಗ್ರಂಥಗಳನ್ನೂ ರಚಿಸಿ 'ಆಧುನಿಕ ಮನು' ಎನಿಸಿಕೊಂಡು ಇತಿಹಾಸ ಸೃಷ್ಟಿಸಿದ್ದು ಬೇರೆ ವಿಚಾರ. ಆದರೆ ಅವರ ಸಂಸ್ಕೃತ ಕಲಿಕೆಗೆ ಅಡ್ಡಿಯಾದದ್ದು ದಿಟ. ಹೀಗೆ ಸಂಸ್ಕೃತವನ್ನು ಎಲ್ಲರ ಭಾಷೆಯಾಗಲು ಬಿಡದೆ



ಯಾರೋ ಕಟ್ಟಿಹಾಕಿದ್ದರಿಂದ ಅದು ಇದ್ದೂ ಸತ್ತಂತಾಗಿತ್ತು!

ಇಂತಹದ್ದೇ ಪರಿಸ್ಥಿತಿ ಇಸ್ರೇಲಿನ ಅಧಿಕೃತ ಭಾಷೆಯಾದ ಹೀಬ್ರೂ ಭಾಷೆಯದೂ ಆಗಿತ್ತು. ಒಂದು ಕಾಲದಲ್ಲಿ ಅಂದರೆ ಯಹೂದಿ ಸಂಸ್ಕೃತಿ ಉತ್ತುಂಗ ಸ್ಥಿತಿಯಲ್ಲಿದ್ದಾಗ ಜನಸಾಮಾನ್ಯರ ಭಾಷೆಯಾಗಿದ್ದ ಹೀಬ್ರೂ ನಂತರದ ದಿನಗಳಲ್ಲಿ ಯಹೂದಿಗಳು ಬೇರೆ ಬೇರೆ ದೇಶಗಳಲ್ಲಿ ಹಂಚಿ ಹೋದ್ದರಿಂದ, ಮತ್ತಿತರೇ ಕಾರಣಗಳಿಂದ ಅದು ಬಳಸಲ್ಪಡದೆ ಧಾರ್ಮಿಕ ವಿಧಿ ವಿಧಾನ ಕಾರ್ಯಗಳಿಗಷ್ಟೇ ಎಂಬಂತಾಗಿ ಬಿಟ್ಟು ಸಂಪೂರ್ಣ ವಿನಾಶದತ್ತ ಹೆಜ್ಜೆ ಹಾಕಿತ್ತು. ಹೀಬ್ರೂ ದೇವರ ಭಾಷೆ. ಇದನ್ನು ಎಲ್ಲರೂ, ಎಲ್ಲಾ ಕಾರ್ಯಗಳಿಗೂ ಬಳಸುವುದು ಪಾಪದ ಕೆಲಸವೆಂಬ ಭಾವನೆ ಅಲ್ಲಿ ಮೂಡಿತ್ತು. ಹಾಗಾಗಿ ಹೀಬ್ರೂ ಭಾಷೆಯದು ಉಸಿರು ನಿಲ್ಲುವಂತಹ ಸ್ಥಿತಿಯಾಗಿತ್ತು. ಮತ್ತೆ ಅದು ಪುನಶ್ಚೇತನಗೊಂಡು ಜೀವ ಪಡೆಯಲು ಶತಮಾನಗಳೇ ಬೇಕಾದವು. ಅದೂ ಕೂಡ ಸಾಧ್ಯವಾದದ್ದು ಎಲಿಸರ್‌ಬೆನ್ ಯಹೂದ (1858–1922) ಎಂಬ ಪಕ್ಕಾ ಹೀಬ್ರೂ ಭಾಷಾ ಪ್ರೇಮಿಯಿಂದ. ಹೀಬ್ರೂ ಭಾಷೆಯನ್ನು ಮತ್ತೆ ಚಾಲ್ತಿಗೆ ತರುವುದರಿಂದ ಯಹೂದಿ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸಬಹುದೆಂಬ ಗುರಿಯಿಂದ ಹೊರಟ ಆತ ತನ್ನಂತಹ ಸಮಾನ ಮನಸ್ಕರ ಗುಂಪೊಂದನ್ನು ಕಟ್ಟಿಕೊಂಡು ಹೀಬ್ರೂ ಭಾಷೆಯ ಪುನರುಜ್ಜೀವನಕ್ಕಾಗಿ ಒಂದು ಮಹಾಕ್ರಾಂತಿಯನ್ನೇ ಮಾಡಿದ್ದ. ಇದಕ್ಕಾಗಿ ಎಲಿಸರ್‌ಬೆನ್ ಯಹೂದ ತನ್ನ ಇಡೀ ಬದುಕನ್ನು ಸಮರ್ಪಿಸಿಕೊಂಡಿದ್ದ. ಹೀಬ್ರೂ ಭಾಷೆಯನ್ನು ಮತ್ತೆ ಜನರ ಆಡುಭಾಷೆ ಮಾಡೇತೀರಬೇಕೆಂದು ಹಠತೊಟ್ಟಿದ್ದ ಆತ ಇದರ ಪ್ರಚಾರಕ್ಕಾಗಿ ಪತ್ರಿಕೆ, ಪುಸ್ತಕ, ನಿಘಂಟು... ಹೀಗೆ ಎಲ್ಲವನ್ನೂ ಸೃಷ್ಟಿಸಿದ್ದ. ಬಹಳಷ್ಟು ಕಷ್ಟ–ನಷ್ಟಗಳನ್ನೂ ಅನುಭವಿಸಿದ್ದ. ಪರಿಣಾಮ ಹೀಬ್ರೂ ಭಾಷೆ ಮರುಹುಟ್ಟು ಪಡೆದುಕೊಂಡು ಮತ್ತೆ ಜನಭಾಷೆಯಾಗಿ ಬಳಕೆಗೆ ಬಂತು.

ಈಗ ಅಂತಹುದೇ ಒಂದು ಕ್ರಾಂತಿ ಸಂಸ್ಕೃತ ಭಾಷೆಯ ಉಳಿವಿಗಾಗಿ ನಮ್ಮಲ್ಲೂ ನಡೆಯುತ್ತಿದೆ. ಈ ಕ್ರಾಂತಿಯ ಕೈಗಳಾಗಿ ಹಲವಾರು ಸಂಸ್ಥೆಗಳು, ಮಠ ಮಂದಿರಗಳು ರಾಜ್ಯವ್ಯಾಪಿ, ದೇಶವ್ಯಾಪಿ, ವಿಶ್ವವ್ಯಾಪಿ ಇದ್ದರೂ ಕೂಡ ಬಹುಮುಖ್ಯವಾಗಿ ಬೆಂಗಳೂರಿನ ಸಂಸ್ಕೃತ ಭಾರತಿ ಸಂಸ್ಥೆ ಗಮನ ಸೆಳೆಯುತ್ತದೆ. ಏಕೆಂದರೆ ಸಂಸ್ಕೃತ ಭಾಷೆಯನ್ನು ಪುನಶ್ಚೇತನಗೊಳಿಸಿ ಅದರ ಹಿರಿಮೆಯನ್ನು ಜಗತ್ತಿಗೆ ಸಾರುವಲ್ಲಿ ಈ ಸಂಸ್ಥೆಯ ಸೇವೆ, ಶ್ರಮ, ಸಾಧನೆ, ಸಕ್ರಿಯ ಚಟುವಟಿಕೆ, ಸಮರ್ಪಣಾ ಮನೋಭಾವ ಅನನ್ಯವಾದದ್ದು. ಊಹೆಗೂ ನಿಲುಕದಷ್ಟು ಅದ್ಭುತವಾದದ್ದು. ವಿಸ್ಮಯವೆಂದರೆ ಇದೇಯೇನೋ ಎನ್ನುವಷ್ಟರ ಮಟ್ಟಿಗೆ, ಮೃತಭಾಷೆ ಎಂಬ ಹೀಯಾಳಿಕೆಗೊಳಗಾಗಿದ್ದ ಸಂಸ್ಕೃತವನ್ನು ಅಮೃತ ಭಾಷೆಯಾಗಿಸುವಲ್ಲಿ ಹಾಗೂ ಇದು ಅಮೃತಭಾಷೆ ಎಂದು ಎಲ್ಲರಿಗೂ ಅರಿವು ಮೂಡಿಸುವಲ್ಲಿ ಸಂಸ್ಕೃತ ಭಾರತಿ ಸಂಸ್ಥೆ ಪಾತ್ರ ಬಹು ದೊಡ್ಡದಿದೆ.

'ಸಂಸ್ಕೃತ ಭಾರತಿ' ಉದಯವಾದದ್ದು 1981 ರಲ್ಲಿ. ಅದೂ ಕರ್ನಾಟಕದ ಬೆಂಗಳೂರಿನಲ್ಲಿ ಎಂಬುದೇ ಒಂದು ವಿಶೇಷ. ಈಗ ಇದಕ್ಕೆ ನಾಲ್ಕು ದಶಕಗಳ ಪ್ರಾಯ. ಆಶ್ಚರ್ಯವೆಂದರೆ ನಾಲ್ಕು ಶತಮಾನಗಳಲ್ಲಿ ಮಾಡುವಷ್ಟು ಕೆಲಸವನ್ನು ನಲವತ್ತು ವರ್ಷಗಳಲ್ಲಿ ಮಾಡಿತೋರಿರುವ ಹಿರಿಮೆ ಇದರದು. ಇದರ ಹಿಂದೆ ಸಂಸ್ಕೃತದ ಬಗ್ಗೆ ಇದಕ್ಕಿರುವ ಅತೀವ ಕಾಳಜಿಯನ್ನು ಕಾಣಬಹುದು. ಸಂಸ್ಕೃತಕ್ಕೆ ಪ್ರಚಾರ ಕೊಡಬೇಕು, ಸಂಸ್ಕೃತ ಪತ್ರಿಕೆಯನ್ನು ಆರಂಭಿಸಬೇಕು, ತನ್ಮೂಲಕ ಸಂಸ್ಕೃತ ಸೇವೆಯನ್ನು ಮಾಡಬೇಕೆಂಬ ಧ್ಯೇಯೋದ್ದೇಶದೊಡನೆ ಪ್ರಾರಂಭದಲ್ಲಿ ಅಸ್ತಿತ್ವಕ್ಕೆ ಬಂದ 'ಸಂಸ್ಕೃತ ಭಾರತಿ' ಯು ಸಂಸ್ಕೃತ ಮಾತನಾಡಲು ತಯಾರು ಮಾಡುವ ಸಲುವಾಗಿಯೇ ದಿನಕ್ಕೆರಡು ಗಂಟೆಯಂತೆ ಕೇವಲ ಹತ್ತು ದಿನಗಳಲ್ಲಿ ಸಂಸ್ಕೃತ ಮಾತನಾಡುವುದನ್ನು ಕಲಿಸುವ ಸಂಸ್ಕೃತ ಸಂಭಾಷಣಾ ಶಿಬಿರಗಳು, ಸಂಸ್ಕೃತ ಶಿಕ್ಷಕರ ನಿರ್ಮಾಣಕ್ಕಾಗಿ ಸಂಸ್ಕೃತ ಪ್ರಶಿಕ್ಷಣ ಶಿಬಿರಗಳು, ಅಂಚೆ ಮೂಲಕ ಸಂಸ್ಕೃತ ಶಿಕ್ಷಣ, ಗೀತಾ ಶಿಕ್ಷಣ, ಸಂಸ್ಕೃತವನ್ನು ಆಡುಭಾಷೆ ಮಾಡಲು ಸಂಸ್ಕೃತ ಗೃಹಯೋಜನೆ, ಆಟಗಳ ಮೂಲಕ ಮಕ್ಕಳು ಸಂಸ್ಕೃತ ಕಲಿಯಲು ಬಾಲಕೇಂದ್ರ ಸ್ಥಾಪನೆ, ಸಂಸ್ಕೃತ ಗೀತಾ ಸೋಪಾನ ಮತ್ತು ಸಂಸ್ಕೃತ ಭಾಷಾ ಪ್ರವೇಶಗಳೆಂಬ ಕೋರ್ಸ್‌ಗಳ ಆರಂಭ.... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಒಟ್ಟಾರೆ ಸಂಸ್ಕೃತದ ಅಭ್ಯುದಯಕ್ಕಾಗಿ ಸಂಸ್ಕೃತ ಭಾರತಿ ಹಲವಾರು ಮಾರ್ಗಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು ಇದುವರೆಗೆ ಕಳೆದ ಮೂವತ್ತು ನಲವತ್ತು ವರ್ಷಗಳಲ್ಲಿ ದೇಶಾದ್ಯಂತ ಒಂದು ಲಕ್ಷದ ಇಪ್ಪತ್ತು ಸಾವಿರಕ್ಕೂ ಹೆಚ್ಚು ಸಂಸ್ಕೃತ ಸಂಭಾಷಣಾ ಶಿಬಿರಗಳನ್ನೇ ನಡೆಸಿದೆ. ಸಂಸ್ಕೃತ ಭಾರತಿ ಪ್ರತಿ ರಾಜ್ಯದಲ್ಲಿಯೂ ಶಿಕ್ಷಕರಿಗೆ ತರಬೇತಿ ನೀಡುತ್ತಿದ್ದು ಇದುವರೆಗೆ ಸುಮಾರು ಒಂದು ಲಕ್ಷ ಸಂಸ್ಕೃತ ಶಿಕ್ಷಕರನ್ನು ತರಬೇತಿಗೊಳಿಸಿದೆ. 1984 ರಲ್ಲಿ ಬೆಂಗಳೂರೊಂದರಲ್ಲೇ 1008 ಕ್ಲಾಸುಗಳನ್ನು ಏಕಕಾಲಕ್ಕೆ ನಡೆಸಿ ಒಂದು ಕೋಟಿ ಮಂದಿ ಸಂಸ್ಕೃತದ ಅಮೃತವನ್ನು ಕುಡಿಯುವಂತೆ ಮಾಡಿದ್ದು ಒಂದು ದಾಖಲೆಯಾಗಿದ್ದು, ಆ ಸಂದರ್ಭದಲ್ಲಿ 150 ಸಂಸ್ಕೃತ ಗ್ರಂಥಗಳು ಪ್ರಕಟಗೊಂಡು ಚರಿತ್ರೆ ನಿರ್ಮಿಸಿದ್ದವು.

ಒಟ್ಟಿನಲ್ಲಿ ಸಂಸ್ಕೃತವೆಂದರೆ ಅದೊಂದು ಮೃತಭಾಷೆಯೆಂದು ಇನ್ನು ಮುಂದೆ ಯಾರೂ ಮೂಗು ಮುರಿಯುವಂತಿಲ್ಲ. ಅಷ್ಟರ ಮಟ್ಟಿಗದು ಈಗ ತನ್ನ ಹೊಳಪನ್ನು ಗಳಿಸಿಕೊಂಡು ದೇಶಾದ್ಯಂತ ಹೊಸ ಮಿಂಚನ್ನೇ ಸೃಷ್ಟಿಸಿದೆ. ಅದರಲ್ಲೂ ವಿದೇಶಿಯರಿಗೆ ವಿಶೇಷವಾಗಿ ಸಂಸ್ಕೃತ ಭಾಷೆ ಹೆಚ್ಚು ಪ್ರಿಯವಾಗಿದ್ದು ದಿನದಿಂದ ದಿನಕ್ಕೆ ಅದನ್ನು ಕಲಿಯುವವರ ಸಂಖ್ಯೆ ಹೆಚ್ಚುತ್ತಿದೆ. ವಿದೇಶಿಯರು ಸಂಸ್ಕೃತದ ಬಗ್ಗೆ ಇಷ್ಟೊಂದು ಆಸಕ್ತಿ ತಾಳಲು ಕಾರಣ, ಮೊದಲನೆಯದಾಗಿ ಸಂಸ್ಕೃತ ಗ್ರಂಥಗಳಲ್ಲಿ ವೈದ್ಯಕೀಯದಿಂದ ಹಿಡಿದು ಖಗೋಳಶಾಸ್ತ್ರ, ಲೋಹಶಾಸ್ತ್ರದವರೆಗೆ ಎಲ್ಲಾ ವಿಷಯಗಳ ಬಗ್ಗೆಯೂ ಮಹದದ್ಭುತ ವಿಚಾರಗಳು ಕಡಲ ಮುತ್ತುಗಳಂತೆ ತುಂಬಿ ತುಳುಕುತ್ತಿರುವುದು. ಎರಡನೆಯದಾಗಿ ಇಂಗ್ಲೀಷ್‌ನಲ್ಲಿರುವಂತೆ ಸಂದಿಗ್ಧತೆ ಸಂಸ್ಕೃತದಲ್ಲಿಲ್ಲ. ಇದು ಅಸಂದಿಗ್ಧವಾದುದರಿಂದ ಇವತ್ತಿನ ಅತ್ಯಾಧುನಿಕ ಕಂಪ್ಯೂಟರ್‌ಗಳಲ್ಲಿ ಸಂವಹನ ಭಾಷೆಯಾಗಿ ಅಳವಡಿಸಲು ವಿಶ್ವದ ಎಲ್ಲಾ ಭಾಷೆಗಳಿಗಿಂತಲೂ ಸಂಸ್ಕೃತವೇ ಅತ್ಯಂತ ಸಮರ್ಪಕವೆಂಬುದರ ಅರಿವು ಅವರಿಗಾಗಿದೆ. ಹಾಗಾಗಿ ಅವರಿಗೆ ಸಂಸ್ಕೃತ ಎಂಬುದು ಪಂಚಾಮೃತವಾಗಿದೆ.

“ ಸಂಸ್ಕೃತವೆಂದರೆ ಅದೊಂದು ಮೃತಭಾಷೆಯೆಂದು ಇನ್ನು ಮುಂದೆ ಯಾರೂ ಮೂಗು ಮುರಿಯುವಂತಿಲ್ಲ. ಅಷ್ಟರಮಟ್ಟಿಗದು ಈಗ ತನ್ನ ಹೊಳಪನ್ನು ಗಳಿಸಿಕೊಂಡು ದೇಶಾದ್ಯಂತ ಹೊಸ ಮಿಂಚನ್ನೇ ಸೃಷ್ಟಿಸಿದೆ. ಅದರಲ್ಲೂ ವಿದೇಶಿಯರಿಗೆ ವಿಶೇಷವಾಗಿ ಸಂಸ್ಕೃತ ಭಾಷೆ ಹೆಚ್ಚು ಪ್ರಿಯವಾಗಿದ್ದು ದಿನದಿಂದ ದಿನಕ್ಕೆ ಅದನ್ನು ಕಲಿಯುವವರ ಸಂಖ್ಯೆ ಹೆಚ್ಚುತ್ತಿದೆ. ವಿದೇಶಿಯರು ಸಂಸ್ಕೃತದ ಬಗ್ಗೆ ಇಷ್ಟೊಂದು ಆಸಕ್ತಿ ತಾಳಲು ಕಾರಣ, ಮೊದಲನೆಯದಾಗಿ ಸಂಸ್ಕೃತ ಗ್ರಂಥಗಳಲ್ಲಿ ವೈದ್ಯಕೀಯದಿಂದ ಹಿಡಿದು ಖಗೋಳಶಾಸ್ತ್ರ, ಲೋಹಶಾಸ್ತ್ರದವರೆಗೆ ಎಲ್ಲಾ ವಿಷಯಗಳ ಬಗ್ಗೆಯೂ ಮಹದದ್ಭುತ ವಿಚಾರಗಳು ಕಡಲ ಮುತ್ತುಗಳಂತೆ ತುಂಬಿ ತುಳುಕುತ್ತಿರುವುದು. ಎರಡನೆಯದಾಗಿ ಇಂಗ್ಲೀಷ್‌ನಲ್ಲಿರುವಂತೆ ಸಂದಿಗ್ಧತೆ ಸಂಸ್ಕೃತದಲ್ಲಿಲ್ಲ. ಇದು ಅಸಂದಿಗ್ಧವಾದುದರಿಂದ ಇವತ್ತಿನ ಅತ್ಯಾಧುನಿಕ ಕಂಪ್ಯೂಟರ್‌ಗಳಲ್ಲಿ ಸಂವಹನ ಭಾಷೆಯಾಗಿ ಅಳವಡಿಸಲು ವಿಶ್ವದ ಎಲ್ಲಾ ಭಾಷೆಗಳಿಗಿಂತಲೂ ಸಂಸ್ಕೃತವೇ ಅತ್ಯಂತ ಸಮರ್ಪಕವೆಂಬುದರ ಅರಿವು ಅವರಿಗಾಗಿದೆ. ಹಾಗಾಗಿ ಅವರಿಗೆ ಸಂಸ್ಕೃತ ಎಂಬುದು ಪಂಚಾಮೃತವಾಗಿದೆ.

ಶೀಘ್ರದಲ್ಲೇ ಶೋಭಾ ಕರಂದ್ಲಾಜೆ ಭ್ರಷ್ಟಾಚಾರ ದಾಖಲೆ ರಿಲೀಸ್

ಸಚಿವ ಭೈರತಿ ಸುರೇಶ್ ಬಾಂಬ್



ಭೈರತಿ ಸುರೇಶ್



ಶೋಭಾ ಕರಂದ್ಲಾಜೆ

ಬೆಂಗಳೂರು, ಅ.25– ಬಿಜೆಪಿ ಅಧಿಕಾರ ಅವಧಿಯಲ್ಲಿ ಸಚಿವೆ ಶೋಭಾ ಕರಂದ್ಲಾಜೆ ಅವರು ಏನೆಲ್ಲಾ ಮಾಡಿದ್ದಾರೆ. ಇಂಧನ ಸಚಿವರಾಗಿದ್ದ ಶೋಭಾ ಕರಂದ್ಲಾಜೆಯವರು ಎಷ್ಟು ಭ್ರಷ್ಟಾಚಾರ ಮಾಡಿದ್ದಾರೆ ಎಂಬುದರ ಬಗ್ಗೆ ದಾಖಲೆ ಸಂಗ್ರಹಿಸಲು ಹೇಳಿದ್ದೇನೆ. 15 ದಿನ ಬಿಟ್ಟು ಅವರ ಭ್ರಷ್ಟಾಚಾರದ ದಾಖಲೆ ಬಿಡುಗಡೆ ಮಾಡುತ್ತೇನೆ ಎಂದು ಸಚಿವ ಭೈರತಿ ಸುರೇಶ್ ಬಾಂಬ್ ಸಿಡಿಸಿದ್ದಾರೆ.

ವಿಧಾನಸೌಧದಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಚಿವರು, ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಬಿಜೆಪಿ ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಅವರ ಆರೋಪಗಳಿಗೆ ತಿರುಗೇಟು ನೀಡಿದ್ದಾರೆ.

ಶೋಭಾ ಕರಂದ್ಲಾಜೆ ಅವರು ನನ್ನ ಮೇಲೆ ಆರೋಪ ಮಾಡಿದ್ದಾರೆ. ಬಿಜೆಪಿ ಅಧಿಕಾರ ಅವಧಿಯಲ್ಲಿ ಅವರು ಏನೆಲ್ಲಾ ಮಾಡಿದ್ದಾರೆ? ಇಂಧನ ಸಚಿವರಾಗಿದ್ದ ಶೋಭಾ ಕರಂದ್ಲಾಜೆಯವರು ಎಷ್ಟು ಭ್ರಷ್ಟಾಚಾರ ಮಾಡಿದ್ದಾರೆ? ಈ ಸಂಬಂಧ ಪೊನ್ನಣ್ಣ ಅವರಿಗೆ ಇದರ ಎಲ್ಲಾ ದಾಖಲೆ ಸಂಗ್ರಹಿಸಲು ಹೇಳಿದ್ದೇನೆ. 15 ದಿನ ಬಿಟ್ಟು ಅವರ ಭ್ರಷ್ಟಾಚಾರದ ದಾಖಲೆ ಬಿಡುಗಡೆ ಮಾಡುತ್ತೇವೆ ಎಂದು ಬಾಂಬ್ ಸಿಡಿಸಿದ್ದಾರೆ.

ಹೆಚ್. ವಿಶ್ವನಾಥ್ ಆಧಾರ ರಹಿತ ಆರೋಪ ಮಾಡ್ತಿದ್ದಾರೆ. ಗೊಬೆಲ್ಸ್ ವಂಶಸ್ಥರು ಅವರು, ವಿಶ್ವನಾಥ್ ಥರ್ಡ್ ಗ್ರೇಡ್ ವ್ಯಕ್ತಿ. ನನ್ನ ಪೂರ್ವಜರಿಂದ ಬಂದ ಪ್ರಾಪರ್ಟಿಗೂ ಸಿದ್ದರಾಮಯ್ಯ ಕುಟುಂಬಕ್ಕೂ ಏನು ಸಂಬಂಧ. ವಿಶ್ವನಾಥ್‌ಗೆ ಮತಿಭ್ರಮಣೆ ಆಗಿದೆ ಎಂದು ಲೇವಡಿ ಮಾಡಿದ್ದಾರೆ.

ನನ್ನ ತಾತ ಖರೀದಿ ಮಾಡಿದ ಜಮೀನು ಹೆಣ್ಣೂರ್ ಬಳಿಯಿದೆ ಅಲ್ಲಿ ಎರಡು ಹೋಟೇಲ್‌ಗಳಿವೆ. ಇದಕ್ಕೂ ಸಿದ್ದರಾಮಯ್ಯಗೂ ಅವರ ಸೊಸೆಗೂ ಏನು ಸಂಬಂಧ? ವಿಶ್ವನಾಥ್ ಬಗ್ಗೆ ನಾವು ಮಾತನಾಡಬೇಕಾಗಿರುವುದು ದೌರ್ಭಾಗ್ಯ. ಯಾರು ಸಹಾಯ ಮಾಡ್ತಾರೋ ಅವರನ್ನೇ ಕಚ್ಚುವ ಸ್ವಭಾವ ವಿಶ್ವನಾಥ್‌ಗೆ ಇದೆ. ಅವರಿಗೂ ಒಬ್ಬ ಮಗ ಇದ್ದಾನೆ, ಅವರಿಗೂ ಸೊಸೆ ಇದ್ದಾರೆ. ಸಿದ್ದರಾಮಯ್ಯಗೆ ಆದಂತೆ ವಿಶ್ವನಾಥ್‌ಗೆ ಆದರೆ ಆಗ ಏನ್ ಮಾಡ್ತಾರೆ? ಎನುತ್ತಲೇ ಪಾಪ ಹಾಗೆ ಆಗದಿರಲಿ ಎಂದಿದ್ದಾರೆ.

ವಿಶ್ವನಾಥ್ ಮತ್ತು ಅವರ ಮಗ ಸೈಟಿಗೋಸ್ಕರ ನನ್ನ ಹತ್ರ ಬಂದಿದ್ರು. ಕಡಿಮೆ ಬೆಲೆಗೆ ಎಕರೆಗಟ್ಟಲೆ ಸಿಎ ಸೈಟ್ ಕೇಳಿದ್ದರು. ನಾನು ಇದು ಕಾನೂನು ಬಾಹಿರ ಆಗಲ್ಲ ಅಂತ ಹೇಳಿದ್ದೆ. ಸಿದ್ದರಾಮಯ್ಯ ಮೇಲಿನ ಹೊಟ್ಟೆ ಉರಿಯಿಂದ ಬೇಸ್‌ಲೆಸ್ ಆರೋಪ ಮಾಡ್ತಿದ್ದಾರೆ. 100% ಸತ್ಯ ಅಂದ್ರೆ ಅವನೊಬ್ಬ ಬ್ಲ್ಯಾಕ್ ಮೇಲರ್, ರೋಲ್ ಕಾಲ್ ಫೆಲೋ ಅವನೊಬ್ಬ ಹುಚ್ಚ ಎಂದು ಲೇವಡಿ ಮಾಡಿದ್ದಾರೆ.

ಸಂಡೂರಿನಲ್ಲಿ ಎನ್‌ಡಿಎ ಅಭ್ಯರ್ಥಿ ಬಂಗಾರು ಹನುಮಂತು ನಾಮಪತ್ರ ಸಲ್ಲಿಕೆ



ಸಂಡೂರಲ್ಲಿ ಬಂಗಾರು ಹನುಮಂತು ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಬೆಂಗಳೂರು, ಅ.25– ರಾಜ್ಯದಲ್ಲಿ ಉಪ ಚುನಾವಣೆ ಅಖಾಡ ರಂಗೇರಿದೆ. ನಾಮಪತ್ರ ಸಲ್ಲಿಕೆಗೆ ಕಡೆಯೇ ದಿನವಾದ ಇಂದು ಸಂಡೂರಿನಲ್ಲಿ ಬಂಗಾರು ಹನುಮಂತು ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ತಹಸೀಲ್ದಾರ್ ಕಚೇರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶ್ರೀರಾಮುಲು ಮತ್ತಿತರ ನಾಯಕರ ಸಮ್ಮುಖದಲ್ಲಿ ಬಂಗಾರು ಹನುಮಂತು ತಮ್ಮ ಉಮೇದುವಾರಿ ಸಲ್ಲಿಸಿದರು.

ಇದಕ್ಕೂ ಮುನ್ನಾ ನಡೆದ ರೋಡ್ ಶೋನಲ್ಲಿ ಪಾಲ್ಗೊಂಡು ಮಾತನಾಡಿದ ಬಿ.ವೈ. ವಿಜಯೇಂದ್ರ, ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ ಹಣದಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿ. ಶ್ರೀರಾಮುಲು ಅವರನ್ನು ಸೋಲಿಸಲಾಗಿದೆ. ಈ ಬಾರಿಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ತಕ್ಕ ಪಾಠ ಕಲಿಸಬೇಕು ಎಂದು ಜನತೆಗೆ ಕರೆ ನೀಡಿದರು.

ಸಂಡೂರಿನಲ್ಲಿ ಪಕ್ಷದ ಪ್ರಮುಖರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿನ ಕಾರ್ಯತಂತ್ರಗಳು ಹಾಗೂ ದಾಖಲೆಯ ಪ್ರಮಾಣದಲ್ಲಿ ಮತ ಗಳಿಕೆಯ ಮೂಲಕ ದೊಡ್ಡ ಪ್ರಮಾಣದ ಅಂತರಗಳಿಂದ ಗೆಲ್ಲಿಸಲು ವಿರಮಿಸದೇ ಶ್ರಮಿಸಬೇಕೆಂಬ ಸಂಕಲ್ಪ ಮಾಡಲಾಯಿತು.

ಶಿಗ್ಗಾವಿ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರ ಪುತ್ರ ಭರತ್ ಬೊಮ್ಮಾಯಿ, ಕೈ ಅಭ್ಯರ್ಥಿ ಯಾಸಿನ್ ಅಹ್ಮದ್ ಖಾನ್ ಪಠಾಣ್, ತಮ್ಮ ಉಮೇದುವಾರಿಕೆ ಸಲ್ಲಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ನಾಳೆ ಎಂಆರ್‌ಸಿಯಲ್ಲಿ ಪ್ರತಿಷ್ಠಿತ 'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್

ಪ್ರಸಕ್ತ ವರ್ಷದ 25ನೇ ಶ್ರೀಮಂತ ರೇಸ್; 1.2 ಕೋಟಿಗೂ ಅಧಿಕ ಮೊತ್ತದ ಬಹುಮಾನ



'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್‌ನ ಆಕರ್ಷಕ ಟ್ರೋಫಿಯನ್ನು ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಎನ್.ಸುರೇಶ್‌ಕುಮಾರ್ (ಎಡಗಡೆ) ಅನಾವರಣಗೊಳಿಸಿದರು. ಸ್ಟೀವರ್ಡ್‌ಗಳಾದ ಹೆಚ್.ಕೆ.ರಮೇಶ್, ವೈ.ಪಿ.ಉದಯಶಂಕರ್ ಉಪಸ್ಥಿತರಿದ್ದರು.

ಮೈಸೂರು, ಅ.25(ಎಂಕೆ)– ಪ್ರತಿಷ್ಠಿತ ಮೈಸೂರು ರೇಸ್ ಕ್ಲಬ್(ಎಂಆರ್‌ಸಿ)ನಲ್ಲಿ ಕ್ಯೂಬಿಕ್ ಸಿಸ್ಟಮ್ಸ್ ಸಹಯೋಗದೊಂದಿಗೆ ಅ.27 ರಂದು 'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್ ನಡೆಯಲಿದೆ.

ಮೈಸೂರು ರೇಸ್ ಕ್ಲಬ್‌ನಲ್ಲಿ ನಡೆಯುತ್ತಿರುವ 51ನೇ ಡರ್ಬಿ ರೇಸ್ ಇದಾಗಿದ್ದು, 1.2 ಕೋಟಿ ರೂ.ಗಿಂತ ಹೆಚ್ಚಿನ ಮೊತ್ತವನ್ನು ಹೊಂದಿದೆ. ಮೈಸೂರು ರೇಸಿಂಗ್ ಪ್ರಸಕ್ತ ವರ್ಷದ ಕ್ಯಾಲೆಂಡರ್‌ನ 25ನೇ ಶ್ರೀಮಂತ ರೇಸ್ ಇದಾಗಿದೆ ಎಂದು ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಅಧ್ಯಕ್ಷರೂ ಆದ ಕೈಗಾರಿಕೋದ್ಯಮಿ ಕೆ.ಎನ್.ಸುರೇಶ್‌ಕುಮಾರ್ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾನು ಅಧ್ಯಕ್ಷ ಸ್ಥಾನ ವಹಿಸಿಕೊಂಡು ಕೇವಲ 8 ದಿನಗಳಷ್ಟೇ ಆಗಿದ್ದು, ಎಲ್ಲರ ಸಹಕಾರದೊಂದಿಗೆ ಡರ್ಬಿ ರೇಸಿಂಗ್ ಹಮ್ಮಿಕೊಂಡಿದ್ದೇವೆ. ಮಾರ್ಚ್ ತಿಂಗಳಲ್ಲಿ ನಡೆಯುವ ದೇಶದ ಅತಿದೊಡ್ಡ ಇನ್ವಿಟೇಶನ್ ಕಪ್ ರೇಸಿಂಗ್ ಈವೆಂಟ್ ಅನ್ನು ಯಶಸ್ವಿಯಾಗಿ ನಡೆಸಲು 'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್ ಅತೀ ಮುಖ್ಯವಾಗಿದೆ. ಆದ್ದರಿಂದ ಎಲ್ಲರ ಸಹಕಾರ ಅಗತ್ಯ ಎಂದು ಕೋರಿದರು.

ಸಿನಿಯರ್ ಸ್ಟೀವರ್ಡ್ ಎಎಲ್‌ಆರ್‌ಎಂ ನಾಗಪ್ಪನ್ ಮಾತನಾಡಿ, 1974 ರಿಂದಲೂ ಮೈಸೂರು ಡರ್ಬಿ ರೇಸ್‌ಗಳನ್ನು ನಡೆಸಿಕೊಂಡು ಬರಲಾಗಿದೆ. ಮೊದಲ ಮೈಸೂರು ಡರ್ಬಿ ರೇಸ್ ಅನ್ನು 'ಮಿಡ್ ನೈಟ್ ಕೌಬಾಯ್' ಕುದುರೆ ಗೆದ್ದುಕೊಂಡಿತ್ತು ಅದರಂತೆ 'ಕ್ಯೂಬಿಕ್ ಮೈಸೂರು ಡರ್ಬಿ', ಮೈಸೂರು ರೇಸ್ ಕ್ಲಬ್‌ನಲ್ಲಿ ನಡೆಯುತ್ತಿರುವ 51ನೇ ಡರ್ಬಿ ರೇಸ್ ಆಗಿದ್ದು, ಕ್ಯೂಬಿಕ್ ಸಿಸ್ಟಮ್ಸ್ 25 ಲಕ್ಷ ರೂ. ಹಾಗೂ ಮೈಸೂರು ರೇಸ್ ಕ್ಲಬ್‌ನ 25 ಲಕ್ಷ ರೂ.ಗಳ ಪ್ರಾಯೋಜಕತ್ವದಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮೈಸೂರ್ ಮಾನ್ಸೂನ್ ರೇಸ್–2024ರ 16ನೇ ದಿನವಾದ ಅ.27ರ ಭಾನುವಾರ ಸಂಜೆ 4 ಗಂಟೆಗೆ 'ಕ್ಯೂಬಿಕ್ ಮೈಸೂರು ಡರ್ಬಿ' ರೇಸ್ ನಡೆಯಲಿದ್ದು, ಮೈಸೂರಿನ ತರಬೇತುದಾರ ಸಿ.ಡಿ.ಮೊನ್ನಪ್ಪ ಅವರಿಂದ ತರಬೇತಿ ಪಡೆದ ಕುದುರೆ ಅಬುಶನ್(AABUSHAN) ಹಾಗೂ ದೇಶದಾದ್ಯಂತ ಪ್ರಸಿದ್ಧ ರೇಸ್‌ಗಳಲ್ಲಿ ಭಾಗವಹಿಸಿರುವ ಪ್ರಮುಖ 5 ಕುದುರೆಗಳು ಸೇರಿ ಒಟ್ಟು 6 ಕುದುರೆಗಳು ರೇಸ್‌ನಲ್ಲಿ ಭಾಗವಹಿಸಲಿವೆ ಎಂದರು.

68.82 ಲಕ್ಷ ರೂ. ಬಹುಮಾನ!: 'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್ ವಿಜೇತರಿಗೆ ಆಕರ್ಷಕ ಟ್ರೋಫಿ ಜೊತೆಗೆ 68,82,750 ರೂ. ನಗದು ಬಹುಮಾನ ನೀಡಲಾಗುವುದು. ದ್ವಿತೀಯ ಸ್ಥಾನಕ್ಕೆ 22,94,250 ರೂ., ತೃತೀಯ ಸ್ಥಾನಕ್ಕೆ 11,47,130 ರೂ., ನಾಲ್ಕನೇ ಸ್ಥಾನಕ್ಕೆ 5,73,560 ರೂ., ಐದನೇ ಸ್ಥಾನಕ್ಕೆ 3,44,135 ರೂ. ಹಾಗೂ ಆರನೇ ಸ್ಥಾನಕ್ಕೆ 2,29,425 ರೂ.ಬಹುಮಾನ ನೀಡಲಾಗುವುದು. ಅಲ್ಲದೆ ವಿಜೇತ ಬ್ರೀಡರ್‌ಗೆ ನೀಡುವ 6,03,750 ರೂ. ಸೇರಿ 1,20,75,000 ರೂ.ಮೊತ್ತವನ್ನು ಒಳಗೊಂಡಿದೆ ಎಂದು ವಿವರಿಸಿದರು.

ಮೈಸೂರು ರೇಸ್ ಕ್ಲಬ್ ವಾರ್ಷಿಕೋತ್ಸವ ಕಪ್: 'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್ ಜೊತೆಗೆ ಇತರೆ ಪ್ರಮುಖ 6 ರೇಸ್‌ಗಳು ಅ.26 ಮತ್ತು 27 ರಂದು ನಡೆಯಲಿವೆ. ರಾಯಲ್ ಕಲ್ಕತ್ತಾ ಟರ್ಫ್ ಕ್ಲಬ್ ಟ್ರೋಫಿ, ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಟ್ರೋಫಿ, ಹೈದರಾಬಾದ್ ರೇಸ್ ಕ್ಲಬ್ ಟ್ರೋಫಿ, ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ, ಮೈಸೂರು ರೇಸ್ ಕ್ಲಬ್ ವಾರ್ಷಿಕೋತ್ಸವ ಕಪ್ ಹಾಗೂ ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ರೇಸ್‌ಗಳು ನಡೆಯ ಲಿವೆ. ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಸದಸ್ಯರಾದ ಎನ್.ಸ್ವರೂಪ್ ಕುಮಾರ್ ಪ್ರಾಯೋಜಕತ್ವದಲ್ಲಿ ನಡೆಯುವ 'ಮೈಸೂರು ರೇಸ್ ಕ್ಲಬ್ ವಾರ್ಷಿ ಕೋತ್ಸವ ಕಪ್' ರೇಸ್ ಮತ್ತೊಂದು ಆಕರ್ಷಣೆಯಾಗಿದೆ ಎಂದು ತಿಳಿಸಿದರು.

ನಂತರ 'ಕ್ಯೂಬಿಕ್ ಮೈಸೂರು ಡರ್ಬಿ –2024' ರೇಸ್‌ನ ಆಕರ್ಷಕ ಟ್ರೋಫಿಯನ್ನು ಅನಾವರಣಗೊಳಿಸಲಾಯಿತು. ಸ್ಟೀವರ್ಡ್‌ಗಳಾದ ಹೆಚ್.ಕೆ.ರಮೇಶ್, ವೈ.ಪಿ.ಉದಯ್‌ಶಂಕರ್ ಇನ್ನಿತರರಿದ್ದರು.

'ಕ್ಯೂಬಿಕ್ ಮೈಸೂರು ಡರ್ಬಿ–2024' ರೇಸ್‌ನಲ್ಲಿ ಭಾಗವಹಿಸುವ ಕುದುರೆಗಳಿವು...

ಮೈಸೂರಿನ ತರಬೇತುದಾರ ಸಿ.ಡಿ.ಮೊನ್ನಪ್ಪ ಅವರಿಂದ ತರಬೇತಿ ಪಡೆದ ಕುದುರೆ **ಅಬುಶನ್**(AABUSHAN), ತರಬೇತುದಾರ ಇರ್ಫಾನ್ ಘಟಾಲಾ ಅವರಿಂದ ತರಬೇತಿ ಪಡೆದ ಕುದುರೆ **ಮ್ಯಾಂಡರಿನೋ**(MANDARINO), ತರಬೇತುದಾರ ಜೇಮ್ಸ್ ಮೆಕಿಯೋನ್ ಅವರಿಂದ ತರಬೇತಿ ಪಡೆದ ಕುದುರೆ **ಜಾನ್ ವಿಕ್**(JOHN WICK), ತರಬೇತುದಾರ ಅಜರ್ ಅಲಿ ಅವರಿಂದ ತರಬೇತಿ ಪಡೆದ ಕುದುರೆ **ದಿ ಲೀಡರ್**(THE LEADER), ತರಬೇತುದಾರ ಎಸ್.ನರೇಡು ಅವರಿಂದ ತರಬೇತಿ ಪಡೆದ ಕುದುರೆ **ಬೋರ್ಬೋನೇರ್**(BOURBONAIRE) ಹಾಗೂ ತರಬೇತುದಾರ ಮಗನ್ ಸಿಂಗ್ ಪರ್ಮರ್ ಅವರಿಂದ ತರಬೇತಿ ಪಡೆದ ಕುದುರೆ **ಅಮಿಗೊ**(AMIGO)ಭಾಗವಹಿಸಲಿದೆ.

ನಾಮ ನಿರ್ದೇಶಕರಿಗೆ ಬಂಪರ್ ಬಹುಮಾನ...!

6 ರೇಸ್‌ನ ಉತ್ಸಾಹ ಹೆಚ್ಚಿಸುವ ನಿಟ್ಟಿನಲ್ಲಿ ವಿಜೇತ ನಾಲ್ಕು ಸ್ಥಾನಗಳನ್ನು ಸರಿಯಾದ ಕ್ರಮದಲ್ಲಿ ನಾಮ ನಿರ್ದೇಶನ ಅಥವಾ ಸೂಚಿಸಿದವರಿಗೆ ಬಂಪರ್ ಬಹುಮಾನ ದೊರೆಯಲಿದೆ. ಮೊದಲ ಬಹುಮಾನ 'ಮಾರುತಿ ಆಲ್ಟೊ ಕಾರ್', ಎರಡನೇ ಬಹುಮಾನ(ಇಬ್ಬರಿಗೆ) ಹೀರೋ ಬೈಕ್‌ಗಳು, ಮೂರನೇ ಬಹುಮಾನ(ಐದು ಮಂದಿಗೆ) ಫಾಸ್ಟ್ರಾಕ್ ಸ್ಮಾರ್ಟ್ ವಾಚ್‌ಗಳನ್ನು ನೀಡಲಾಗುವುದು.

ನ.1ರಂದು ಕನ್ನಡ ರಾಜ್ಯೋತ್ಸವ

ಮೈಸೂರು, ಅ.25– ಜಿಲ್ಲಾಡಳಿತದ ವತಿಯಿಂದ ನವೆಂಬರ್ 1 ರಂದು ನಗರದ ಓವೆಲ್ ಮೈದಾನದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭ ಹಮ್ಮಿಕೊಂಡಿದ್ದು, ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ಧ್ವಜಾರೋಹಣ ನೆರವೇರಿಸಿ, ಭುವನೇಶ್ವರಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಕನ್ನಡ ರಾಜ್ಯೋತ್ಸವ ಸಂದೇಶ ನೀಡುವರು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

5ನೇ ವರ್ಷದ ಚಿರಸ್ಮರಣೆ



ಶ್ರೀ ಎನ್. ರಾಜೇಶ್

ನಿಧನ: 26–10–2019

"ನೀವು ನಮ್ಮನ್ನಗಲಿ 5 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ"

ತಾಯಿ ಸುಶೀಲಾ ನಟರಾಜನ್, ಪತ್ನಿ ಶಿಲ್ಪಾ ರಾಜೇಶ್
ಮಕ್ಕಳು ಆರ್. ಲಾವಣ್ಯ & ಆರ್. ಸುನೈನ
ಅಣ್ಣ ಎನ್. ರವಿ ಅತ್ತಿಗೆ ಅನುಪಮ ರವಿ, ತಂಗಿ ರೂಪ ಕೇಶವಮೂರ್ತಿ
ಮತ್ತು ಕುಟುಂಬವರ್ಗದವರು ಹಾಗೂ ಸ್ನೇಹಿತರು

12ನೇ ವರ್ಷದ ಸವಿನೆನಪು



ದಿ|| ಪಿ. ಪಾಪಣ್ಣ (KRM)
ಕುರುಬಾರಹಳ್ಳಿ

ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ ಕೋರುವ
ಪತ್ನಿ ಶ್ರೀಮತಿ ಕುಮಾರಿ, ಪುತ್ರ ಪಿ.ರವಿಚಂದ್ರ
ಹಾಗೂ ಕುಟುಂಬವರ್ಗ

8ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಪುಟ್ಟಬೋರಮ್ಮ
ತೆಂಕಲಕೊಪ್ಪಲು

ಇಂತಿ ದುಃಖತಪ್ತ
ಹೆಣ್ಣು ಮಕ್ಕಳು ಮತ್ತು ಮೊಮ್ಮಕ್ಕಳು

ಬಹಿರಂಗ ಹರಾಜು ಪ್ರಕಟಣೆ

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನಲ್ಲಿ ಅಬಕಾರಿ ಅಪರಾಧಕ್ಕಾಗಿ ಜಪ್ತುಪಡಿಸಲಾದ ವಿವಿಧ ಮಾದರಿಯ ಒಟ್ಟು ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು, ಅವುಗಳನ್ನು ಹಾಲಿ ಇರುವ ಸ್ಥಿತಿಯಲ್ಲಿಯೇ ದಿನಾಂಕ:28-10-2024 ರ ಬೆಳಗ್ಗೆ 10-00 ಗಂಟೆಗೆ ಅಬಕಾರಿ ನಿರೀಕ್ಷಕರ ಕಛೇರಿ, ತಿ.ನರಸೀಪುರ ವಲಯ ಇಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಆಸಕ್ತರು ವಾಹನದ ಮಾದರಿ ಹಾಗೂ ಹೆಚ್ಚಿನ ಮಾಹಿತಿಗೆ ಅಬಕಾರಿ ನಿರೀಕ್ಷಕರು, ತಿ.ನರಸೀಪುರ ವಲಯ, ತಿ.ನರಸೀಪುರ ರವರ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ : 08227-261674

ಸಹಿ/– ಅಬಕಾರಿ ನಿರೀಕ್ಷಕರು, ತಿ.ನರಸೀಪುರ ವಲಯ, ತಿ.ನರಸೀಪುರ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2024–25
Date: 25.10.2024 /CALL-2

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ PWD Class-III and above of any State/Central Government/Public Sector Organization with Super Grade Electrical Licenced contractor (licence issued by Department of Electrical Inspectorate) ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ಏಕಲಕೋಟೆ ಪದ್ಧತಿಯಲ್ಲಿ ಒಂದು ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.42.34ಲಕ್ಷ. EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆ.ಪಿ.ಪಿ. ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ:28.10.2024 ರಿಂದ 08.11.2024 ರ ವರೆಗೆ ಪಡೆಯಬಹುದು (Down load), ಆರ್ಥಿಕ ಬಿಡ್ ತೆರೆಯುವ ದಿನಾಂಕ 11.11.2024 ರ ಬೆಳಗ್ಗೆ 10.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://kppp.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು

ವಾಸಾಸಂಇ/ಹಿಸನಿ/ಹಾಸನ/600/ಕೆಎಸ್‌ಎಂಸಿಎ/2024–25

ಮಲೆನಾಡು ಗಿಡ್ಡ ದೇಸಿ ಹಸುವಿನ ಹಾಲು (ಎ2 ಮಿಲ್ಕ್) ದೊರೆಯುತ್ತದೆ.
ಸಂಪರ್ಕಿಸಿ
7676602704 | 9880686583
9739999499

SALES EXECUTIVES
required for a Paint Company.
Any qualification.
Salary no bar.
Contact:
94481 05774

Sri Murugan Pharma
@
Vijayanagar 3rd Stage
REQUIRED
STAFFS
Freshers and Experienced
Attractive Salary
Call: 99802 53762
Email: srimuruganpharmacy mysuru@gmail.com

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಜಿಲ್ಲಾ ಪಂಚಾಯತ್, ಮೈಸೂರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ(ರಿ), ಅಂಧತ್ವ ನಿಯಂತ್ರಣಾ ವಿಭಾಗ, ಮೈಸೂರು.
ಇಮೇಲ್:dlo.lbmysore@gmail.com ದೂರವಾಣಿ ಸಂಖ್ಯೆ:2441231

ಸಂಖ್ಯೆ:ಜಿಆಕುಕಸಂ/ಅಂನಿವಿ/ಮೈ/08/2024–25 ದಿನಾಂಕ: 24.10.2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಮೈಸೂರು ಜಿಲ್ಲೆಯ ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಸಾರ್ವಜನಿಕ ಆಸ್ಪತ್ರೆ ಹೆಚ್.ಡಿ.ಕೋಟೆ ತಾಲ್ಲೂಕು ಇಲ್ಲಿನ ಕಣ್ಣಿನ ವಿಭಾಗದ ಅಭಿವೃದ್ಧಿಗೆ ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (ಕೆಟಿಪಿಪಿ) 1999 ನಿಯಮಗಳು 2000ರ ಪ್ರಕಾರ ಟೆಂಡರ್ ಮೂಲಕ ಪಡೆಯುವ ಬಗ್ಗೆ.

ಟೆಂಡರ್ ಮಾಹಿತಿ

ಟೆಂಡರ್ ಪ್ರಕಟಣೆ ದಿನಾಂಕ	ದಿನಾಂಕ: 25.10.2024
ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ	ದಿನಾಂಕ: 25.10.2024 ಮಧ್ಯಾಹ್ನ 03.00 ಗಂಟೆಗೆ
ಪ್ರೀಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ	ದಿನಾಂಕ: 06.11.2024 ಮಧ್ಯಾಹ್ನ 03.00 ಗಂಟೆಗೆ
ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ	ದಿನಾಂಕ: 25.11.2024 ಮಧ್ಯಾಹ್ನ 03.00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 28.11.2024 ಬೆಳಿಗ್ಗೆ 11.00 ಗಂಟೆಗೆ
ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿ: 30.11.2024 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರ
ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2.5%)	ರೂ.26,375/–
ಭದ್ರತಾ ಠೇವಣಿ (5%)	ರೂ.52,750/–
ಟೆಂಡರ್‌ಗೆ ಇಟ್ಟ ಮೊತ್ತ	ರೂ.10,55,000/–
ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ: 9448556803	ಕಾರ್ಯಕ್ರಮ ವ್ಯವಸ್ಥಾಪಕರು/ಸದಸ್ಯ ಕಾರ್ಯದರ್ಶಿಗಳು ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ವಿಭಾಗ, ಮೈಸೂರು ಜಿಲ್ಲೆ, ಮೈಸೂರು.

ಸಹಿ/– ಕಾರ್ಯಕ್ರಮ ವ್ಯವಸ್ಥಾಪಕರು / ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ),
ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ವಿಭಾಗ, ಮೈಸೂರು ಜಿಲ್ಲೆ, ಮೈಸೂರು.

DIPR/MYS/KAVITA/723/2024-25

भारत सरकार
कारपोरेट कार्य मंत्रालय
त्वरित कॉर्पोरेट समापन प्रसंस्करण केंद्र (सी-पेस),
आई.आई.सी.ए. बिल्डिंग, 7वी मंज़िल,
प्लाट P-6,7,8, से.-5, आई.एम.टी. मानेसर, गुड़गाँव,
हरियाणा - 122050.
Email: roc.cpace@mca.gov.in

सत्यमेव जयते

Government of India
Ministry of Corporate Affairs
Centre for Processing Accelerated Corporate Exit (C-PACE)
IICA Building, 7th Floor,
Plot P-6,7,8, Sector-5, IMT Manesar,
Gurgaon, Haryana - 122050.
Email: roc.cpace@mca.gov.in

FORM No. STK -6
PUBLIC NOTICE

[Pursuant to sub-section (2) and sub-section (4) of section 248 of the Companies Act, 2013 and rule 7 of the Companies (Removal of Names of Companies from the Register of Companies) Rules, 2016]

Public Notice: ROC/C-PACE/STK-2/248(2)/2024-25/916 Date: -10/09/2024

Reference:

(1) In the matter of striking off or removal of names of (30) companies in the state of KARNATAKA under section 248 of the Companies Act, 2013 in respect of:

S.NO	Work Item	CIN	Company Name
1	AA10052029	U62090KA2024PTC183128	FLOC DESIGN TECHNOLOGIES PRIVATE LIMITED
2	AA9827154	U74909KA2023PTC172538	EARTHA & LLOYDS RESOLUTIONS PRIVATE LIMITED
3	AA9916421	U72900KA2022PTC165170	EPILOX TECHNOLOGIES PRIVATE LIMITED
4	AA9865894	U15339KA2022PTC162300	KARBURANT FOODS PRIVATE LIMITED
5	AA9833283	U74140KA2009PTC050345	KNOWLEDGEWORKS CONSULTING PRIVATE LIMITED
6	AA10034427	U70109KA2021PTC146204	NEON MANGO HOLDINGS PRIVATE LIMITED
7	AA9767070	U18101KA2001PTC029749	GAYLORD MACHINERY PRIVATE LIMITED
8	AA9916759	U72900KA2021PTC148070	MAD DONKEY ESPORTS PRIVATE LIMITED
9	AB0060806	U51909KA2020PTC138016	GRANVINO PRIVATE LIMITED
10	AA9720991	U15490KA2020PTC132681	KATAKARO INDIA PRIVATE LIMITED
11	AA10015188	U41000KA2020PTC132972	CLOUD RIVER TECHNOLOGIES PRIVATE LIMITED
12	AB0043914	U74999KA2020PTC133265	DHAVALAGI ENTERTAINERS PRIVATE LIMITED
13	AA9677516	U72900KA2019PTC125876	STEYIN INNOVATIONS PRIVATE LIMITED
14	AA9784530	U15490KA2019PTC126333	NEAR BAKE SERVICES PRIVATE LIMITED
15	AA9506663	U74999KA2019PTC124573	TRANSAFFAIRS SUPPLY CHAIN SOLUTIONS PRIVATE LIMITED
16	AA9989001	U14210KA2018PTC111579	SHANMUKHA GRANITE EXPO PRIVATE LIMITED
17	AA9766024	U55209KA2018PTC110219	JASSBYS DAKSHIN HOTELS PRIVATE LIMITED
18	AA9745854	U74999KA2017PTC105822	FROZEN STONE TECHNOLOGIES INDIA PRIVATE LIMITED
19	AA9775447	U72200KA2017PTC107071	VICILOCUZ SOLUTIONS PRIVATE LIMITED
20	AA9808706	U74999KA2016PTC094353	STORYHOUSE PRODUCTIONS PRIVATE LIMITED
21	AA9970495	U74900KA2014FTC073226	TIGER EXECUTIVE SERVICES PRIVATE LIMITED
22	AA9703704	U74900KA2015OPC084421	WI CONTENT SOLUTIONS (OPC) PRIVATE LIMITED
23	AA9786509	U74900KA2014PTC077272	JASSBYS PUBS PRIVATE LIMITED
24	AA9834049	U80904KA2008PTC047148	MANAS CENTRE FOR TRAINING AND DEVELOPMENT PRIVATE LIMITED
25	AB0146838	U51909KA2019PTC126856	VENUGRAM FIT AGRO PRIVATE LIMITED
26	AB0041342	U62099KA2023OPC182512	BLINKLOGIC SOLUTIONS (OPC) PRIVATE LIMITED
27	AB0045481	U47912KA2023PTC177596	MANZOKU INDIA PRIVATE LIMITED
28	AA10034000	U21001KA2023PTC177073	ALLEVIATIVE HEALTH SOLUTIONS PRIVATE LIMITED
29	AA10011175	U51909KA2022PTC158410	MADILU EXIM INDIA PRIVATE LIMITED
30	AA10033209	U74999KA2021FTC145740	JST CONSULTANCY SERVICES PRIVATE LIMITED

(2). Notice is hereby given that the Registrar of Companies had received applications from the above-mentioned companies under section 248(2) of the Companies Act, 2013 for removal of its/their name (s) from the register of companies either on the ground that they have failed to commence business within one year of their incorporation or on the ground that the company(ies) is/are not carrying on any business or operation for a period of two immediately preceding financial years and has/have not made any application (s) within such period for obtaining the status of a dormant company under section 455 of the Companies Act, 2013 or the company(ies) have obtained the status of dormant company/subscribers to the memorandum have not paid the subscription which they had undertaken to pay at the time of incorporation of a company and a declaration to this effect has not been filed within one hundred and eighty days of its incorporation under subsection (1) of section 10A/ have not been carrying on any business or operations, as revealed after the physical verification carried out under sub- section (9) of section 12, but it/they do not wish to continue its/their registration as companies and have, therefore, requested for removal/strike off of its/their names from the register of companies.

(3) Accordingly, the Registrar of Companies proposes to remove or strike off the names of the above-mentioned companies from the Register of Companies.

(4) Any person objecting to the proposed removal or striking off name of the companies from the register of companies may send his or her objection to the office address mentioned here above within thirty days from the date of publication of this notice.

Irkan Tirkey
Assistant Registrar
Centre for Processing Accelerated Corporate Exit

CBC 07123/11/0461/2425

ಮೈಸೂರು ಮಿತ್ರ ಶನಿವಾರ 26 ಅಕ್ಟೋಬರ್ 2024

2047ಕ್ಕೆ ದೇಶದಲ್ಲಿ ವಿಕಸಿತ ಭಾರತ ನಿರ್ಮಾಣ: ಜಗದೀಪ್ ಧನಕರ್

ಆದಿಚುಂಚನಗಿರಿ ವಿವಿಯಿಂದ ಉಪ ರಾಷ್ಟ್ರಪತಿಗಳ ನೇತೃತ್ವದಲ್ಲಿ ಸಂವಾದ ಕಾರ್ಯಕ್ರಮ ಯಶಸ್ವಿ

ಮಂಡ್ಯ/ಆದಿಚುಂಚನಗಿರಿ, ಅ.25 (ಮೋಹನ್‌ರಾಜ್)– ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಶಿಕ್ಷಣದ ಜೊತೆಗೆ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಬೇಕಿದೆ. ಇವೆಲ್ಲವುದರ ಕ್ರೋಢೀಕರಣದಿಂದ 2047ರ ವೇಳೆಗೆ ದೇಶದಲ್ಲಿ ವಿಕಸಿತ ಭಾರತ ನಿರ್ಮಾಣವಾಗಲಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಅಭಿಪ್ರಾಯಪಟ್ಟರು.

ಶುಕ್ರವಾರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಬೆಳ್ಳೂರಿನ ಬಿಜಿಎಸ್ ಆಡಿಟೋರಿಯಂನಲ್ಲಿ ಶ್ರೀ ಅದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಹಾಗೂ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀ ಕಾಲಭೈರವೇಶ್ವರ ಹಾಗೂ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪ ನಮನ ನೆರವೇರಿಸಿ ಅವರು ಮಾತನಾಡಿದರು.

ದೇಶದ ಜಿಡಿಪಿ ದರ ಹೆಚ್ಚಾಗಿ ಭಾರತ ಅಭಿವೃದ್ಧಿ ರಾಷ್ಟದತ್ತ ದಾಪುಗಾಲಿಟ್ಟಿದೆ. ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಪ್ರಮಾಣ ಕಡಿಮೆಯಾಗಿದ್ದು, ಎಲ್ಲಕ್ಕಿಂತ ಹೆಚ್ಚಾಗಿ ಯುವಜನತೆ ತಾಯಿ ಮತ್ತೆ ಭೂತಾಯಿಯ ಋಣವನ್ನು ಮರೆಯಬಾರದು. ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಕಲ್ಪನೆಯನಂತೆ ಪ್ರತಿಯೊಬ್ಬರೂ ಕನಸು ಕಾಣಬೇಕು. ಅದರಂತೆ ವಿಕಸಿತ ಭಾರತವನ್ನಾಗಿ ಮಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಆದಿಚುಂಚನಗಿರಿ ಸಂಸ್ಥೆ ಶಿಕ್ಷಣದ ಜೊತೆಗೆ ಸಂಸ್ಕೃತಿಯ ಸಾರವನ್ನು ಸಾರುತ್ತಿದೆ. ಮಂದಿರ, ಮಠದ ಕಲ್ಪನೆಯನ್ನು ಸಹ ನೀಡುತ್ತಿದೆ. ಶ್ರೀ ಮಠ ರಾಜ್ಯದಲ್ಲಿ ಅಷ್ಟೇ ಅಲ್ಲದೇ ವಿದೇಶ ಸೇರಿದಂತೆ 26 ಶಾಖಾ ಮಠದ ಜೊತೆಗೆ 100 ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ಅಂಧ ಹಾಗೂ ವಿಶೇಷಚೇತನ ಮಕ್ಕಳಿಗೆ ಶಾಲೆಗಳನ್ನು ಪ್ರಾರಂಭಿಸಿ ಸನಾತನ ಧರ್ಮವನ್ನು ಸಾರುತ್ತಿದೆ. ಈ ಸಂಸ್ಥೆಯ ಕಾರ್ಯವೈಖರಿಯಿಂದ ಶಿಕ್ಷಣ ಹಾಗೂ ಸನಾತನ ಧರ್ಮ ಬೆಳೆಯುವಂತಾಗಿದೆ ಎಂದು ಶ್ಲಾಘಿಸಿದರು.

ಆದಿಚುಂಚನಗಿರಿ ಮಠವು ಶಿಕ್ಷಣ, ಧಾರ್ಮಿಕ, ಸಮಾಜ ಸೇವಾ ಕ್ಷೇತ್ರದಲ್ಲಿ ಬೆಳೆಯುವುದಕ್ಕೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಶ್ರಮವಿದೆ. ಪ್ರಸ್ತುತ ನಿರ್ಮಲಾನಂದ ಶ್ರೀಗಳು ಸಹ ಮಠವನ್ನು ಉತ್ತುಂಗದತ್ತ ಕೊಂಡೊಯ್ಯುತ್ತಿದ್ದು, ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಶ್ರೀಮಠವು ಕ್ರಾಂತಿಕಾರಿ ಹೆಜ್ಜೆಯನ್ನಿಡುತ್ತಾ ಸಾಗುತ್ತಿದೆ. ಶಿಕ್ಷಣ ಕ್ಷೇತ್ರದ ಕ್ರಾಂತಿಯಿಂದ ಹೊಸ ಹೊಸ ಯುವ ಪ್ರತಿಭೆಗಳು ಸೃಷ್ಟಿಯಾಗುತ್ತಾರೆ. ಹೊಸ ಯುವ ಪ್ರತಿಭೆಗಳಿಂದ ವಿಕಸಿತ ಭಾರತ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದರು.



ಬೆಳ್ಳೂರಿನ ಬಿಜಿಎಸ್ ಆಡಿಟೋರಿಯಂನಲ್ಲಿ ಶ್ರೀ ಅದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಹಾಗೂ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ ಸಂವಾದ ಕಾರ್ಯಕ್ರಮವನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸಿದರು. ಈ ವೇಳೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಉಪಸ್ಥಿತರಿದ್ದರು.

ಸಾಮಾನ್ಯ ಕುಟುಂಬದಲ್ಲಿ ಜನಿಸಿ ದೇಶದ ಪ್ರಧಾನಮಂತ್ರಿ ಪಟ್ಟಕ್ಕೇರಿದ ಕರ್ನಾಟಕದವರಾದ ಹೆಚ್.ಡಿ.ದೇವೇಗೌಡರ ಕಾರ್ಯ ಮೆಚ್ಚುವಂತಹದ್ದು. ಅಲ್ಪ ಅವಧಿಗೆ ದೇಶದ ಪ್ರಧಾನಿಯಾಗಿ ಚುಕ್ಕಾಣಿ ಹಿಡಿದ ಅವರು, ದೇಶದ ಅಭಿವೃದ್ಧಿಗೆ ಹಲವು ಕೊಡುಗೆಗಳನ್ನು ಕೊಟ್ಟಿದ್ದಾರೆ. ಅದರಂತೆಯೇ ಕರ್ನಾಟಕಕ್ಕೂ ಅವರ ಸೇವೆ ಅವಿಸ್ಮರಣೀಯವಾಗಿ ಸಿಕ್ಕಿದೆ. ದೇಶ ಮತ್ತು ರಾಜ್ಯಕ್ಕೆ ಅವರ ಕೊಡುಗೆ ಶ್ಲಾಘನೀಯ ಎಂದು ತಿಳಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮಾತನಾಡಿ, ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿ 50 ವರ್ಷಗಳು ಕಳೆದಿದೆ. ಬಾಲಗಂಗಾಧರನಾಥ ಸ್ವಾಮೀಜಿಗಳ ಕಲ್ಪನೆಯಂತೆ ವೈದ್ಯಕೀಯ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿದ್ದು, ಇದರಿಂದಾಗಿ ಗ್ರಾಮೀಣ ಭಾಗದ ಈ ಪ್ರದೇಶ ಅಭಿವೃದ್ಧಿಯಾಗಲು ಪ್ರಾರಂಭವಾಯಿತು. ರೈತ ಕುಟುಂಬದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪ್ರಾರಂಭವಾದ ಈ ಸಂಸ್ಥೆಯ ಯಶಸ್ಸು ಬಾಲಗಂಗಾಧರ ನಾಥ ಸ್ವಾಮೀಜಿಗಳಿಗೆ ಸಲ್ಲುತ್ತದೆ ಎಂದು ಶ್ಲಾಘಿಸಿದರು.

ಈ ಸಂಸ್ಥೆ ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಸಮುದಾಯದ ಜನರಿಗೂ ಸಹಕಾರಿಯಾಗಿದೆ. ಕರ್ನಾಟಕ ಮಾತ್ರವಲ್ಲದೇ ವಿವಿಧ ರಾಜ್ಯದ ಮಕ್ಕಳು ಸಹ ಇಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇಂತಹ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಿನ್ನೆಲೆ ಹೊಂದಿರುವ ಶ್ರೀಮಠವು ಇನ್ನು ಎತ್ತರಕ್ಕೆ ಬೆಳೆಯಬೇಕು. ಉಪರಾಷ್ಟ್ರಪತಿಗಳು ಸಹ ಈ ಸಂಸ್ಥೆಯ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಹೆಮ್ಮೆಯ ಸಂಗತಿ ಎಂದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿ, ಈ ಹಿಂದೆ ರಾಷ್ಟ್ರಪತಿಯಾಗಿದ್ದ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ಅವರು ನಮ್ಮ ವಿದ್ಯಾರ್ಥಿಗಳೊಂದಿಗೆ ಸಂವಾದವನ್ನು ನಡೆಸಿದ್ದರು. 20 ವರ್ಷಗಳ ನಂತರ ರಾಷ್ಟ್ರದ ಉಪರಾಷ್ಟ್ರಪತಿಗಳು ಸಂವಾದ ನಡೆಸಲು ಆಗಮಿಸಿದ್ದಾರೆ. ನಮ್ಮ ಸಂಸ್ಥೆಯಲ್ಲಿರುವ ಶೇ.90ರಷ್ಟು ಮಕ್ಕಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಆಗಿದ್ದಾರೆ. ಇಂದಿನ ವೈಜ್ಞಾನಿಕ ಹಾಗೂ ತಂತ್ರಜ್ಞಾನಕ್ಕೆ ತಕ್ಕಂತೆ ಡಿಜಿಮೆಡ್ ಆಪ್ ಬಿಡುಗಡೆಗೊಳಿಸಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳು ಉತ್ತಮ ಸಾಧಕರಾಗಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಲಿ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಡಿಜಿಮೆಡ್ ಆಪ್ ಬಿಡುಗಡೆಗೊಳಿಸಿ ವಿದ್ಯಾರ್ಥಿಗಳೊಂದಿಗೆ ಕೆಲಕಾಲ ಸಂವಾದ ನಡೆಸಿದರು.

ವೇದಿಕೆಯಲ್ಲಿ ಉಪರಾಷ್ಟ್ರಪತಿ ಅವರ ಧರ್ಮಪತ್ನಿ ಸುದೇಶ್ ಧನಕರ್, ರಾಜ್‌ಕೋಟ್‌ನ ಪರಮಾನಂದ ಸರಸ್ವತಿ ಸ್ವಾಮೀಜಿ, ವಿಶ್ವವಿದ್ಯಾನಿಲಯ ಉಪಕುಲಪತಿ ಡಾ.ಶೇಖರ್ ಸೇರಿದಂತೆ ಶ್ರೀ ಮಠದ ಹಾಗೂ ವಿಶ್ವವಿದ್ಯಾನಿಲಯದ ಪ್ರಮುಖರು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ಆದಿಚುಂಚನಗಿರಿ ವಿವಿ ಹೆಲಿಪ್ಯಾಡ್‌ಗೆ ಆಗಮಿಸಿದ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯಿತಿ ಸಿಇಓ ಶೇಕ್ ತನ್ವೀರ್ ಆಸೀಫ್ ಸ್ವಾಗತಿಸಿದರು.

ಬಳಿಕ ವಿವಿ ಆವರಣದಲ್ಲಿ ಗಿಡ ನೆಟ್ಟು ಆದಿಚುಂಚನಗಿರಿ ಶ್ರೀಮಠದ ಆವರಣದಲ್ಲಿರುವ ಶ್ರೀ ಕಾಲ ಭೈರವೇಶ್ವರ ದರ್ಶನ ಪಡೆದರು. ನಂತರ ಸಂವಾದ ಕಾರ್ಯಕ್ರಮಕ್ಕೆ ಭಾಗಿಯಾಗಲು ತೆರಳಿದರು.

ಅ.28, ಲೈಂಗಿಕ ದೌರ್ಜನ್ಯ, ಕಿರುಕುಳದಿಂದ ಮಹಿಳೆಯರ ರಕ್ಷಣೆ ಕುರಿತು ಕಾರ್ಯಾಗಾರ

ಮಂಡ್ಯ,ಅ.25– ರಾಷ್ಟ್ರೀಯ ಮಹಿಳಾ ಆಯೋಗ, ಬೆಂಗಳೂರು ರಾಜ್ಯ ಮಹಿಳಾ ಆಯೋಗ, ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಲೈಂಗಿಕ ದೌರ್ಜನ್ಯ, ಕಿರುಕುಳದಿಂದ ಮಹಿಳೆಯರ ರಕ್ಷಣೆ ಕುರಿತು ಸರ್ಕಾರದ ಅಧಿಕಾರಿಗಳು, ಸಿಬ್ಬಂದಿಗಳು, ಆಂತರಿಕ ದೂರು ನಿವಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಅ.28 ರಂದು ಬೆಳಿಗ್ಗೆ 10 ಗಂಟೆಗೆ ಮಂಡ್ಯ ಪಿಇಎಸ್ ಇಂಜಿನಿಯರಿಂಗ್ ಕಾಲೇಜು ಆವರಣದ ಪ್ಲೇಸ್‌ಮೆಂಟ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಾಗಾರವನ್ನು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯ ಕಾರ್ಯದರ್ಶಿ ಮೀನಾಕ್ಷಿ ನೇಗಿ ಉದ್ಘಾಟಿಸಲಿದ್ದು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಆರ್.ಲತಾ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ಕಾರ್ಯಾಗಾರಕ್ಕೆ ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಆಗಮಿಸಲಿದ್ದಾರೆ.

ನಾಗಮಂಗಲದಲ್ಲಿ ಕೋಟೆ ವಿದ್ಯಾ ಗಣಪತಿ ಅದ್ಧೂರಿ ವಿಸರ್ಜನೆ



ಶ್ರೀ ಕೋಟೆ ವಿದ್ಯಾ ಗಣಪತಿ ಸೇವಾ ಸಮಿತಿಯಿಂದ ಪ್ರತಿಷ್ಠಾಪಿಸಲಾಗಿದ್ದ 72ನೇ ವರ್ಷದ ಗಣೇಶೋತ್ಸವ ವಿಸರ್ಜನಾ ಮಹೋತ್ಸವ ವಿಜೃಂಭಣೆಯಿಂದ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆಯಿತು.

ನಾಗಮಂಗಲ, ಅ.25– ನಾಗಮಂಗಲದ ಶ್ರೀ ಕೋಟೆ ವಿದ್ಯಾ ಗಣಪತಿ ಸೇವಾ ಸಮಿತಿಯಿಂದ ಪ್ರತಿಷ್ಠಾಪಿಸಲಾಗಿದ್ದ 72ನೇ ವರ್ಷದ ಗಣೇಶೋತ್ಸವ ವಿಸರ್ಜನಾ ಮಹೋತ್ಸವ ಹಾಗೂ ವಿಜಯೋತ್ಸವ ಮೆರವಣಿಗೆ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಅದ್ಧೂರಿಯಾಗಿ ನೆರವೇರಿತು.

ಶ್ರೀ ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ.ನಿರ್ಮಲಾನಂದ ಸ್ವಾಮೀಜಿ ಅವರು ವಿದ್ಯುಕ್ತವಾಗಿ ಶ್ರೀ ಕೋಟೆ ವಿದ್ಯಾ ಗಣಪತಿಗೆ ಪೂಜೆ ಸಲ್ಲಿಸುವ ಮೂಲಕ ಮಹೋತ್ಸವಕ್ಕೆ ಚಾಲನೆ ನೀಡಿದರು.


ಸುಮಾರು ಐದಾರು ತಲೆಮಾರುಗಳಿಂದ ನಾಗಮಂಗಲದ ಕೋಟೆ ಬಾಗಿಲಿನಲ್ಲಿ ಪ್ರತಿಷ್ಠಾಪಿಸಿ ಗಣೇಶನ ಪೂಜೆಯನ್ನು ನಡೆಸಿಕೊಂಡು ಬಂದಿರುವ ಹಿನ್ನೆಲೆಯಲ್ಲಿ ಈ ಗಣಪತಿಗೆ ಕೋಟೆ ವಿದ್ಯಾ ಗಣಪತಿ ಎಂಬ ಹೆಸರಿನಿಂದಲೇ ಖ್ಯಾತವಾಗಿದೆ. 72 ವರ್ಷಗಳ ಗತವೈಭವದ ಇತಿಹಾಸದೊಂದಿಗೆ ಹೆಚ್ಚು ಜನಾಕರ್ಷಕವಾಗಿದ್ದು, ಪಟ್ಟಣದ ಕೋಟೆ ಬೀದಿಯಿಂದ ಆರಂಭವಾದ ಮೆರವಣಿಗೆ ಪಟ್ಟಣದ ವಿವಿಧ ಬೀದಿಗಳಲ್ಲಿ ಆಕರ್ಷಕ ಕಲಾತಂಡಗಳೊಂದಿಗೆ ಸಾಗಿ, ಬಳಿಕ ರಾತ್ರಿ ಹಂಪಿ ಅರಸಿನ ಕೊಳದಲ್ಲಿ ದೀಪಾಲಂಕೃತ ತೆಪ್ಪೋತ್ಸವದೊಂದಿಗೆ ವಿಸರ್ಜನೆ ಮಾಡಲಾಯಿತು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಶಾಸಕ ಕೆ.ಸುರೇಶ್‌ಗೌಡ ಸೇರಿದಂತೆ ಹಲವು ಕೋಟೆ ವಿದ್ಯಾ ಗಣಪತಿ ಅವರ ವಿಸರ್ಜನಾ ಮಹೋತ್ಸವದಲ್ಲಿ ಭಾಗಿಯಾಗಿದ್ದರು. ಈ ಹಿಂದೆ ನಾಗಮಂಗಲದಲ್ಲಿ ಗಣಪತಿ ವಿಸರ್ಜನೆ ವೇಳೆ ಉಂಟಾದ ಗಲಭೆ ಮರುಕಳಿಸಬಾರದೆಂಬ ನಿಟ್ಟಿನಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು.

ನ.14ರಿಂದ ಕೃಷಿ ಮೇಳ

ಮಂಡ್ಯ: ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯವು ಕೃಷಿ ಮೇಳವನ್ನು ನ.14ರಿಂದ 17 ರವರೆಗೆ ಬೆಂಗಳೂರು ಜಿಕೆವಿಕೆಯಲ್ಲಿ ಆಯೋಜಿಸಲಾಗಿದೆ. ಮಂಡ್ಯ ಜಿಲ್ಲೆಯ ಆಸಕ್ತ ರೈತರು ಕೃಷಿ ಮೇಳದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬಹುದು ಎಂದು ವಿಸಿ ಫಾರಂ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಂಡವಪುರ ಕಸಬಾ ಕೃಷಿ ಪತ್ತಿನ ಸಂಘದ ನಿರ್ದೇಶಕ ನಾಲೆಗೆ ಹಾರಿ ಆತ್ಮಹತ್ಯೆ

ಪಾಂಡವಪುರ,ಅ.25– ಪಾಂಡವಪುರ ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಹಿರೇಮರಳಿ ಗ್ರಾಮದ ಸ್ನೇಹಲೋಕ ಚಲುವರಾಜು(47) ಗುರುವಾರ ಸಂಜೆ ವಿಶ್ವೇಶ್ವರಯ್ಯ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಮೃತ ಚಲವರಾಜು ಸಾಯುವ ಮುನ್ನ ಡೆಟ್‌ನೋಟ್ ಬರೆದಿಟ್ಟಿದ್ದು ಅದರಲ್ಲಿ ಯಾರೋ ಮಾಡಿದ ತಪ್ಪಿಗೆ ನಾನು ಸಾಯುತ್ತಿದ್ದೇನೆ. ನನ್ನ ಎಲ್ಲಾ ಸ್ನೇಹಿತರಿಗೆ ನನ್ನದೊಂದು ಮನವಿ. ನನ್ನ ಅಪ್ಪ, ಅಮ್ಮ, ಹೆಂಡತಿ, ಮಕ್ಕಳನ್ನು ಕೈಬಿಡಬೇಡಿ, ನಿಮ್ಮ ಮಕ್ಕಳಂತೆ ಸಹಾಯ ಮಾಡಿ ಎಂದು ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮೃತ ದೇಹವು ಮಂಡ್ಯ ತಾಲೂಕಿನ ಯಲಿಯೂರು ಗ್ರಾಮದ ಬಳಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಶುಕ್ರವಾರ ಬೆಳಿಗ್ಗೆ ದೊರೆತಿದೆ. ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿಯೇ ಅಂತಿಮ ದರ್ಶನ ಪಡೆದು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಮೃತರಿಗೆ ಪತ್ನಿ, ಗಂಡು–ಹೆಣ್ಣು ಮಗುವಿದೆ. ಶುಕ್ರವಾರ ಸಂಜೆ ಹಿರೇಮರಳಿ ಗ್ರಾಮದಲ್ಲಿ ಅಂತ್ಯಸಂಸ್ಕಾರ ನಡೆಯಿತು. ಈ ವೇಳೆ ಗ್ರಾಮಸ್ಥರು ಭಾಗವಹಿಸಿ ಮೃತರ ಬಗ್ಗೆ ಮರುಕ ವ್ಯಕ್ತಪಡಿಸುತ್ತಿದ್ದುದು ಕಂಡು ಬಂದಿತು. ಘಟನೆ ಸಂಬಂಧ ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರನೇ ಪುಟದಿಂದ

ಶ್ರೀಮತಿ ಪಾರ್ವತಿ ವಿಚಾರಣೆ

ವಿಚಾರಣೆ ಎದುರಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು ಎಂದು ಹೇಳಲಾಗಿದೆ.

ಈ ಪ್ರಕರಣದಲ್ಲಿ ದೇವರಾಜು ಎಂಬುವರು ಕೆಸರೆ ಸರ್ವೆ ನಂ.464ರಲ್ಲಿನ 3.16 ಎಕರೆ ಜಮೀನನ್ನು ಸಿದ್ದರಾಮಯ್ಯ ಬಾಮೈದ ಮಲ್ಲಿಕಾರ್ಜುನಸ್ವಾಮಿ ಅವರಿಗೆ ಮಾರಾಟ ಮಾಡಿದ್ದರು. ಈ ಜಮೀನನ್ನು ಮಲ್ಲಿಕಾರ್ಜುನಸ್ವಾಮಿ ತನ್ನ ಸಹೋದರಿ ಪಾರ್ವತಿ ಅವರಿಗೆ ದಾನ ಮಾಡಿದ್ದರು. ಮುಡಾ ಜಮೀನನ್ನು ಭೂ ಸ್ವಾಧೀನ ಮಾಡಿಕೊಳ್ಳದೆಯೇ ಬಡಾವಣೆ ನಿರ್ಮಿಸಿದ ಕಾರಣದಿಂದ ಪರಿಹಾರವಾಗಿ ಪಾರ್ವತಿಯವರಿಗೆ ವಿಜಯನಗರ ಬಡಾವಣೆಯಲ್ಲಿ 14 ನಿವೇಶನಗಳನ್ನು ಮಂಜೂರು ಮಾಡಿತ್ತು ಪ್ರಕರಣ ವಿವಾದಾತ್ಮಕವಾಗಿ ಮಾರ್ಪಟ್ಟ ನಂತರ ಪಾರ್ವತಿ ಅವರು ಎಲ್ಲಾ 14 ನಿವೇಶನಗಳನ್ನು ಮುಡಾಗೆ ಹಿಂತಿರುಗಿಸಿದ್ದರು.

ಪ್ರಕರಣದಲ್ಲಿ ಸಹೋದರನಿಂದ ಭೂಮಿಯನ್ನು ದಾನ ಪಡೆದು ನಂತರ ಮುಡಾದಿಂದ ಪರಿಹಾರವಾಗಿ 14 ನಿವೇಶನಗಳನ್ನು ಪಡೆದಿರುವುದು ಅಕ್ರಮ ಎಂಬುದು ಪಾರ್ವತಿ ಅವರ ಮೇಲಿನ ಆರೋಪವಾಗಿದ್ದು, ಈ ಕುರಿತು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಳ್ಳುವ ಸಲುವಾಗಿ ತನಿಖಾಧಿಕಾರಿ ಪಾರ್ವತಿ ಅವರಿಗೆ ನೋಟಿಸ್ ನೀಡಿದ್ದರು. ಈ ಹಿನ್ನಲೆಯಲ್ಲಿ ಅವರು ಇಂದು ಲೋಕಾಯುಕ್ತ ಕಚೇರಿಗೆ ಹಾಜರಾಗಿ ತನಿಖಾಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದ್ದಲ್ಲದೇ, ತನಿಖಾಧಿಕಾರಿ ಕೇಳಿದ ಕೆಲವು ದಾಖಲೆಗಳನ್ನು ನೀಡಿದ್ದಾರೆ ಎಂದು ಹೇಳಲಾಗಿದೆ. ಪಾರ್ವತಿ ಅವರ ಹೇಳಿಕೆಯನ್ನು ತನಿಖಾಧಿಕಾರಿಗಳು ಸಂಪೂರ್ಣವಾಗಿ ದಾಖಲಿಸಿಕೊಂಡು, ಅಗತ್ಯ ಬಿದ್ದರೆ ಮತ್ತೆ ವಿಚಾರಣೆಗೆ ಹಾಜರಾಗಬೇಕಾಗುತ್ತದೆ ಎಂದು ತಿಳಿಸಿ ಕಳುಹಿಸಿಕೊಟ್ಟರು ಎಂದು ಹೇಳಲಾಗಿದೆ.

ಈ ಪ್ರಕರಣದಲ್ಲಿ 4ನೇ ಆರೋಪಿಯಾಗಿರುವ ಜಮೀನು ಮಾರಾಟಗಾರ ದೇವರಾಜು, ಜಮೀನು ಖರೀದಿ ಮಾಡಿ ಸಹೋದರಿಗೆ ದಾನ ಮಾಡಿದ 3ನೇ ಆರೋಪಿ ಮಲ್ಲಿಕಾರ್ಜುನಸ್ವಾಮಿ ಅವರು ಈ ಹಿಂದೆಯೇ ಮೈಸೂರು ಲೋಕಾಯುಕ್ತ ಕಚೇರಿಗೆ ಆಗಮಿಸಿ ವಿಚಾರಣೆ ಎದುರಿಸಿದ್ದರು. ಈ ಜಮೀನನ್ನು ಡಿ–ನೋಟಿಫೈ ಮಾಡಿದ್ದ ಮೈಸೂರು ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿಯೂ ಆದ ಹಾಲಿ ಕಾಂಗ್ರೆಸ್ ಸಂಸದ ಕುಮಾರ ನಾಯಕ್ ಅವರೂ ಕೂಡ ತನಿಖಾಧಿಕಾರಿಯ ನೋಟಿಸ್ ಆಧರಿಸಿ ಮೈಸೂರಿನ ಲೋಕಾಯುಕ್ತ ಕಚೇರಿಗೆ ಆಗಮಿಸಿ ವಿಚಾರಣೆಗೆ ಒಳಪಟ್ಟಿದ್ದರು. ಜಮೀನು ಡಿ–ನೋಟಿಫೈ ಆಗಿದ್ದ ವೇಳೆ ನಗರಾಭಿವೃದ್ಧಿ ಸಚಿವರಾಗಿದ್ದ ಬಚ್ಚೇಗೌಡರ ಮನೆಗೆ ತೆರಳಿ ತನಿಖಾದಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು.

ಈ ಹಿಂದೆ ವಿಚಾರಣೆಗೆ ಒಳಗಾದ ದೇವರಾಜು, ಮಲ್ಲಿಕಾರ್ಜುನಸ್ವಾಮಿ, ಹಿಂದಿನ ಜಿಲ್ಲಾಧಿಕಾರಿಯೂ ಆದ ಹಾಲಿ ಕಾಂಗ್ರೆಸ್ ಸಂಸದ ಕುಮಾರ ನಾಯಕ್ ವಿಚಾರಣೆಗಾಗಿ ಮೈಸೂರಿನ ಲೋಕಾಯುಕ್ತ ಕಚೇರಿಗೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ಮಾಧ್ಯಮದ ಫೋಟೋಗ್ರಾಫರ್ ಹಾಗೂ ವಿಡಿಯೋಗ್ರಾಫರ್‌ಗಳು ಅವರು ಲೋಕಾಯುಕ್ತ ಆಗಮಿಸಿದ ದೃಶ್ಯವನ್ನು ಕಾದು ಕುಳಿತು ಸೆರೆ ಹಿಡಿದಿದ್ದರು. ಆದರೆ ಈವರೆಗೂ ಎಲ್ಲಿಯೂ, ಯಾವ ಸಂದರ್ಭದಲ್ಲೂ ಬಹಿರಂಗವಾಗಿ ಕಾಣಿಸಿಕೊಳ್ಳದ ಹಾಗೂ ಮಾಧ್ಯಮದವರ ಕ್ಯಾಮರಾ ಕಣ್ಣಿಗೆ ಸೆರೆಸಿಕ್ಕದ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿ ಅವರು ಇಂದು ಲೋಕಾಯುಕ್ತ ಕಚೇರಿಗೆ ವಿಚಾರಣೆಗಾಗಿ ಮಾಧ್ಯಮದವರ ಕಣ್ಣಿಗೆ ಬೀಳದೇ ವಿಚಾರಣೆ ಎದುರಿಸಿ ವಾಪಸ್ಸಾಗಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. ವಿಶೇಷವೆಂದರೆ ಲೋಕಾಯುಕ್ತ ಕಚೇರಿ ಬಳಿಯೇ ಮಾಧ್ಯಮ ಪ್ರತಿನಿಧಿಗಳು ಹಾಜರಿದ್ದರೂ, ಪಾರ್ವತಿ ಅವರು ವಿಚಾರಣೆ ಎದುರಿಸಿ ಹೋದ ನಂತರವಷ್ಟೇ ಮಾಧ್ಯಮ ಪ್ರತಿನಿಧಿಗಳಿಗೆ ನಂಬಲರ್ಹ ಮೂಲಗಳಿಂದ ಈ ವಿಚಾರ ತಿಳಿದಿದೆ. ನಂತರ ತಮ್ಮನ್ನು ಸಂಪರ್ಕಿಸಿದ ಮಾಧ್ಯಮದವರಿಗೆ ಲೋಕಾಯುಕ್ತ ಎಸ್ಪಿ ಉದೇಶ್ ಅವರು, ಶ್ರೀಮತಿ ಪಾರ್ವತಿ ತಮ್ಮ ಕಚೇರಿಗೆ ವಿಚಾರಣೆಗೆ ಆಗಮಿಸಿದ್ದರು. ಅವರನ್ನು ಮೂರು ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಲಾಯಿತು ಎಂದು ಖಚಿತಪಡಿಸಿದ್ದಾರೆ. ಈ ಪ್ರಕರಣದಲ್ಲಿ ನಾಲ್ವರು ಆರೋಪಿಗಳ ಪೈಕಿ ತನಿಖಾಧಿಕಾರಿಗಳು ಮೂವರನ್ನು ವಿಚಾರಣೆಗೆ ಒಳಪಡಿಸಿದ್ದು, ಒಂದನೇ ಆರೋಪಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಇನ್ನಷ್ಟೇ ವಿಚಾರಣೆಗೆ ಒಳಪಡಿಸಬೇಕಾಗಿದೆ.

> ಯಾವುದೇ ಪ್ರಕರಣವಾದರೂ ತನಿಖಾಧಿಕಾರಿಯಿಂದ ನೋಟಿಸ್ ಪಡೆದ ಆರೋಪಿಗಳು ಅವರ ಮುಂದೆ ಹಾಜರಾಗಲೇಬೇಕಾಗುತ್ತದೆ. ಇಲ್ಲಿ ಆರೋಪಿಯ ಸ್ಥಾನಮಾನ ಪರಿಗಣಿತವಾಗುವುದಿಲ್ಲ. ಒಂದು ವೇಳೆ ಆರೋಪಿ ತೀವ್ರ ಅನಾರೋಗ್ಯಕ್ಕೀಡಾಗಿ ವಿಚಾರಣೆಗಾಗಿ ಠಾಣೆಗೆ ಆಗಮಿಸಲು ಸಾಧ್ಯವಾಗದಂತಹ ಪರಿಸ್ಥಿತಿಯ ಬಗ್ಗೆ ವೈದ್ಯರ ಧೃಡೀಕರಣ ಪತ್ರ ಸಲ್ಲಿಸಿದರೆ ಅಥವಾ ಆರೋಪಿ ವಯೋವೃದ್ಧರಾಗಿದ್ದು, ಓಡಾಡಲು ಸಾಧ್ಯವಾಗದಂತಹ ಪರಿಸ್ಥಿತಿಯಲ್ಲಿದ್ದರೆ ಮಾತ್ರ ತನಿಖಾಧಿಕಾರಿಗಳು ಆರೋಪಿ ಇರುವಲ್ಲಿಗೆ ತೆರಳಿ ವಿಚಾರಣೆ ನಡೆಸಿ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರು ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಿದ್ದರು ಎಂಬ ಸುದ್ದಿಯನ್ನು ದೃಶ್ಯ ಮಾಧ್ಯಮಗಳಲ್ಲಿ ನೋಡಿ ಅಚ್ಚರಿಯಾಯಿತು. ದೃಶ್ಯ ಮಾಧ್ಯಮಗಳು ಪಾರ್ವತಿ ಹಾಜರಾದ ದೃಶ್ಯವನ್ನೇ ತೋರಿಸಿಲ್ಲ. ಇದು ನನ್ನಲ್ಲೂ ಅಚ್ಚರಿ ತಂದಿದೆ.
>
> 
>
> **– ಬಿ.ಬಿ.ಅಶೋಕ್ ಕುಮಾರ್, ನಿವೃತ್ತ ಎಸಿಪಿ.**

ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ

ದಿನಗಳಲ್ಲಿ ಕಾಂಗ್ರೆಸ್ ಮುಖಂಡರಿಗೆ ಮತ್ತೆ ಹಳೆಯ ನೆನಪು ತರಿಸಲಿದ್ದಾರೆ ಎಂದರು. ಯೋಗೇಶ್ವರ್ ಆಧುನಿಕ ಭಗೀರಥ ಅಲ್ಲವೇ ಅಲ್ಲ, ನನ್ನ ಸಂಪುಟದಲ್ಲಿದ್ದ ಸಂದರ್ಭದಲ್ಲಿ ಕ್ಷೇತ್ರದ ಕೆರೆಗಳಿಗೆ ನೀರು ತರಲು ಹಣ ಬಿಡುಗಡೆ ಮಾಡಿದೆವು, ಅದು ಬಿಜೆಪಿ ಸರ್ಕಾರ ಮಾಡಿದ್ದೇ ಹೊರತು ಯೋಗೇಶ್ವರ್ ಅಲ್ಲ. ಈ ವ್ಯಕ್ತಿಯ ಬಣ್ಣ ಕ್ಷೇತ್ರದ ಜನತೆಗೂ ಗೊತ್ತಿದೆ, ನಿಖಿಲ್ ಕುಮಾರಸ್ವಾಮಿ ಯಾವುದೇ ಸಂಶಯವಿಲ್ಲದೆ ಗೆದ್ದೇ ಗೆಲ್ಲುತ್ತಾರೆ, ನಾವು ಜೆಡಿಎಸ್ ಕಾರ್ಯಕರ್ತರ ಜೊತೆಗೂಡಿ ಅವರ ಗೆಲುವಿಗೆ ಶ್ರಮಿಸುತ್ತೇವೆ. ನಿಖಿಲ್ ಜೆಡಿಎಸ್ ಅಭ್ಯರ್ಥಿ ಅಲ್ಲ, ಎನ್‌ಡಿಎ ಅಭ್ಯರ್ಥಿ ಅವರನ್ನು ಗೆಲ್ಲಿಸುವುದೇ ನಮ್ಮ ಗುರಿ ಎಂದರು.

ಹಾಕಲೇಬೇಕು; ವಿನಾಯಿತಿ ಇಲ್ಲ

ವಿಚಾರಣೆಗೆ ನಿಗದಿಪಡಿಸಬೇಕು ಎಂದು ಕೋರಿದರು. ಆ ಮನವಿ ತಳ್ಳಿಹಾಕಿದ ನ್ಯಾಯ ಮೂರ್ತಿಗಳು, ನೀವು (ವಾಣಿಜ್ಯ ಸಂಸ್ಥೆಗಳು) ಕರ್ನಾಟಕದಲ್ಲಿ ವಹಿವಾಟು ನಡೆಸುತ್ತಿದ್ದೀರಿ ಎಂದಾದ ಮೇಲೆ ನಿಮ್ಮ ಸೂಚನಾ ಫಲಕಗಳನ್ನು ಕನ್ನಡದಲ್ಲೇ ಪ್ರದರ್ಶಿಸಬೇಕು. ಅದಕ್ಕೆ ಯಾವುದೇ ವಿನಾಯಿತಿ ನೀಡಲಾಗದು ಎಂದು ಮೌಖಿಕವಾಗಿ ಹೇಳಿದರು.

ಅಲ್ಲದೆ, ಕನ್ನಡ ಭಾಷಾ ರಕ್ಷಣೆಗೆ ಸಂಬಂಧಿಸಿದಂತೆ ಶ್ರಮಿಸುತ್ತಿರುವ ಕನ್ನಡ ರಕ್ಷಣಾ ವೇದಿಕೆಗಳ ಹೋರಾಟವನ್ನು ಪ್ರಸ್ತಾಪಿಸಿದರು. ನಂತರ ಅರ್ಜಿದಾರರ ವಿರುದ್ಧದ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಸರ್ಕಾರ ಮತ್ತು ಬಿಬಿಎಂಪಿಗೆ ನಿರ್ದೇಶಿಸಿ, ಈ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ವಿಸ್ತರಿಸಿ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರು ವಿಚಾರಣೆಯನ್ನು ಮುಂದೂಡಿದರು.

ಕುಮಾರಸ್ವಾಮಿಗೆ ಸಂಕಷ್ಟ

ಎಂದು ಆಕ್ಷೇಪಿಸಿ ಎಸ್.ಆರ್. ಹಿರೇಮಠ ನೇತೃತ್ವದ ಸಮಾಜ ಪರಿವರ್ತನಾ ಸಮುದಾಯ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಕೆ.ಸೋಮಶೇಖರ್ ಅವರ ನೇತೃತ್ವದ ವಿಭಾಗೀಯ ಪೀಠ, ಹೊಸದಾಗಿ ಪ್ರಕರಣದ ತನಿಖೆ ನಡೆಸಲು ಅನುಮತಿ ನಿರಾಕರಿಸಿತು. ಆದರೆ, ಸರ್ಕಾರ ಸಲ್ಲಿಸಿರುವ 11 ಪ್ರಮಾಣ ಪತ್ರಗಳನ್ನು ಅಧ್ಯಯನ ಮಾಡಿ ಸಮಗ್ರ ವರದಿ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ನ.20ಕ್ಕೆ ಮುಂದೂಡಿತು.

ಯೋಗೇಶ್ವರ್ ಚನ್ನಪಟ್ಟಣ 'ಕೈ' ಅಭ್ಯರ್ಥಿ!

ಕೈಗೊಂಡಿದ್ದರು. ಯೋಗೇಶ್ವರ್ ಅವರಿಗೆ ಬಿಜೆಪಿಯಲ್ಲಿ ಟಿಕೆಟ್ ದೊರೆಯುವುದಿಲ್ಲ, ಅವರು ಬಂಡಾಯ ಎದ್ದು ಪಕ್ಷೇತರರಾಗಿ ನಿಲ್ಲಬಹುದು, ಇಂತಹ ಸನ್ನಿವೇಶದಲ್ಲಿ ಅವರು ಗೆಲುವಿನ ದಡ ಮುಟ್ಟುವುದಿಲ್ಲ ಎಂಬ ಅನಿಸಿಕೆ ಶಿವಕುಮಾರ್ ಅವರಲ್ಲಿತ್ತು.

ಆದರೆ, ಉಪಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆ ಸಿದ್ದರಾಮಯ್ಯ ಅವರು ಎಐಸಿಸಿ ರಾಜಕೀಯ ಪ್ರಧಾನಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮೂಲಕ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಕರೆತರುವ ವಿಷಯ ಪ್ರಸ್ತಾಪಿಸಿ, ಅನುಮತಿಯನ್ನೂ ಪಡೆದುಕೊಂಡರು.

ಚನ್ನಪಟ್ಟಣ ಗೆಲುವೊಂದೇ ಮುಖ್ಯ, ಇದು ಯೋಗೇಶ್ವರ್ ಅವರಿಂದ ಮಾತ್ರ ಸಾಧ್ಯ. ಕುಮಾರಸ್ವಾಮಿ ಅವರಿಗೆ ರಾಜಕೀಯವಾಗಿ ಹಿನ್ನಡೆ ಉಂಟು ಮಾಡಲು ನಮಗೆ ಇದೊಂದು ಉತ್ತಮ ಅವಕಾಶ ಎಂದು ವರಿಷ್ಠರಿಗೆ ಸಿದ್ದರಾಮಯ್ಯ ಮನವರಿಕೆ ಮಾಡಿದ್ದು, ಅದು ಯಶಸ್ಸು ತಂದಿತು.

ವೇಣುಗೋಪಾಲ್ ಅವರೇ ಶಿವಕುಮಾರ್ ಅವರನ್ನು ಸಂಪರ್ಕಿಸಿ ಯೋಗೇಶ್ವರ್ ವಿಷಯ ಪ್ರಸ್ತಾಪಿಸಿ, ಅವರೇ ಪಕ್ಷದ ಅಭ್ಯರ್ಥಿ ಎಂದಿದ್ದಲ್ಲದೆ, ಚುನಾವಣಾ ಹೊಣೆಯನ್ನೂ ವಹಿಸಿಕೊಳ್ಳುವಂತೆ ಆದೇಶ ಮಾಡಿದರು.

ಮುಖ್ಯಮಂತ್ರಿಗಾದಿಗೆ ಸಮೀಪಿಸುವ ಸಂದರ್ಭದಲ್ಲಿ ಪಕ್ಷದ ವರಿಷ್ಠರ ಹಾಗೂ ಸಿದ್ದರಾಮಯ್ಯ ಅವರ ವಿರೋಧ ಕಟ್ಟಿಕೊಳ್ಳಬಾರದೆಂಬ ಕಾರಣಕ್ಕೆ ಒಲ್ಲದ ಮನಸ್ಸಿನಿಂದ ಯೋಗೇಶ್ವರ್ ಆಗಮನಕ್ಕೆ ಶಿವಕುಮಾರ್ ಒಪ್ಪಿಗೆ ಸೂಚಿಸಿದರಾದರೂ, ಚುನಾವಣೆಯಲ್ಲಿ ಇದು ಎಷ್ಟರ ಮಟ್ಟಿಗೆ ಫಲ ನೀಡುವುದೆಂಬುದನ್ನು ಕಾದು ನೋಡಬೇಕಿದೆ.

ತೀವ್ರ ಆಕ್ಷೇಪ


ಪ್ರವಾಸ ಕೈಗೊಳ್ಳುವ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿಯಲ್ಲಿ 50 ರೂ. ಹಾಗೂ ವಿದೇಶಿ ಪ್ರವಾಸಿಗರಿಗೆ 1,000 ರೂ. ನಿಗದಿಪಡಿಸಲಾಗಿದೆ.

ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೂ ಇಂಗ್ಲೀಷ್ ಮತ್ತು ಕನ್ನಡಕ್ಕೆ ಪ್ರತ್ಯೇಕ ದರ ನಿಗದಿಪಡಿಸಿದ್ದು, ಕನ್ನಡ ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೆ ಸೋಮವಾರದಿಂದ ಬುಧವಾರದವರೆಗೆ (ರಾತ್ರಿ 7 ಗಂಟೆಯಿಂದ 8ರವರೆಗೆ) ಹಾಗೂ ಶನಿವಾರ (ರಾತ್ರಿ 8.15ರಿಂದ 9.15ರವರೆಗೆ) ವಯಸ್ಕರಿಗೆ 100 ರೂ., ಹಾಗೂ ಮಕ್ಕಳಿಗೆ 40 ರೂ., ನಿಗದಿ ಮಾಡಿದ್ದು, ಇಂಗ್ಲೀಷ್ ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೆ ಗುರುವಾರದಿಂದ ಶನಿವಾರದವರೆಗೆ (ರಾತ್ರಿ 7 ಗಂಟೆಯಿಂದ 8ರವರೆಗೆ) ವಯಸ್ಕರಿಗೆ 120 ರೂ., ಮಕ್ಕಳಿಗೆ 50 ರೂ. ನಿಗದಿಪಡಿಸಲಾಗಿದೆ.

ಭಾರತದಲ್ಲಷ್ಟೇ ಪ್ರವಾಸಿಗರಲ್ಲಿ ತಾರತಮ್ಯ: ಅರಮನೆ ವೀಕ್ಷಿಸಲು ಬರುವ ವಿದೇಶಿ ಪ್ರವಾಸಿಗರಿಗೆ ಬರೋಬ್ಬರಿ 900 ರೂ. ಪ್ರವೇಶ ಶುಲ್ಕ ಹೆಚ್ಚಿಸಿರುವುದಕ್ಕೆ ವಿದೇಶಿಗರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಅರಮನೆ ಮಂಡಳಿ ನಿರ್ಧಾರವನ್ನು ಖಂಡಿಸಿದ್ದಾರೆ. ಜರ್ಮನ್ ಪ್ರವಾಸಿಗರು ಮಾಧ್ಯಮಗಳೊಂದಿಗೆ ಮಾತನಾಡಿ, ಭಾರತೀಯರಿಗೆ 100 ರೂ., ಆದರೆ, ವಿದೇಶಿಗರಿಗೆ ಅದರ ಹತ್ತು ಪಟ್ಟು ದರ ಹೆಚ್ಚಳ ಮಾಡಿರುವುದು ಖಂಡನೀಯ. ನಮ್ಮ ದೇಶದಲ್ಲಿ ಪ್ರವಾಸಿ ಸ್ಥಳಗಳ ವೀಕ್ಷಣೆಗೆ ಎಲ್ಲರಿಗೂ ಏಕ ರೀತಿಯ ಪ್ರವೇಶ ದರ ನಿಗದಿಪಡಿಸಲಾಗಿದೆ. ಆದರೆ, ಭಾರತದಲ್ಲಷ್ಟೇ ತಾರತಮ್ಯ ತೋರಲಾಗುತ್ತಿದೆ ಎಂದು ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

ಸಚಿವ ವಿ.ಸೋಮಣ್ಣಗೆ ಬಿಗ್ ರಿಲೀಫ್: ಅಕ್ರಮ ಆಸ್ತಿ ಗಳಿಕೆ ಆರೋಪದ ಪ್ರಕರಣ ವಜಾ

ಬೆಂಗಳೂರು, ಅ.25– ಅಕ್ರಮ ಆಸ್ತಿ ಗಳಿಕೆ ಆರೋಪ ಪ್ರಕರಣದಲ್ಲಿ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆಯ ಸಚಿವ ವಿ.ಸೋಮಣ್ಣ ಅವರಿಗೆ ಬಿಗ್ ರಿಲೀಫ್ ಸಿಕ್ಕಿದೆ. ವಿ.ಸೋಮಣ್ಣ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಆರೋಪ ಪ್ರಕರಣವನ್ನು 91ನೇ ಸಿಸಿಹೆಚ್ ಕೋರ್ಟ್ ವಜಾಗೊಳಿಸಿದೆ.



2013ರಲ್ಲಿ ರಾಮಕೃಷ್ಣ ಎಂಬುವವರು ಖಾಸಗಿಯಾಗಿ ದೂರು ಸಲ್ಲಿಸಿದ್ದರು. ಈ ಅರ್ಜಿಯನ್ನು ವಿಚಾರಣೆ ನಡೆಸಿದ ಕೋರ್ಟ್ ನ್ಯಾ.ಸಂತೋಷ್ ಗಜಾನನ ಭಟ್ ಅವರಿಂದ ಏಕಸದಸ್ಯ ಪೀಠ, ರಾಮಕೃಷ್ಣ ಅವರ ಆರೋಪಕ್ಕೆ ಪೂರಕ ಸಾಕ್ಷಿ ಇಲ್ಲವೆಂದು ಪಿಸಿಆರ್ ಅನ್ನು ವಜಾಗೊಳಿಸಿದೆ.

ಅಂಚೆ ಇಲಾಖೆಯಿಂದ ನ.1ರಿಂದ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಅಭಿಯಾನ

ಮೈಸೂರು, ಅ.25– ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ ನಡೆಸುತ್ತಿರುವ ರಾಷ್ಟ್ರವ್ಯಾಪಿ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಅಭಿಯಾನ 3.0 ನವೆಂಬರ್ 1 ರಿಂದ 30, 2024ರವರೆಗೆ ನಡೆಯಲಿದ್ದು, ಇದರ ಸದುಪಯೋಗವನ್ನು ಎಲ್ಲಾ ಪಿಂಚಣಿದಾರರು ಪಡೆದುಕೊಳ್ಳಬೇಕೆಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಹೆಚ್.ಸಿ.ಸದಾನಂದ ಮನವಿ ಮಾಡಿದ್ದಾರೆ.

ಮುಖ ಚಹರೆ ಮತ್ತು ಬೆರಳಚ್ಚು ದೃಢೀಕರಣದ ಡಿಜಿಟಲ್ ಪ್ರಕ್ರಿಯೆಯ ಮೂಲಕ ನಡೆಯಲಿರುವ ಈ ಅಭಿಯಾನದಲ್ಲಿ ಎಲ್ಲಾ ಪಿಂಚಣಿದಾರರು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವವರು, ತಮ್ಮ ಜೀವನ ಪ್ರಮಾಣಪತ್ರಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಸುಲಭವಾಗಿ ಸಲ್ಲಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿರುವ ಅವರು, ಸಮೀಪದ ಅಂಚೆ ಕಚೇರಿ, ಮನೆ ಬಾಗಿಲಿಗೆ ಬರುವ ಪೋಸ್ಟ್‌ಮೆನ್ ಮತ್ತು ಗ್ರಾಮೀಣ ಡಾಕ್ ಸೇವಕರ ಮೂಲಕ ಈ ಸೇವೆಯನ್ನು ಪಡೆಯಬಹುದೆಂದು ತಿಳಿಸಿದ್ದಾರೆ.

ಅಂಚೆ ಇಲಾಖೆ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಸಹಭಾಗಿತ್ವದೊಂದಿಗೆ ನಡೆಯಲಿರುವ ಈ ಅಭಿಯಾನವನ್ನು ಪಿಂಚಣಿದಾರರ ಕಲ್ಯಾಣ ಸಂಘಗಳು, UIDAI ಸೇರಿದಂತೆ ವಿವಿಧ ಸಂಘಟನೆಗಳು ಬೆಂಬಲಿಸಿವೆ. ಪಿಂಚಣಿದಾರರಿಗೆ ಸಾಂಪ್ರದಾಯಿಕ ಕಾಗದ ಆಧಾರಿತ ಪ್ರಮಾಣಪತ್ರಗಳನ್ನು ಸಲ್ಲಿಸುವ ಬದಲಾಗಿ ಡಿಜಿಟಲ್ ಮೂಲಕ ಜೀವನ ಪ್ರಮಾಣ ಪತ್ರವನ್ನು ಸುಲಭವಾಗಿ ಮಾಡಿಕೊಳ್ಳಬಹುದು ಎಂದು ಅವರು ಹೇಳಿದ್ದಾರೆ.

ಈ ಸೇವೆಯು ಆಧಾರ್ ದೃಢೀಕರಣವನ್ನು ಆಧಾರವಾಗಿಟ್ಟುಕೊಂಡು ನೀಡುವುದರಿಂದ ಭೌತಿಕವಾಗಿ ಪಿಂಚಣಿದಾರರು ಪಿಂಚಣಿ ಕಚೇರಿಗೆ ಭೇಟಿ ನೀಡುವ ಅಗತ್ಯವಿರುವುದಿಲ್ಲ. ವಯಸ್ಸಾದ ಪಿಂಚಣಿದಾರರಿಗೆ ಇದರಿಂದ ಅನುಕೂಲವಾಗಲಿದ್ದು, ಪೋಸ್ಟ್‌ಮ್ಯಾನ್, ಗ್ರಾಮಿಣ್ ಡಾಕ್ ಸೇವಕ್‌ರಿಂದ ಈ ಸೇವೆಯನ್ನು ಪಡೆದುಕೊಳ್ಳಲು ರೂ.70 ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಸೇವೆಗಾಗಿ ಪಿಂಚಣಿದಾರರು ಆಧಾರ್ ಸಂಖ್ಯೆ ಮತ್ತು ಪಿಂಚಣಿಯ ವಿವರಗಳನ್ನು ಒದಗಿಸಬೇಕು. ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಪಿಂಚಣಿದಾರರು ದೃಢೀಕರಣವನ್ನು SMS ಮೂಲಕ ಅವರ ಮೊಬೈಲ್ ಸಂಖ್ಯೆಯಲ್ಲಿ ಸ್ವೀಕರಿಸುತ್ತಾರೆ ಮತ್ತು ನಂತರhttps://jeevanpramaan.gov.in/ppouser/login ಆನ್‌ಲೈನ್‌ನಲ್ಲಿ ಪ್ರಮಾಣಪತ್ರವನ್ನು ವೀಕ್ಷಿಸಬಹುದು ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ವಿಶ್ವನಾಥ್ ಆರೋಪಕ್ಕೆ ಖಂಡನೆ

ಮೈಸೂರು, ಅ.25(ಎಂಟಿವೈ)– ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮೈಸೂರು, ಹುಣಸೂರು ಸೇರಿದಂತೆ ವಿವಿಧೆಡೆ ಅಕ್ರಮ ಆಸ್ತಿಗಳಿಸಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಆಸ್ತಿ ಕುರಿತು ಸುಳ್ಳು ಆರೋಪ ಮಾಡುವ ಮೂಲಕ ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುತ್ತಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾ ವಕ್ತಾರ ಎಸ್.ರಾಜೇಶ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಸೊಸೆ ಹೆಸರಿನಲ್ಲಿ ಬೆಂಗಳೂರಿನಲ್ಲಿ ಕೋಟ್ಯಾಂತರ ರೂ. ಮೌಲ್ಯದ ಪಬ್ ಹೊಂದಿದ್ದಾರೆ ಎಂದು ಎ.ಎಚ್. ವಿಶ್ವನಾಥ್ ಆಧಾರ ರಹಿತ ಆರೋಪ ಮಾಡಿದ್ದಾರೆ. ಆದರೆ ವಿಶ್ವನಾಥ್ ಅವರು ಸ್ವತಃ ಮೈಸೂರು, ಹುಣಸೂರಿನಲ್ಲಿ ಒಂದೊಂದು ಪೆಟ್ರೋಲ್ ಬಂಕ್ ಹೊಂದಿದ್ದಾರೆ. ಕುವೆಂಪುನಗರದಲ್ಲಿ ಲೋಬೋಸ್ ಬಾರ್ ಅಂಡ್ ರೆಸ್ಟೋರೆಂಟ್ ಹೊಂದಿದ್ದಾರೆ. ಮೈಸೂರು ಸೇರಿದಂತೆ ವಿವಿಧೆಡೆ ಹಲವು ಮನೆ ಹೊಂದಿದ್ದಾರೆ. ಈ ಆಸ್ತಿಯನ್ನು ಹೇಗೆ ಸಂಪಾದಿಸಿದರು ಎಂದು ಜನರಿಗೆ ತಿಳಿಸಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಅವರ ವಿರುದ್ಧ ಆಧಾರ ರಹಿತ ಆರೋಪ ಮಾಡುವುದನ್ನು ಮುಂದುವರಿಸಿದರೆ ವಿಶ್ವನಾಥ್ ಅವರ ಕಚೇರಿ ಎದುರು ತಮಟೆ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಸ್.ಎ. ರಹೀಂ, ಮರಿದೇವಯ್ಯ, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಶ್ರೀನಿವಾಸ್ ಹಾಗೂ ಇನ್ನಿತರರು ಇದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು, ಅ.25–ಅ.26ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದ ಪೊಲೀಸ್ ಲೇಔಟ್ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಭುಗತಹಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕು ಎಂದು ಚಾ.ವಿ.ಸ.ನಿ.ನಿ.ಯ ನ.ರಾ.ಮೊಹಲ್ಲಾ ವಿಭಾಗದ ಕಾರ್ಯ ಮತ್ತು ಪಾಲನೆಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮೈಸೂರು ಮಿತ್ರ ಶನಿವಾರ 26 ಅಕ್ಟೋಬರ್ 2024

ಅಡ್ಡಂಡ ಕಾರ್ಯಪ್ಪನವರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಕೃತಿ ಬಿಡುಗಡೆ

● ಭಾರತ ಇತಿಹಾಸದ ಸತ್ಯವನ್ನು ಈಗಲಾದರೂ ಯುವ ಪೀಳಿಗೆಗೆ ತಿಳಿಸೋಣ; ಮೈಸೂರು ರಾಜವಂಶಸ್ಥರೂ ಆದ ಸಂಸದ ಯದುವೀರ್ ಅಭಿಮತ
● ಆರ್.ಸಿ.ಮಜುಂದಾರ್ ಅವರ ಇತಿಹಾಸದ ಮಾಹಿತಿ ನಿಖರ, ವಿಶ್ವಾಸಾರ್ಹ

ಮೈಸೂರು, ಅ.25(ಎಸ್‌ಬಿಡಿ)– ಭಾರತದ ಇತಿಹಾಸ ಕುರಿತು ಸಂಪೂರ್ಣ ಸತ್ಯವನ್ನು ಮುಂದಿನ ಪೀಳಿಗೆಗೆ ತಿಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಶುಕ್ರವಾರ ನಡೆದ ಅಡ್ಡಂಡ ಕಾರ್ಯಪ್ಪ ಅವರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದ ಆಧುನಿಕ ಇತಿಹಾಸದ ಬಗ್ಗೆ ಅರ್ಧ ಸತ್ಯವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಸರಿಯಲ್ಲ. ಪೂರ್ಣ ಸತ್ಯವನ್ನು ಅರಿತು ಮುಂದುವರೆಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.



ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಕೃತಿಯನ್ನು ಶುಕ್ರವಾರ ಕಿರುರಂಗಮಂದಿರದಲ್ಲಿ ಬಿಡುಗಡೆಗೊಳಿಸಲಾಯಿತು. ರಂಗಕಲಾವಿದೆ ಅನಿತಾ, ಅಡ್ಡಂಡ ಸಿ.ಕಾರ್ಯಪ್ಪ, ರಂಗಕರ್ಮಿ ಪ್ರಕಾಶ್ ಬೆಳವಾಡಿ, ಸಂಸದ ಯದುವೀರ್ ಹಾಗೂ ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಇತಿಹಾಸ, ರಂಗಭೂಮಿ, ಚಲನಚಿತ್ರ, ಪತ್ರಿಕೋದ್ಯಮ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಒಂದೇ ದೃಷ್ಟಿಕೋನದ ವ್ಯಕ್ತಿಗಳು ನಿಯಂತ್ರಿಸಲು ಏನೆಲ್ಲಾ ಪ್ರಯತ್ನ ಮಾಡಿದ್ದಾರೆ ಎಂಬುದನ್ನು ಹಲವು ಹಿರಿಯರು ಹೇಳಿದ್ದಾರೆ. ಆಧುನಿಕ ಭಾರತದ ಇತಿಹಾಸದ ಸಂಗತಿಗಳು ಎಲ್ಲರಿಗೂ ತಿಳಿದಿದೆ. ಆದರೆ ನಾವು ಸತ್ಯವನ್ನು ತಿಳಿಯಲು ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ಆರ್.ಸಿ.ಮಜುಂದಾರ್ ಅವರನ್ನು ಸ್ಮರಿಸಿಕೊಳ್ಳಬೇಕು. ಅವರಿಗೆ ಭಾರತದ ಸಮಗ್ರ ಇತಿಹಾಸ ದಾಖಲು ಮಾಡುವ ಜವಾಬ್ದಾರಿಯನ್ನು ವಹಿಸಲಾಗಿತ್ತು. ಆದರೆ ಆ ಕಾಲದಲ್ಲಿನ ಒಂದು ಗುಂಪಿಗೆ ಮಜುಂದಾರ್ ಅವರ ಕೆಲಸ ಹಿಡಿಸದ ಕಾರಣ ಬೇರೆಯವರನ್ನು ನೇಮಿಸಲಾಯಿತು. ನಂತರ ದಾಖಲಾದ ಇತಿಹಾಸವನ್ನೇ ನಾವೆಲ್ಲಾ ಓದಿಕೊಂಡು ಬಂದಿದ್ದೇವೆ. ಇತಿಹಾಸ ಸಂಬಂಧಿತ ಹಲವು ಸಂಗತಿಗಳು 10–15 ವರ್ಷಗಳಿಂದ ಬೆಳಕಿಗೆ ಬರುತ್ತಿವೆ ಎಂದು ತಿಳಿಸಿದರು.

ಆಧುನಿಕ ಭಾರತದ ಇತಿಹಾಸ ಕುರಿತ ಆರ್.ಸಿ.ಮಜುಂದಾರ್ ಅವರ 15–16 ಸಂಪುಟಗಳು ಭಾರತೀಯ ವಿದ್ಯಾಭವನದಲ್ಲಿವೆ. ನಮ್ಮ ತಾತನವರಿಗೆ ಭಾರತೀಯ ವಿದ್ಯಾಭವನದೊಂದಿಗೆ ಸಂಪರ್ಕವಿದ್ದ ಹಿನ್ನೆಲೆಯಲ್ಲಿ ಅವರ ಗ್ರಂಥಾಲಯದಲ್ಲಿರುವ ಎರಡು ಸಂಪುಟಗಳು ಆಕಸ್ಮಿಕವಾಗಿ ನನಗೆ ಸಿಕ್ಕಿದವು. ಈ ಪುಸ್ತಕಗಳ ಬಗ್ಗೆ ಕೆಲವರಿಗಷ್ಟೇ ತಿಳಿದಿರಬಹುದು. ಮಜುಂದಾರ್ ಅವರ ಪುಸ್ತಕಗಳನ್ನು ಓದಿದರೆ ಭಾರತದ ಬಹುಮುಖ್ಯ ಘಟನೆಗಳು ತಿಳಿಯುತ್ತವೆ. 15–16ನೇ ಸಂಪುಟದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ವಿಸ್ತಾರವಾಗಿ ಬರೆದಿದ್ದಾರೆ. ನಮಗೆ ತಿಳಿದಿರುವ ಮಹನೀಯರ ಜೊತೆಗೆ ಬುಡಕಟ್ಟು, ಮಿಲಿಟರಿ, ವೈದ್ಯರು ಸೇರಿದಂತೆ ಹಲವು ವರ್ಗದವರು, ಸಮುದಾಯದವರ ಹೋರಾಟದ ಫಲವಾಗಿ ಸ್ವಾತಂತ್ರ್ಯ ಸಿಕ್ಕಿದೆ ಎಂಬ ಮಹತ್ವದ ಮಾಹಿತಿ ಅದರಲ್ಲಿದೆ ಎಂದರು.

ಕಷ್ಟವೆಂದು ಸುಮ್ಮನಿರಲಾಗದು: ಎಲ್ಲವನ್ನೂ ಸರಿ ಮಾಡುವುದು ನಿಜಕ್ಕೂ ತುಂಬಾ ಕಷ್ಟದ ಕೆಲಸ. ಆದರೂ ಆ ಕೆಲಸವನ್ನು ನಾವು ಮಾಡಲೇಬೇಕಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಯಾವುದು ನಿಜವೆಂದು ನಂಬುವುದೇ ಕಷ್ಟವಾಗಿದೆ. ಅಗತ್ಯಕ್ಕಿಂತ ಅಧಿಕ ಮಾಹಿತಿ ತಲುಪುತ್ತಿರುವುದೇ ಸಮಸ್ಯೆಯಾಗಿದೆ. ಸಿಕ್ಕಿರುವುದರಲ್ಲಿ ಸತ್ಯ ಹುಡುಕುವುದು ಸವಾಲಾಗಿದ್ದರೂ ಅದು ಬಹಳ ಮುಖ್ಯವಾಗಿದೆ. ಅಧಿಕಾರಿಗಳಿಂದ ದೊರಕುವ ಅಧಿಕೃತ ಮಾಹಿತಿಯನ್ನೂ ನಂಬಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಯಾವುದು ನಿಜ ಎಂಬ ಯಕ್ಷಪ್ರಶ್ನೆ ಎದುರಾಗುತ್ತದೆ. ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸುವುದು ಎಲ್ಲಕ್ಕಿಂತ ಮುಖ್ಯ ಎಂದು ಅಭಿಪ್ರಾಯಿಸಿದರು.

ತಪ್ಪುಗಳನ್ನು ಸರಿಪಡಿಸಲೇಬೇಕು: ಜನಪ್ರತಿನಿಧಿಗಳ ಮೇಲೆ ಜನರಲ್ಲಿರುವ ನಂಬಿಕೆಯನ್ನು ಉಳಿಸಿಕೊಳ್ಳಬೇಕಿದೆ. ಈ ವ್ಯವಸ್ಥೆ ಬಗ್ಗೆ ವಿಶ್ವಾಸ ತುಂಬುವ ಕೆಲಸ ಮಾಡಬೇಕಿದೆ. ಎಲ್ಲವೂ ಸುಲಭವಾಗಿ ನಡೆದುಕೊಂಡು ಹೋಗುವಂತಹ ವ್ಯವಸ್ಥೆ ನೀಡಿರುವುದಕ್ಕೆ ಹಿರಿಯರಿಗೆ ಚಿರಋಣಿಯಾಗಿರಬೇಕು. ಆದರೂ ಕೆಲವೊಂದು ತಪ್ಪುಗಳಿಂದಾಗಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ನಂಬದಂತಹ ಸ್ಥಿತಿ ಇದೆ. ರಾಜಕಾರಣಿ ಬಗ್ಗೆ ಕೆಟ್ಟ ಅಭಿಪ್ರಾಯವಿದೆ ಯಾರೂ ಒಳ್ಳೆಯ ಕೆಲಸ ಮಾಡಲು ಸಾಧ್ಯವಿಲ್ಲ ಎಂಬ ಭಾವನೆ ಉಳಿದುಬಿಟ್ಟಿದೆ. ನೀವೇಕೆ ರಾಜಕಾರಣಕ್ಕೆ ಬಂದಿರಿ ಎಂದು ನನಗೂ ಕೇಳಿದ್ದರು. ಆದರೆ ಆ ಒಂದು ಭಯದಲ್ಲಿ ತಪ್ಪುಗಳನ್ನು ಸರಿಪಡಿಸದೆ ಮುಂದುವರೆದರೆ ಮುಂದಿನ ಪೀಳಿಗೆಗೆ ತುಂಬಾ ನಷ್ಟವಾಗುತ್ತದೆ. ಎಷ್ಟೇ ಸಮಸ್ಯೆಗಳಾದರೂ ಧರ್ಮದ ನೆಲವಾದ ಭಾರತ ಸದೃಢವಾಗಿ ನಡೆದು ಬಂದಿದೆ ನಾವೆಲ್ಲಾ ದೇಶದ ಮೂಲ ಉದ್ದೇಶವನ್ನು ಅರಿತು ಮುಂದುವರೆಯಬೇಕು. ಮೈಸೂರು ಸಂಸ್ಥಾನದಲ್ಲಿದ್ದ ಸುವರ್ಣ ಯುಗ ಇಡೀ ಭಾರತಕ್ಕೆ ವಿಸ್ತರಿಸಬೇಕು. ಈ ನಿಟ್ಟಿನಲ್ಲಿ ನಾವೆಲ್ಲಾ ಸಕಾರಾತ್ಮಕವಾಗಿ ಮುಂದುವರೆಯೋಣ. ಅಡ್ಡಂಡ ಕಾರ್ಯಪ್ಪ ಅವರ ಪುಸ್ತಕವನ್ನು ನಾನು ಓದಿಲ್ಲ. ಆದರೆ ಪುಸ್ತಕ, ನಾಟಕದ ಮೂಲಕ ನಿಜವಾದ ಇತಿಹಾಸ ತಿಳಿಸುವ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಪುಸ್ತಕ ಓದಿ, ನಾಟಕ ನೋಡಿ ನಿರ್ಧರಿಸಿ

ಮೈಸೂರು: ಇತಿಹಾಸದಲ್ಲಿ ನೈಜತೆ ಹಿಂದಿನ ಸತ್ಯ ತಿಳಿಯುವ ನಿಟ್ಟಿನಲ್ಲಿ ಪ್ರಯತ್ನಗಳಾಗಬೇಕು ಎಂದು ಹಿರಿಯ ರಂಗಕರ್ಮಿ ಪ್ರಕಾಶ್ ಬೆಳವಾಡಿ ಅಭಿಪ್ರಾಯಿಸಿದರು.


ಅಡ್ಡಂಡ ಕಾರ್ಯಪ್ಪ ಅವರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಈ ಪುಸ್ತಕ ಬಹಳ ಅಪಾಯಕಾರಿ ಎಂದು ಗೊತ್ತಿತ್ತು. ನನಗೆ ತಿಳಿದಿರುವ ವಿಚಾರಗಳನ್ನು ಒಪ್ಪುತ್ತೇನೆ. ಕೆಲವೊಂದು ಅಂಶಗಳ ಬಗ್ಗೆ ಅಧ್ಯಯನ ಮಾಡಿರದ ಕಾರಣ ಪ್ರತಿಕ್ರಿಯಿಸುವುದಿಲ್ಲ. ಆರಂಭದ ನಾಲ್ಕೈದು ಪುಟ ಓದಿದರೆ ಪುಸ್ತಕ ಬ್ಯಾನ್ ಮಾಡುತ್ತಾರೆ ಎಂದು ನಿಮಗೆ ಅನ್ನಿಸಬಹುದು. ಆದರೆ ಹಾಗೆ ಮಾಡುವುದು ಉದಾರತೆಯಲ್ಲ. ಪುಸ್ತಕ ಓದಿ ಹಾಗೂ ನಾಟಕ ನೋಡಿದ ನಂತರ ಅಭಿಪ್ರಾಯ ವ್ಯಕ್ತಪಡಿಸಿದರೆ ಒಳ್ಳೆಯದು. ಪುಸ್ತಕ ಗಟ್ಟಿಯಾದ ವಿಚಾರಗಳನ್ನು ತಿಳಿಸುತ್ತದೆ. ನೈಜತೆ ಹಿಂದಿನ ಸತ್ಯ ತಿಳಿಯಲು ಈ ರೀತಿಯ ಸಾಹಸಗಳು ಅಗತ್ಯ ಎಂದರು.

ಅಡ್ಡಂಡ ಕಾರ್ಯಪ್ಪ ಆರ್‌ಎಸ್‌ಎಸ್ ಗುರುತಿಸಿಕೊಂಡಿರುವುದರಿಂದ ಈ ಪುಸ್ತಕಕ್ಕೆ ಭಾರೀ ವಿರೋಧ ವ್ಯಕ್ತವಾಗಬಹುದು. ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟಿಸುವುದಕ್ಕಿಂತ ಮೀರಿದ ಘಟನೆಗಳು ನಡೆಯಬಹುದು. ಅದೆಲ್ಲವನ್ನೂ ಸ್ವಾಗತಿಸುವ ವ್ಯಕ್ತಿತ್ವ ಕಾರ್ಯಪ್ಪ ಅವರಿಗಿದೆ. ಆದರೂ ನಾಟಕದ ಆರಂಭದಲ್ಲೇ ನಕಾರಾತ್ಮಕ ಚಿಂತನೆಗೆ ಅನುವು ಮಾಡಿಕೊಡದಂತೆ ನೋಡಿಕೊಳ್ಳಬೇಕು. ನಾಟಕ ಪ್ರದರ್ಶನದ ಬಳಿಕ ಪರ–ವಿರೋಧ ಮಾಡುವವರ ಸಂವಾದ ನಡೆಸಿ, ಅದರ ಬಗ್ಗೆ ಸಮರ್ಥಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

> ಈಗಿನ ಚರಿತ್ರೆ ಎಲ್ಲಾ ಸುಳ್ಳು, ಸತ್ಯ ಗೊತ್ತಾದರೆ ನಾವು ಮಾಡಿದ ತಪ್ಪಿನ ಜೊತೆಗೆ ಮುಂದೆ ಏನು ಮಾಡಬೇಕು ಎಂದು ತಿಳಿಯುತ್ತದೆ. ನಾವು ಗುಲಾಮರಾಗಬಾರದು ಎಂದರೆ ಸತ್ಯ ತಿಳಿದಿರಬೇಕು. ದೇಶವನ್ನು ಹೇಗೆ ಮುನ್ನಡೆಸಬೇಕೆಂದು ಯುವಪೀಳಿಗೆಗೆ ತಿಳಿಸಬೇಕು. ನಾವು ಇದೇ ದೇಶದಲ್ಲಿ ಉಳಿಯಬೇಕಾದರೆ ಸತ್ಯ ತಿಳಿಯಲೇಬೇಕು. ಅಡ್ಡಂಡ ಕಾರ್ಯಪ್ಪನವರು ಸತ್ಯ ತಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಪುಸ್ತಕ ಹಾಗೂ ನಾಟಕ ಬ್ಯಾನ್ ಮಾಡುವ ಪ್ರಯತ್ನ ನಡೆಯಬಹುದು. ಆದರೆ ಸಾಧ್ಯವಾಗಲ್ಲ. ನಾವು ಹೇಳುತ್ತಿರುವುದು ಸತ್ಯ ಎನ್ನುವುದಕ್ಕೆ ಪುರಾವೆಗಳಿವೆ.
> -ಡಾ.ಚಂದ್ರಶೇಖರ್, ಆದಿತ್ಯ ಅಧಿಕಾರಿ ಆಸ್ಪತ್ರೆ

> ನಾನು 43 ಪುಸ್ತಕಗಳನ್ನು ಉಲ್ಲೇಖಿಸಿ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಬರೆದಿದ್ದೇನೆ. ಇದರಲ್ಲಿರುವುದು ಚರಿತ್ರೆಯ ಅಂಶಗಳೇ ಹೊರತು ಯಾವುದೂ ನನ್ನದಲ್ಲ. ಒಂದು ವೇಳೆ ನನ್ನ ಪುಸ್ತಕಕ್ಕೆ ಸಮಸ್ಯೆಯಾದರೆ ನಾನು ಉಲ್ಲೇಖಿಸಿರುವ ಎಲ್ಲಾ ಪುಸ್ತಕಗಳಿಗೆ ಸಮಸ್ಯೆಯಾಗಲಿದೆ. ಗಾಂಧೀಜಿ ವಿವಸ್ತ್ರವಾಗಿ ಬಾಲಕಿಯರೊಂದಿಗೆ ಮಲಗಿಕೊಳ್ಳುತ್ತಿದ್ದುದಾಗಿ ಹೇಳಿಕೊಂಡಿದ್ದಾರೆ. ಈಗ ಅವರು ಬದುಕಿದ್ದು ಆ ಮಾತನ್ನು ಹೇಳಿದ್ದರೆ ಪೋಕ್ಸೋ ಪ್ರಕರಣ ದಾಖಲಿಸುತ್ತಿದ್ದರು. ತಾನು ಸಂತ ಎಂಬ ಕಾರಣಕ್ಕೆ ಹಾಗೆ ಮಾಡುವುದೇ?. 60 ವರ್ಷಗಳಿಂದ ಮರೆಮಾಚಲಾಗಿದ್ದ ಇಂಥ ಸತ್ಯಗಳನ್ನು ಕೃತಿಯ ಮೂಲಕ ಹೊರತಂದಿದ್ದೇನೆ. ಇದರಿಂದ ನನಗೆ ಯಾವುದೇ ಭಯ ಇಲ್ಲ. ಪ್ರಕರಣಗಳ ಬಗ್ಗೆ ತಲೆಕೆಡಿಸಿಕೊಳ್ಳಲ್ಲ. ಕಿರುರಂಗಮಂದಿರದಲ್ಲಿ ಅ.28, 29, 30, 31ರಂದು ಸಂಜೆ 6.30ಕ್ಕೆ ನಾಟಕ ಪ್ರದರ್ಶನ ವಿರಲಿದೆ. ಭರ್ತಿಯಾಗುವ ಮೂಲಕ ವಿರೋಧಿಸುವವರಿಗೆ ನೀವು ಉತ್ತರ ನೀಡಬೇಕು.
> -ಅಡ್ಡಂಡ ಸಿ.ಕಾರ್ಯಪ್ಪ, ಪುಸ್ತಕದ ಲೇಖಕ ಹಾಗೂ ನಾಟಕದ ನಿರ್ದೇಶಕ

ಕೆ.ಟಿ.ವೀರಪ್ಪ–90; ನಾಳೆ ಅಭಿನಂದನಾ ಸಮಾರಂಭ



ಕೆ.ಟಿ.ವೀರಪ್ಪ

ಮೈಸೂರು, ಅ.25(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿ ಸುದೀರ್ಘ ಸೇವೆ ಸಲ್ಲಿಸಿ, ನಿವೃತ್ತಿ ಬಳಿಕ ಸಾರ್ವಜನಿಕ ಜೀವನದಲ್ಲಿ ಗುರುತಿಸಿಕೊಂಡಿರುವ ಸರಳ, ಸಜ್ಜನಿಕೆಯ ಸ್ನೇಹಜೀವಿ ಕೆ.ಟಿ.ವೀರಪ್ಪ ಅವರಿಗೆ ಅ.27ರಂದು ಬೆಳಗ್ಗೆ 10.30ಕ್ಕೆ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಅಭಿನಂದನಾ ಸಮಿತಿ ಸಂಚಾಲಕ ಮಡ್ಡೀಕೆರೆ ಗೋಪಾಲ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕರಾಗಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿದ್ದಾರೆ. ಬಳಿಕ ಸಮಾಜಮುಖಿ ಕೆಲಸ–ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಿಗೆ 90 ವರ್ಷ ಸಂದ ಹಿನ್ನೆಲೆಯಲ್ಲಿ ಅಭಿನಂದಿಸಲು ನಿರ್ಧರಿಸಲಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಎನ್.ಎಸ್.ರಾಮೇಗೌಡ ವಹಿಸಲಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಲೋಕನಾಥ್ ಅವರು ಕೆ.ಟಿ.ವೀರಪ್ಪ ಕುರಿತ ಚಿತ್ರಸಂಪುಟ ಬಿಡುಗಡೆ ಮಾಡಲಿದ್ದಾರೆ. ಇದೇ ವೇಳೆ ಕೆ.ಟಿ. ವೀರಪ್ಪ–ವಿಜಯ ವೀರಪ್ಪ ದಂಪತಿಯನ್ನು ಅಭಿನಂದಿಸಲಾಗುವುದು. ಮುಖ್ಯ ಅತಿಥಿಯಾಗಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೆ., ಪ್ರೊ.ಪ್ರಧಾನ್ ಗುರುದತ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಲೇಖಕ ಬೂಕನಕೆರೆ ವಿಜೇಂದ್ರ, ನೀಲಕಂಠನಹಳ್ಳಿ ತಮ್ಮಣ್ಣೇ ಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೆ.ಟಿ.ವೀರಪ್ಪನವರ ಬಗ್ಗೆ: ಕೆ.ಟಿ.ವೀರಪ್ಪ ಅವರು ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಮಾರು ಹೋಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು.

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಬಿಎ ಮುಗಿಸಿ ನಂತರ ಅಲ್ಲಿಯೇ ಎಂಎ ಪದವಿಯನ್ನೂ ಗಳಿಸಿ, ಅನಂತರ ಮೈಸೂರು ವಿವಿಯ ಪ್ರಸಾರಾಂಗದಲ್ಲಿ ತನ್ನ ಕೆಲಸವನ್ನು ಆರಂಭಿಸಿದ ಅವರು, ಅದರ ನಿರ್ದೇಶಕರಾಗಿ ನಾಡಿನ ಪ್ರಮುಖ ಸಾಹಿತಿಗಳೊಡಗೂಡಿ ಹೊರ ತಂದ 'ಇಂಗ್ಲಿಷ್ –ಕನ್ನಡ ನಿಘಂಟು' ಅವರ ಸಾಧನೆಯ ಒಂದು ಮೈಲಿಗಲ್ಲು. 'ಪ್ರಸಾರಾಂಗದ ಭವ್ಯತೆ ಮೆರೆದ ಮಹಾಸಾಧಕ' ಎಂದೇ ಅವರನ್ನು ಕರೆಯಲಾಗಿದೆ.

ನಾಟಕ, ಮತ್ತಿತರ ಕಲೆಗಳಲ್ಲಿ ಹೆಚ್ಚಿನ ಆಸಕ್ತಿ. ಹಾಗೇ ಅವುಗಳನ್ನು ಪ್ರೋತ್ಸಾಹಿಸುವ ಉದಾರತೆ ಅವರದ್ದು. ನಾಗಮಂಗಲದಲ್ಲಿ ನಡೆದ ಮೂರನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಅವರದ್ದು ದೊಡ್ಡ ಪಾತ್ರ.

ಸರ್ವಜ್ಞ ಹೇಳುವಂತೆ ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯನರಿತ ಸತಿ, ಇವೆಲ್ಲದರ ಜೊತೆಗೆ ಸರ್ವಜ್ಞ ಹೇಳದೇ ಬಿಟ್ಟ ಸುಪುತ್ರರೂ, ಸೊಸೆಯಂದಿರೂ ಅವರಿಗಿದ್ದಾರೆ. ಮಕ್ಕಳು, ಮೊಮ್ಮಕ್ಕಳೊಂದಿಗಿನ ಅವರ ಬದುಕು ಹಸನಾಗಿದೆ ಸ್ನೇಹ ಬಳಗವೂ ದೊಡ್ಡದಿದೆ. ಹಾಗೆಂದು ಸಮಾಜಮುಖಿ ಕೆಲಸಗಳನ್ನು, ಸೇವಾ ಕಾರ್ಯಗಳನ್ನು ಅವರು ತೊರೆದಿಲ್ಲ. ತೊಂಭತ್ತು ವಸಂತಗಳನ್ನು ಪೂರೈಸಿರುವ ಕೆ.ಟಿ.ವೀರಪ್ಪನವರ ಬದುಕು ಆರೋಗ್ಯ ಪೂರ್ಣವಾಗಿ ಶತಕ ಬಾರಿಸುವಂತಾಗಲಿ ಎಂಬುದು ಎಲ್ಲರ ಹಾರೈಕೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು, ಅ.25–ಅಕ್ಟೋಬರ್ 26 ಮತ್ತು 27 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು, ವತಿಯಿಂದ ನಗರದ 57 ಪರೀಕ್ಷಾ ಕೇಂದ್ರಗಳಲ್ಲಿ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ (ಸ್ಥಳೀಯ)ವೃಂದದ ಒಟ್ಟು 1000 ಗ್ರಾಮ ಆಡಳಿತ ಅಧಿಕಾರಿ ಹುದ್ದೆಯ ನೇರ ನೇಮಕಾತಿಗೆ ಕನ್ನಡ ಭಾಷೆ ಪರೀಕ್ಷೆ ನಡೆಯಲಿದ್ದು, ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 2023 ಸೆಕ್ಷನ್ 163 ರೀತ್ಯ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಮುಡಾ ಹಗರಣದ ತನಿಖೆ ಚುರುಕುಗೊಳಿಸಿದ ಇಡಿ
ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜುಗೆ ಸಮನ್ಸ್ ಜಾರಿ

ಮೈಸೂರು, ಅ.25(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ನಿವೇಶನ ಹಂಚಿಕೆ ಹಗರಣದ ಬಗ್ಗೆ ವಿಚಾರಣೆಗೆ ಹಾಜರಾಗುವಂತೆ ಇಡಿ (ಜಾರಿ ನಿರ್ದೇಶನಾಲಯ) ಆರ್‌ಟಿಐ ಕಾರ್ಯಕರ್ತ ಗಂಗರಾಜುಗೆ ನೋಟಿಸ್ ಜಾರಿ ಮಾಡಿದೆ.

ಪ್ರಕರಣದ ದೂರುದಾರ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣನನ್ನು ಇಡಿ ಈಗಾಗಲೇ ವಿಚಾರಣೆ ಮಾಡಿದ್ದು, ಮತ್ತೊಬ್ಬ ಆರ್‌ಟಿಐ ಕಾರ್ಯಕರ್ತ ಗಂಗರಾಜುಗೆ ಕೂಡ ಸಮನ್ಸ್ ನೀಡಿದೆ.

ಮುಡಾ ಹಗರಣದ ಬಗ್ಗೆ ಗಂಗರಾಜು ಧ್ವನಿ ಎತ್ತಿದ್ದರು. ಅಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ 20 ಗುಂಟೆ ಭೂಮಿ ಖರೀದಿ ಮಾಡುವಾಗ ಮುಡಾ ಪೈಪ್‌ಲೈನ್‌ಗೆ ಮೀಸಲಿಟ್ಟಿದ್ದ ಜಾಗವನ್ನು ಸೇರಿಸಿ ಉಪ ನೋಂದಣಿ ಕಚೇರಿಯಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ ಎಂದು ಗಂಗರಾಜು ಆರೋಪಿಸಿದ್ದರು.

ಸುಮಾರು 1.85 ಕೋಟಿ ನೀಡಿ 21,771 ಚದರಡಿ ಭೂಮಿ ಖರೀದಿ ಮಾಡಿದ್ದಾರೆ. ಇದರ ಜೊತೆಗೆ ಸರ್ಕಾರಿ ಸೇರಿಸಿ ಭೂಮಿ ರಿಜಿಸ್ಟರ್ ಮಾಡಿಸಿಕೊಂಡಿದ್ದರು. ಆರ್‌ಟಿಐನಡಿ ಈ ಬಗ್ಗೆ ಮಾಹಿತಿ ಕೇಳಿದ ಕೂಡಲೇ ವಿವಾದ ತೀವ್ರ ಸ್ವರೂಪ ಪಡೆಯುತ್ತದೆ ಎಂದು ಅರಿತ ಪಾರ್ವತಿ ಅವರು ಪೈಪ್‌ಲೈನ್‌ಗೆ ಮೀಸಲಿಟ್ಟಿದ್ದ 8,998 ಚದರಡಿ ಜಾಗ ಬಿಟ್ಟು 12,782 ಚದರಡಿಯನ್ನು ಮತ್ತೆ ರಿಜಿಸ್ಟರ್ ತಿದ್ದುಪಡಿ ಮಾಡಿಸಿಕೊಂಡಿದ್ದರು ಎಂದು ಪಾರ್ವತಿ ವಿರುದ್ಧ ಗಂಗರಾಜು ಆರೋಪ ಮಾಡಿದ್ದರು.

ಈ ಸಂಬಂಧ ದಾಖಲಾತಿ ಸಮೇತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ಗೆ ಇ–ಮೇಲ್ ಮೂಲಕ ಗಂಗರಾಜು ದೂರು ನೀಡಿದ್ದರು. ಇದಲ್ಲದೆ ಮುಡಾ ಹಗರಣಕ್ಕೆ ಸಂಬಂಧಿಸಿದಂತೆಯೂ ಗಂಗರಾಜು ದಾಖಲಾತಿ ಸಮೇತ ಆರೋಪ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 22 ರಂದು ವಿಚಾರಣೆಗೆ ಹಾಜರಾಗುವಂತೆ ಇಡಿ ಅಧಿಕಾರಿಗಳು ಸೂಚಿಸಿದ್ದಾರೆ. ವಿಚಾರಣೆಗೆ ಬರುವ ಸಂದರ್ಭದಲ್ಲಿ ವೈಯಕ್ತಿಕ ಮಾಹಿತಿ ಜೊತೆಗೆ ಅಗತ್ಯ ದಾಖಲಾತಿಗಳನ್ನು ತರುವಂತೆ ಸೂಚನೆ ಕೂಡ ನೀಡಿದ್ದಾರೆ.

ಆದರೆ ನೋಟಿಸ್ ನನಗೆ ವಿಳಂಬವಾಗಿ ತಲುಪಿರುವ ಕಾರಣ ನಾಳೆ (ಅಕ್ಟೋಬರ್ 26) ವಿಚಾರಣೆಗೆ ಹಾಜರಾಗುವುದಾಗಿ ಗಂಗರಾಜು ಇಡಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಮುಡಾದ ಕೆಲವು ಅಧಿಕಾರಿಗಳಿಗೆ ಸಮನ್ಸ್ ನೀಡಿರುವ ಇಡಿ ಅಧಿಕಾರಿಗಳು ಈಗ ಗಂಗರಾಜುಗೂ ನೋಟಿಸ್ ಜಾರಿ ಮಾಡಿದ್ದು, ವಿಚಾರಣೆ ಚುರುಕುಗೊಳಿಸಿದ್ದಾರೆ.

ನ್ಯೂಜಿಲೆಂಡ್ ಹಿಡಿತದಲ್ಲಿ ಪುಣೆ ಟೆಸ್ಟ್
ಭಾರತ 156ಕ್ಕೆ ಆಲೌಟ್, ಕೀವಿಸ್‌ಗೆ 301 ರನ್ ಮುನ್ನಡೆ



ಪುಣೆ, ಅ.25– ನ್ಯೂಜಿಲೆಂಡ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಭಾರತ 2ನೇ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ 156 ರನ್‌ಗೆ ಆಲೌಟಾಗಿದೆ. 103 ರನ್‌ಗಳ ಮುನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿರುವ ನ್ಯೂಜಿಲೆಂಡ್ ದಿನದಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 198 ರನ್ ಗಳಿಸಿದ್ದು, 301 ರನ್‌ಗಳ ಮುನ್ನಡೆ ಗಳಿಸಿ ಪಂದ್ಯದ ಮೇಲೆ ಹಿಡಿತ ಸಾಧಿಸಿದೆ.

ಇಂದು ಬ್ಯಾಟಿಂಗ್ ಆರಂಭಿಸಿದ ಭಾರತೀಯ ಆಟಗಾರರಿಂದ ದೊಡ್ಡ ಇನ್ನಿಂಗ್ಸ್ ಮೂಡಿ ಬರಲಿಲ್ಲ ಬದಲಿಗೆ ಕೀವಿಸ್ ಸ್ಪಿನ್ನರ್‌ಗಳ ಸ್ಪಿನ್ ಮೋಡಿಗೆ ತತ್ತರಿಸಿದ ಭಾರತದ ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ರವೀಂದ್ರ ಜಡೇಜಾ 38, ಯಶಸ್ವಿ ಜೈಸ್ವಾಲ್, ಶುಭ್‌ಮನ್ ಗಿಲ್ ತಲಾ 30, ರಿಷಬ್ ಪಂತ್, ವಾಷಿಂಗ್ಟನ್ ಸುಂದರ್ ತಲಾ 18, ಸರ್ಫರಾಜ್ ಖಾನ್ 11 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಮಿಚೆಲ್ ಸ್ಯಾಂಟ್ನರ್ 7, ಗ್ಲೆನ್ ಫಿಲಿಪ್ 2, ಟೀಮ್ ಸೌಥಿ 1 ವಿಕೆಟ್ ಕಬಳಿಸಿದರು.

ನಂತರ 2ನೇ ಇನ್ನಿಂಗ್ಸ್ ಆರಂಭಿಸಿದ ನ್ಯೂಜಿಲೆಂಡ್ ಮತ್ತೊಮ್ಮೆ ಬೃಹತ್ ಮೊತ್ತದತ್ತ ದಾಪುಗಾಲು ಇಟ್ಟಿದೆ. ಡೆವೊನ್ ಕಾನ್‌ವೇ 17, ವಿಲ್ ಯಂಗ್ 23 , ರಚಿನ್ ರವೀಂದ್ರ 9 ಹಾಗೂ ಡೇರಲ್ ಮಿಚೆಲ್ ಬೇಗನೆ ವಿಕೆಟ್ ಒಪ್ಪಿಸಿದರಾದರೂ, ಮತ್ತೊಂದು ತುದಿಯಲ್ಲಿ ನಾಯಕ ಟಾಮ್ ಲೇಥಮ್ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸುವ ಮೂಲಕ ತಂಡಕ್ಕೆ ಆಸರೆಯಾದರು. ಲೇಥಮ್ 133 ಎಸೆತಗಳಲ್ಲಿ 10 ಬೌಂಡರಿ ಸಹಿತ 86 ರನ್ ಬಾರಿಸಿ, ವಾಷಿಂಗ್ಟನ್ ಸುಂದರ್‌ಗೆ 4ನೇ ಬಲಿಯಾದರು. ಸದ್ಯ ವಿಕೆಟ್ ಕೀಪರ್ ಬ್ಯಾಟರ್ ಟಾಮ್ ಬ್ಲಂಡೆಲ್ 30 ಹಾಗೂ ಗ್ಲೆನ್ ಫಿಲಿಫ್ಸ್ 9 ರನ್ ಗಳಿಸಿ ಮೂರನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ದಸರಾ ವಸ್ತುಪ್ರದರ್ಶನ ಪ್ರವಾಸಿಗರ ನೆಚ್ಚಿನ ಮನರಂಜನಾ ತಾಣ: ಅಯೂಬ್ ಖಾನ್



ಮೈಸೂರು, ಅ.25(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಪ್ರವಾಸಿಗರ ನೆಚ್ಚಿನ ಮನರಂಜನಾ ತಾಣವಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ಅ.21ರಂದು ಸಂಜೆ 4.30ರ ಸುಮಾರಿಗೆ ಸುರಿದ ಭಾರೀ ಮಳೆ–ಗಾಳಿಗೆ ಮಲ್ಲಿಗೆ ಇಡ್ಲಿ ಮಳಿಗೆ ಕುಸಿದು ಬಿದ್ದು, ಅಪಾರ ನಷ್ಟ ಉಂಟಾಗಿತ್ತು. ನಂತರ ವಸ್ತುಪ್ರದರ್ಶನ ಆಹಾರ ಮಳಿಗೆಗಳ ಗುತ್ತಿಗೆದಾರರ ಸಹಕಾರ ಹಾಗೂ ಪ್ರಾಧಿಕಾರದ ನೆರವಿನ ಭರವಸೆಯೊಂದಿಗೆ ಪುನರ್ ನಿರ್ಮಾಣಗೊಂಡ ಮಳಿಗೆಗೆ ಶುಕ್ರವಾರ ಚಾಲನೆ ನೀಡಿದ ಅವರು, ದಸರಾ ವಸ್ತುಪ್ರದರ್ಶನವನ್ನು ಪ್ರವಾಸಿಗರ ಹಿತ ದೃಷ್ಟಿಯಿಂದ ಅ.21ರಂದು ಸಂಜೆ ಮಾತ್ರ ವಸ್ತುಪ್ರದರ್ಶನ ಗೇಟ್ ಬಂದ್ ಮಾಡಲಾಗಿತ್ತು. ನಂತರದ ದಿನಗಳಿಂದ ಎಂದಿನಂತೆ ವಸ್ತುಪ್ರದರ್ಶನ ಬಾಗಿಲು ತೆರೆದಿದ್ದು, ಪ್ರವಾಸಿಗರ ಮನರಂಜನೆಯ ತಾಣವಾಗಿದೆ. ಆಕರ್ಷಕ ವಿದ್ಯುತ್ ದೀಪಾಲಂಕಾರ, ಸೆಲ್ಫಿಸ್ಪಾಟ್, ಬೋಟಿಂಗ್, ಅಮ್ಯೂಸ್ಮೆಂಟ್ ಪಾರ್ಕ್, ಸರ್ಕಾರಿ ಮಳಿಗೆಗಳು ಕಣ್ಮನ ಸೆಳೆಯುತ್ತಿವೆ. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಿದರು.

7–8 ಲಕ್ಷ ರೂ.ನಷ್ಟ: ಭಾರೀ ಮಳೆ–ಗಾಳಿಗೆ ಮಳಿಗೆ ಕುಸಿದು ಬಿದ್ದಿದ್ದರಿಂದ ಸುಮಾರು 7–8 ಲಕ್ಷ ರೂ. ನಷ್ಟವಾಗಿದೆ ಅಲ್ಲದೆ ಮೂರು ದಿನಗಳಿಂದ ಯಾವುದೇ ವ್ಯಾಪಾರ ನಡೆದಿಲ್ಲ. ಆಹಾರ ಮಳಿಗೆಗಳಿಗೆ ಅವಕಾಶ ನೀಡುವ ಗುತ್ತಿಗೆದಾರರು ಸುಮಾರು 1 ಲಕ್ಷ ರೂ. ಸಹಕಾರ ನೀಡಿದ್ದಾರೆ. ಪ್ರಾಧಿಕಾರದಿಂದಲೂ ಆರ್ಥಿಕ ನಷ್ಟ ತುಂಬುವ ಭರವಸೆ ನೀಡಿದ್ದಾರೆ ಎಂದು ಮಲ್ಲಿಗೆ ಇಡ್ಲಿ ಮಳಿಗೆ ಮಾಲೀಕ ನಾತಿಕ್ ಅಹಮದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವೈದ್ಯಾಧಿಕಾರಿಗಳಿಗೆ ಕಾರ್ಯಾಗಾರ

ಮೈಸೂರು, ಅ.25(ಎಂಕೆ)– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಡಬ್ಲ್ಯೂಹೆಚ್‌ಓ ಇಂಡಿಯಾ ವತಿಯಿಂದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ 'ನಗರ ಲಸಿಕಾ ಕಾರ್ಯಚಟುವಟಿಕೆಯ ಬಲವರ್ಧನೆ' ಕುರಿತು ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರ ನಡೆಯಿತು. ಕಾರ್ಯಾಗಾರವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಉದ್ಘಾಟಿಸಿದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮದ್, ಡಬ್ಲ್ಯೂಹೆಚ್‌ಓ ಇಂಡಿಯಾ ಮೈಸೂರು ವಿಭಾಗದ ಎಸ್‌ಎಂಓ ಡಾ.ಸುಧೀರ್ ನಾಯ್ಕ್, ತಾಲೂಕು ಆರೋಗ್ಯಾಧಿಕಾರಿ ಡಾ.ಪುಟ್ಟತಾಯಮ್ಮ ಹಾಗೂ ಇನ್ನಿತರೆ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.


ಅಭಿನಂದನೆ



ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ಜಾಗೃತ ದಳದ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಬಡ್ತಿ ಹೊಂದಿದ ಸಿ.ಉಮೇಶ್ ಅವರನ್ನು ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ವಿಕ್ರಾಂತ್ ಪಿ. ದೇವೇಗೌಡ ಆತ್ಮೀಯವಾಗಿ ಅಭಿನಂದಿಸಿದರು.

ದೇಶ – ವಿದೇಶ

ಅಮಿತ್ ಶಾ ವಿದೇಶ ಪ್ರವಾಸದ ಮಾಹಿತಿ ನೀಡಿದ್ರೆ 10 ಲಕ್ಷ ಡಾಲರ್



ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ವಿದೇಶ ಪ್ರವಾಸದ ಮಾಹಿತಿ ನೀಡಿದರೆ 10 ಲಕ್ಷ ಡಾಲರ್ ಬಹುಮಾನ ನೀಡುವುದಾಗಿ ಖಲಿಸ್ತಾನಿ ಉಗ್ರಹಾಗೂ ಸಿಖ್ಸ್ ಫಾರ್ ಜಸ್ಟಿಸ್ (SFJ) ಮುಖ್ಯಸ್ಥ ಗುರುಪತ್ವಂತ್ ಸಿಂಗ್ ಪನ್ನು ಘೋಷಿಸಿದ್ದಾನೆ.

1984ರ ಸಿಖ್ ಹತ್ಯಾಕಾಂಡದ ವೇಳೆ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಸಿಬ್ಬಂದಿ ಕಾನೂನುಬಾಹಿರ ಹತ್ಯೆಗಳು ಸೇರಿದಂತೆ ವಿವಿಧ ದೌರ್ಜನ್ಯಗಳನ್ನು ಎಸಗಿದ್ದಾರೆ. ಹಾಗಾಗಿ ದೇಶದಾದ್ಯಂತ ನವೆಂಬರ್ 26ರಿಂದ ವಿದ್ಯಾರ್ಥಿಗಳು ಮತ್ತು ಪೋಷಕರು ಸಿಆರ್‌ಪಿಎಫ್ ಶಾಲೆಗಳನ್ನು ಬಹಿಷ್ಕರಿಸಬೇಕು ಎಂದು ಗುರುಪತ್ವಂತ್ ಸಿಂಗ್ ಪನ್ನು ಒತ್ತಾಯಿಸಿದ್ದಾನೆ.

ಅಮಿತ್ ಶಾ ಅವರ ವಿದೇಶ ಪ್ರವಾಸದ ಮಾಹಿತಿ ನೀಡಿದರೆ 10 ಲಕ್ಷ ಡಾಲರ್ ಬಹುಮಾನ ನೀಡುವುದಾಗಿ ಘೋಷಣೆ ಮಾಡಿರುವ ಗುರುಪತ್ವಂತ್ ಸಿಂಗ್ ಪನ್ನು ನವೆಂಬರ್ 1ರಿಂದ 19ರವರೆಗೆ ಏರ್ ಇಂಡಿಯಾ ವಿಮಾನಗಳಲ್ಲಿ ಯಾರೂ ಪ್ರಯಾಣಿಸಬೇಡಿ. ಸಿಖ್ ಹತ್ಯಾಕಾಂಡಕ್ಕೆ 40 ವರ್ಷ ಪೂರ್ಣಗೊಳ್ಳುವ ನಿರ್ದಿಷ್ಟ ದಿನಾಂಕದಂದು ಏರ್ ಇಂಡಿಯಾ ವಿಮಾನದ ಮೇಲೆ ದಾಳಿ ನಡೆಯಲಿದೆ ಎಂದು ಎಚ್ಚರಿಕೆ ನೀಡಿದ್ದಾನೆ.

ಕಚೇರಿಯಲ್ಲಿ ಹೆಚ್ಚು ಹೊತ್ತು ಬ್ರೇಕ್
ಮಹಿಳಾ ಸಹೋದ್ಯೋಗಿ ಕೊಂದ ವ್ಯಕ್ತಿ

ಅಮೆರಿಕಾ: ಕಚೇರಿಯಲ್ಲಿ ಹೆಚ್ಚು ಹೊತ್ತು ಬ್ರೇಕ್ ತೆಗೆದುಕೊಳ್ಳುತ್ತಾರೆ ಎಂದು ಕೋಪಗೊಂಡ ವ್ಯಕ್ತಿಯೊಬ್ಬ ಮಹಿಳಾ ಸಹೋದ್ಯೋಗಿಯನ್ನು ಕೊಲೆ ಮಾಡಿದ ಘಟನೆ ಅಮೆರಿಕದಲ್ಲಿ ನಡೆದಿದೆ. ಟ್ರಾವಿಸ್ ಮೆರಿಲ್ ಎಂಬಾತ ತಮ್ಜಾರಾ ಕೊಲಾಜೋ ಎಂಬುವವರ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿದ್ದು, ಆಕೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಮೆರಿಲ್‌ನನ್ನು ಬಂಧಿಸಿ ಕೊಲಾಜೊ ಅವರ ಜೀವವನ್ನು ಉಳಿಸಲು ಪ್ರಯತ್ನಿಸಿದರೂ ಅದು ಸಾಧ್ಯವಾಗಿಲ್ಲ. ಆಕೆ ಹೆಚ್ಚೆಚ್ಚು ಹೊತ್ತು ಬ್ರೇಕ್ ತೆಗೆದುಕೊಳ್ಳುವುದು ಮತ್ತು ಕೆಲಸದ ಮೇಲೆ ಗಮನ ಕಡಿಮೆಯಾಗಿದ್ದರ ಹಿನ್ನೆಲೆಯಲ್ಲಿ ಕೋಪಗೊಂಡು ತಾನು ಈ ಕೆಲಸ ಮಾಡಿದ್ದೇನೆ ಎಂದು ಆರೋಪಿ ಒಪ್ಪಿಕೊಂಡಿದ್ದಾನೆ.

ಅಷ್ಟೇ ಅಲ್ಲದೆ ಬ್ರೇಕ್ ತೆಗೆದುಕೊಂಡು ಊಟಕ್ಕೆ ಹೋದಾಗಲೂ ಕೂಡ ಆತ ಆಕೆಯನ್ನೇ ನೋಡುತ್ತಾ ಕುಳಿತಿರುತ್ತಿದ್ದ. ಹೀಗಾಗಿ ಆಕೆ ಒಮ್ಮೆ ಬೈದಿದ್ದಳು. ಅಷ್ಟೇ ಅಲ್ಲದೆ ಎಚ್‌ಆರ್ ಬಳಿ ದೂರು ಕೂಡ ನೀಡಿದ್ದಳು. ಆತನಿಗೆ ಎಚ್‌ಆರ್ ಬೈದಿದ್ದ ಕಾರಣ ಕೋಪಗೊಂಡ ಆತ ಗನ್ ಖರೀದಿಸಿ ಮನೆಯಲ್ಲೇ ಪ್ರಾಕ್ಟೀಸ್ ಕೂಡ ಮಾಡಿದ್ದ. ಕೊಲಾಜೋ ಊಟಕ್ಕೆ ಹೋಗುವಾಗ ಆತ ಕೂಡ ಆಕೆಯನ್ನು ಹಿಂಬಾಲಿಸಿದ್ದ, ಜತೆಗೆ ಇಬ್ಬರೂ ಕೂತು ಊಟ ಮಾಡಿದ್ದಾರೆ. ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಬಂದೂಕಿನಿಂದ ಹಲವು ಬಾರಿ ಗುಂಡು ಹಾರಿಸಿದ್ದಾನೆ.

ಅಮೆರಿಕದಲ್ಲಿ ಪೋಷಕರು, ಒಡಹುಟ್ಟಿದರನ್ನು ಭೀಕರವಾಗಿ ಕೊಂದ 15 ವರ್ಷದ ಬಾಲಕ

ವಾಷಿಂಗ್ಟನ್: ಅಮೆರಿಕದ ವಾಷಿಂಗ್ಟನ್‌ನಲ್ಲಿ 15 ವರ್ಷದ ಬಾಲಕನೊಬ್ಬ ತನ್ನ ಪೋಷಕರು ಹಾಗೂ ತನ್ನ ಮೂವರು ಒಡಹುಟ್ಟಿದವರನ್ನು ನಿರ್ದಯವಾಗಿ ಹತ್ಯೆ ಮಾಡಿದ ಆಘಾತಕಾರಿ ಘಟನೆ ನಡೆದಿದೆ.

ಅಪ್ರಾಪ್ತ ವಯಸ್ಕನಾಗಿರುವ ಕಾರಣದಿಂದ ಕೋರ್ಟ್ ದಾಖಲೆಗಳಲ್ಲಿ ಬಾಲಕನ ಹೆಸರನ್ನು ಬಹಿರಂಗಪಡಿಸಿಲ್ಲ. ಆತನ ವಿರುದ್ಧ ಕೊಲೆ ಹಾಗೂ ಕೊಲೆ ಯತ್ನ ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಫಾಲ್ ಸಿಟಿಯಲ್ಲಿನ ಮನೆಯೊಂದರಲ್ಲಿ ಸೋಮವಾರ ಮುಂಜಾನೆ 5 ಗಂಟೆ ವೇಳೆಗೆ ಇಬ್ಬರು ವಯಸ್ಕರು ಮತ್ತು 7, 9 ಹಾಗೂ 13 ವರ್ಷದ ಮೂವರು ಮಕ್ಕಳ ಶವಗಳು ಪತ್ತೆಯಾಗಿದ್ದವು. ಬಾಲಕ ಎಲ್ಲರನ್ನೂ ಕೊಲ್ಲಲು ಗುಂಡಿನ ದಾಳಿ ನಡೆಸಿದ್ದರೂ, ಗಾಯಗೊಂಡಿದ್ದ 11 ವರ್ಷದ ಆತನ ಸಹೋದರಿ, ಸತ್ತಂತೆ ನಾಟಕವಾಡಿ ಜೀವ ಉಳಿಸಿಕೊಂಡಿದ್ದಳು. ಕಿಟಕಿ ಮೂಲಕ ಮನೆಯಿಂದ ಹೊರಗೆ ಹಾರಿ ತಪ್ಪಿಸಿಕೊಂಡಿದ್ದ ಆಕೆ ಪಕ್ಕದ ಮನೆಗೆ ಹೋಗಿ ಘಟನೆ ಬಗ್ಗೆ ತಿಳಿಸಿದ್ದಳು ಎಂದು ಕಿಂಗ್ ಕೌಂಟಿ ಪೊಲೀಸ್ ಇಲಾಖೆಯ ಪತ್ತೇದಾರರು ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ. 15 ವರ್ಷದ ಬಾಲಕನನ್ನು ಬಂಧಿಸಲಾಗಿದ್ದು, ಬಾಲಾರೋಪ ಕೇಂದ್ರದಲ್ಲಿ ಇರಿಸಲಾಗಿದೆ.

ತಿರುಪತಿಯಲ್ಲಿ ಬಾಂಬ್ ಬೆದರಿಕೆ:
ಪೊಲೀಸರಿಂದ ರಾತ್ರೋ ರಾತ್ರಿ ಶೋಧ


ತಿರುಪತಿ: ಆಂಧ್ರಪ್ರದೇಶದ ತಿರುಪತಿಯಲ್ಲಿ ಬಾಂಬ್ ಬೆದರಿಕೆ ಬಗ್ಗೆ ಆಘಾತಕಾರಿ ದೂರು ಕೇಳಿ ಬಂದಿದ್ದು, ಈ ಬೆದರಿಕೆ ಬಂದ ನಂತರ ರಾಜ್ಯ ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದಾರೆ. ಹೋಟೆಲ್‌ನಲ್ಲಿ ಬಾಂಬ್ ಇರಿಸಿರುವ ಬಗ್ಗೆ ಕರೆ ಮತ್ತು ಇಮೇಲ್ ಮೂಲಕ ಮಾಹಿತಿ ನೀಡಲಾಗಿತ್ತು ಎಂದು ಹೇಳಲಾಗುತ್ತಿದೆ.

ಬಾಂಬ್ ನಿಷ್ಕ್ರಿಯ ದಳ ಗುರುವಾರ (ಅ.24) ರಾತ್ರಿ 10 ರಿಂದ ಬೆಳಗಿನ ಜಾವ 2 ಗಂಟೆಯವರೆಗೆ ವಿವಿಧ ಹೋಟೆಲ್‌ಗಳಲ್ಲಿ ಶೋಧ ನಡೆಸಿತು. ಲೀಲಾಮಹಲ್ ಬಳಿ ಮೂರು ಹೋಟೆಲ್‌ಗಳನ್ನು ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿತ್ತು.

ಈ ಬೆದರಿಕೆಯ ಇಮೇಲ್‌ನಲ್ಲಿ ಈ ವರ್ಷದ ಫೆಬ್ರವರಿಯಲ್ಲಿ ಬಂಧಿಸಲಾದ ಡ್ರಗ್ ಕಿಂಗ್‌ಪಿನ್ ಜಾಫರ್ ಸಿದ್ದಿಕ್ ಹೆಸರು ಕೂಡ ಇದೆ ಎಂದು ಹೇಳಲಾಗುತ್ತಿದೆ ತಿರುಪತಿ ಪೂರ್ವ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀನಿವಾಸುಲು ಬಾಂಬ್ ಬೆದರಿಕೆಯ ಘಟನೆಯನ್ನು ದೃಢಪಡಿಸಿದ್ದಾರೆ ಮತ್ತು ಈ ಬೆದರಿಕೆಗಳಿಗೆ ಕಾರಣರಾದವರನ್ನು ಗುರುತಿಸಲಾಗುತ್ತಿದೆ ಎಂದು ಜನರಿಗೆ ಭರವಸೆ ನೀಡಿದರು.

ಮೂರು ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಎಚ್ಚರಿಕೆ ಬಂದಿದ್ದು, ಇಮೇಲ್‌ಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ವಿವಿಧ ಕೋನಗಳಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಇನ್ಸ್‌ಪೆಕ್ಟರ್ ಶ್ರೀನಿವಾಸುಲು ತಿಳಿಸಿದ್ದಾರೆ.

ತಣ್ಣಗಾದ ಡಾನಾ ಚಂಡಮಾರುತದ ಅಬ್ಬರ: ವಿಮಾನ ಸೇವೆ ಆರಂಭ




ನವದೆಹಲಿ: ಒಡಿಶಾ ಮತ್ತು ಜಾರ್ಖಂಡ್‌ನಲ್ಲಿ ಭಾರೀ ಭೀತಿ ಸೃಷ್ಟಿಸಿದ್ದ ಡಾನಾ ಚಂಡಮಾರುತ ಇದೀಗ ನಿಧಾನವಾಗಿ ತನ್ನ ಆಕ್ರೋಶವನ್ನು ನಿರೀಕ್ಷೆಗೂ ಮೊದಲೇ ಕಮ್ಮಿ ಮಾಡಿದೆ.

ಡಾನಾ ಚಂಡಮಾರುತವು ಇಂದು ಬೆಳಗ್ಗೆ ಒಡಿಶಾಗೆ ಪ್ರವೇಶಿಸಿದ್ದು, ಗಂಟೆಗೆ 120 ಕಿಲೋಮೀಟರ್ ವೇಗದಲ್ಲಿ ಅಪ್ಪಳಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ ಈಗಾಗಲೇ ತಿಳಿಸಿತ್ತು. ಈ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡು ಜಮ್ಶೆಡ್‌ಪುರ ಮತ್ತು ಚೈಬಾಸಾದಲ್ಲಿ 6 ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿತ್ತು.

ಒಡಿಶಾದ ಕರಾವಳಿಯನ್ನು ತಲುಪಿದ 'ಡಾನಾ' ಚಂಡಮಾರುತದ ದುರ್ಬಲಗೊಂಡ ನಂತರ, ಇದೀಗ ಪಶ್ಚಿಮ ಬಂಗಾಳದ ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಸಂಚಾರ ಪುನಃಸ್ಥಾಪಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಪೂರ್ವ ರೈಲ್ವೆಯ ಸೀಲ್ದಾ ವಿಭಾಗದ ದಕ್ಷಿಣ ವಿಭಾಗದಲ್ಲಿ ಬೆಳಗ್ಗೆ 10 ಗಂಟೆಗೆ ರೈಲು ಸೇವೆಗಳನ್ನು ಸಹ ಪುನಃಸ್ಥಾಪಿಸಲಾಗಿದೆ.

ಪೊಲೀಸ್ ಪೇದೆ ಮೇಲೆ ಕಾರು ಹರಿಸಲು ಮುಂದಾಗಿದ್ದ
ಚಾಲಕ ನಜೀರ್ ಬಂಧನ



ಮಡಿಕೇರಿ, ಅ.25–ನಗರ ಸಂಚಾರ ಠಾಣೆ ಪೊಲೀಸ್ ಪೇದೆ ಮೇಲೆ ಕಾರು ಹರಿಸಲು ಮುಂದಾಗಿ ಪರಾರಿಯಾಗಿದ್ದ ಚಾಲಕನನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಟ್ವಾಳ ಮೂಲದ ಬಂಧಿತ ಆರೋಪಿ ನಜೀರ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಡಿಕೇರಿ ಹೃದಯ ಭಾಗದಲ್ಲಿ ಹಿಂದೆ ಎರಡು ಕಾರುಗಳ ನಡುವೆ ಅಪಘಾತ ಸಂಭವಿಸಿತ್ತು. ಈ ವೇಳೆ ಜನರಲ್ ತಿಮ್ಮಯ್ಯ ಸರ್ಕಲ್ ಬಳಿ ಕರ್ತವ್ಯದಲ್ಲಿದ್ದ ಪೊಲೀಸ್ ಪೇದೆ ಎ.ಜಿ.ಸಂಜು ಅವರು ಸ್ಥಳಕಾಗಮಿಸಿ ಕಾರಿನ ಫೋಟೋ ತೆಗೆದು ಪರಿಶೀಲನೆ ನಡೆಸುತ್ತಿದ್ದರು. ಈ ವೇಳೆ ಮತ್ತೊಂದು ಕಾರನ್ನು ಬದಿಗೆ ಸರಿಸುವಂತೆ ಸೂಚಿಸಿದ್ದಾರೆ. ಚಾಲಕ ನಜೀರ್ ಕಾರನ್ನು ಪೇದೆ ಸಂಜು ಮೇಲೆ ಹರಿಸಲು ಮುಂದಾಗಿದ್ದು, ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದರು.

ಬಳಿಕ ಆರೋಪಿ ಕಾರು ಸಹಿತ ಸ್ಥಳದಿಂದ ಪರಾರಿಯಾಗಿದ್ದ. ಪೇದೆ ಮೇಲೆ ಕಾರು ಹರಿಸಲು ಮುಂದಾದ ದೃಶ್ಯ ಸಿಸಿ ಕ್ಯಾಮರದಲ್ಲಿ ಸೆರೆಯಾಗಿತ್ತು. ಕಾರು ಹರಿಸಿದ ಪ್ರಕರಣ ಸಂಬಂಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ ತನಿಖೆ ಚುರುಕುಗೊಳಿಸಿದ ಪೊಲೀಸರು ಪರಾರಿಯಾಗಿದ್ದ ಚಾಲಕ ನಜೀರ್‌ನನ್ನು ಕಾರು ಸಹಿತ ಬಂಧಿಸಿದ್ದಾರೆ.

ಹದಗೆಟ್ಟ ಅಯ್ಯಪ್ಪಬೆಟ್ಟದ ಮುಖ್ಯರಸ್ತೆ ಸರಿಪಡಿಸಿ



ವಿರಾಜಪೇಟೆ, ಅ.25–ವಿರಾಜಪೇಟೆ–ಸಿದ್ದಾಪುರ ಮುಖ್ಯರಸ್ತೆಯಲ್ಲಿರುವ ಅಯ್ಯಪ್ಪಬೆಟ್ಟದ ಬಳಿ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ರಾತ್ರಿ ಸಂಚಾರ ದುಸ್ತರವಾಗಿದೆ ಎಂದು ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಸಿ.ಜೆ.ವರ್ಗಿಸ್ ದೂರಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೀದಿ ದೀಪಗಳು ಇಲ್ಲದ ಕಾರಣ ವಾಹನ ಸವಾರರು ಮತ್ತು ಸಾರ್ವಜನಿಕರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ. ಬೀದಿ ದೀಪ ಅಳವಡಿಸುವಂತೆ ವಾರ್ಡ್‌ನ ಸದಸ್ಯ ರಾಜೇಶ್ ಅವರಿಗೆ ಹೇಳಿದರೆ ನಾವೇನು ಮಾಡಲು ಸಾಧ್ಯವಿಲ್ಲ ಎಂಬ ಉಡಾಫೆ ಉತ್ತರ ನೀಡುತ್ತಾರೆ ಎಂದು ಆರೋಪಿಸಿದರು.

ವಿರಾಜಪೇಟೆಯಿಂದ ಅಮ್ಮತಿಗೆ ತೆರಳುವ ಅಂತರ ರಾಜ್ಯ ಹೆದ್ದಾರಿಯಲ್ಲಿ ನೆಲ್ಲಮಕ್ಕಡ ಮೋಹನ್ ಅಯ್ಯಪ್ಪ ಅವರ ಮನೆ ಮುಂದಿನ ರಸ್ತೆಯಲ್ಲಿ ಬೀದಿ ದೀಪಗಳಿಲ್ಲ. ಇದರಿಂದ ರಸ್ತೆಯಲ್ಲಿ ಗುಂಡಿಗಳು ಸರಿಯಾಗಿ ಕಾಣುವುದಿಲ್ಲ. ಜೊತೆಗೆ ಮಳೆ ನೀರು ಹೊಂಡದಲ್ಲಿ ನಿಂತು ವಾಹನಗಳು ಅಪಘಾತಕ್ಕೀಡಾಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮತ್ತೊಂದು ವಾರ್ಡ್ ಸದಸ್ಯ ರಂಜಿ ಪೂಣಚ್ಚ ಅವರನ್ನು ಕೇಳಿದರೆ, ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ ಎನ್ನುತ್ತಾರೆ. ಮುಖ್ಯ ರಸ್ತೆಬದಿ ಅನೇಕ ಮನೆಗಳಿದ್ದು, ಜನರು ರಾತ್ರಿ ಕತ್ತಲಲ್ಲಿ ನಿತ್ಯ ಭಯದಿಂದ ತಿರುಗಾಡುತ್ತಿದ್ದಾರೆ. ಈ ವಿಚಾರವನ್ನು ಶಾಸಕ ಪೊನ್ನಣ್ಣ ಅವರ ಗಮನಕ್ಕೂ ತಂದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಡುಗೆ ಅನಿಲ ವಿತರಣೆ ವಿಳಂಬ: ವಿರಾಜಪೇಟೆ ವಿಭಾಗದಲ್ಲಿ ಹೆಚ್‌ಪಿ ಅಡುಗೆ ಅನಿಲ ವಿತರಣೆ ವಿಳಂಬವಾಗುತ್ತಿದೆ. ನಿಗದಿಯಂತೆ ಅನಿಲ ಪೂರೈಕೆಯಾಗದ ಕಾರಣ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಗ್ರಾಹಕರು ಬೇರೆ ಏಜೆನ್ಸಿಗೆ ಹೋಗುತ್ತವೆ ಎಂದರೆ ನಿರ್ವಹಣೆ ಹೊತ್ತ ಏಜೆನ್ಸಿ ಮಾಲೀಕರು ಉಢಾಫೆ ಮಾತುಗಳನ್ನು ಆಡುತ್ತಾರೆ. ಗ್ಯಾಸ್ ಕಚೇರಿಗೆ ಕರೆ ಮಾಡಿದರು ಸರಿಯಾಗಿ ಉತ್ತರಿಸುವ ಸೌಜನ್ಯವೂ ಇಲ್ಲ. ಮುಂದಿನ ದಿನಗಳಲ್ಲಿ ವಿವಿಧ ಸಂಘ–ಸಂಸ್ಥೆಗಳೊಂದಿಗೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಸದಸ್ಯರಾದ ಅನಿಲ್‌ಪೀಟರ್, ಲಲಿತಾಕ್ಷ, ಜಾಯಿ, ಅನಿಲ್ ಉಪಸ್ಥಿತರಿದ್ದರು.

ಕಾಡುಪ್ರಾಣಿ ಬೇಟೆಗಾರನ ಬಂಧನ...



ಕಾಡುಪ್ರಾಣಿ ಬೇಟೆಯಾಡಿದ ಪೆರಾಜೆ ಗ್ರಾಮದ ಗಂಗಾಧರ ಪೆರಮುಂಡನನ್ನು ಸಂಪಾಜೆ ವಲಯ ಅರಣ್ಯಾಧಿಕಾರಿಗಳು ಬಂಧಿಸಿರುವುದು. ಡಿಎಫ್‌ಓ ಭಾಸ್ಕರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೋಹಿಸಿನ್ ಪಾಷಾ, ವಲಯ ಅರಣ್ಯಾಧಿಕಾರಿ ದಿನ್ನಿ ದೇಚಮ್ಮ ಮತ್ತು ಸಿಬ್ಬಂದಿ ಇದ್ದರು.

ಕಾವೇರಿ ನದಿ ನೀರು ವಿವಾದ ಸುಖಾಂತ್ಯವಾಗಲಿ

● ಶ್ರೀ ಸೋಮನಾಥ ಸ್ವಾಮೀಜಿ ಆಶಯ ● ತಲಕಾವೇರಿಯಲ್ಲಿ ವಿಶೇಷ ಪೂಜೆ

ಮಡಿಕೇರಿ, ಅ.25–ಕಾವೇರಿ ನದಿ ವಿವಾದ 100 ವರ್ಷ ಪೂರೈಸುತ್ತಿದ್ದು, ಇದರಿಂದಾಗಿ ಎರಡೂ ರಾಜ್ಯಗಳ ಜನರು ನೆಮ್ಮದಿ ಕಳೆದುಕೊಂಡಿದ್ದಾರೆ. ಈ ಸುದೀರ್ಘ ವಿವಾದಕ್ಕೆ ಸುಖಾಂತ್ಯ ಕಾಣಿಸಬೇಕಿದೆ ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ತಲಕಾವೇರಿಯಲ್ಲಿ ಮಾತೆ ಕಾವೇರಿಗೆ ಕಾವೇರಿ ನದಿ ರಕ್ಷಣಾ ಸಮಿತಿ ಹಮ್ಮಿಕೊಂಡಿದ್ದ ವಿಶೇಷ ಪೂಜಾ ಕಾರ್ಯದಲ್ಲಿ ನದಿ ವಿವಾದ ಪರಿಹಾರ ನೋಂದಣಿ ಸಮಿತಿಗೆ ಶುಭ ಹಾರೈಸಿ ಮಾತನಾಡಿದ ಅವರು, ಆದಿಚುಂಚನಗಿರಿ ಮಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ಸೇರಿದಂತೆ ರಾಜ್ಯದ ವಿವಿಧ ಮಠಾಧೀಶರು, ಸುಪ್ರಿಂಕೋರ್ಟ್ ಹಾಗೂ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ನೀರಾವರಿ, ಕಾನೂನು ತಜ್ಞರ ಸಹಿತ 100 ಜನರ ವಿಶೇಷ ಸಮಿತಿ ರಚಿಸಿ ಅದನ್ನು ನೋಂದಣಿ ಮಾಡಲಾಗಿದೆ. ಈ ಸಮಿತಿ ಮೂಲಕ ಕಾವೇರಿ ನದಿ ನೀರಿನ ಹಂಚಿಕೆ ವಿವಾದ ಪರಿಹಾರಕ್ಕೆ ಮುಂದಾಗಿದ್ದಾರೆ ಎಂದರು.

ಕಾವೇರಿ ನದಿ ಅವಲಂಬಿಸಿಕೊಂಡು ಎರಡೂ ರಾಜ್ಯಗಳ ಲಕ್ಷಾಂತರ ಜನರು ಬದುಕು ಕಟ್ಟಿಕೊಂಡಿದ್ದಾರೆ. ನದಿ ನೀರಿನ ಹಂಚಿಕೆ ವಿಚಾರ ಮುನ್ನೆಲೆಗೆ ಬಂದಾಗ ಕರ್ನಾಟಕ ಮತ್ತು ತಮಿಳುನಾಡಿನ ಜನರಲ್ಲಿ ಆತಂಕ ಕಾಡುತ್ತದೆ. ಉತ್ತಮ ಮಳೆಯಾದಾಗ ಈ ಸಮಸ್ಯೆ ಕಂಡು ಬರುವುದಿಲ್ಲ. ಆದರೆ, ಈ ವಿವಾದಕ್ಕೆ ಅಂತಿಮ ಪರಿಹಾರ ದೊರಕಲೇಬೇಕು. ಈ ಹಿನ್ನೆಲೆಯಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಕಾರ್ಯೋನ್ಮುಖವಾಗಬೇಕು ಎಂದು ಆಶೀರ್ವಚನ ನೀಡಿದರು.

ಕಾವೇರಿ ನದಿ ರಕ್ಷಣಾ ಸಮಿತಿ ಅಧ್ಯಕ್ಷ ಎಚ್.ಕೆ.ರಾಮು ಮಾತನಾಡಿ, ಕಾವೇರಿ ನದಿ ವಿವಾದ 100 ವರ್ಷ ಪೂರೈಸುತ್ತಿದೆ. ಬ್ರಿಟಿಷರ ಕಾಲದಿಂದಲೇ ವಿವಾದ ರೂಪ ಪಡೆದಿರುವ ನದಿ ನೀರಿನ ಹಂಚಿಕೆ ವಿಚಾರವನ್ನು ಶಾಂತ ರೀತಿ ಪರಿಹರಿಸಬೇಕು ಎಂಬುದು ಸಂತರ ಆಶಯವಾಗಿದೆ. ಎರಡೂ ರಾಜ್ಯಗಳು ಈ ವಿಚಾರವನ್ನು ಸಮಾನತೆಯಿಂದ ಪರಿಹರಿಸಿಕೊಳ್ಳಬೇಕಿದೆ. ಈ ದಿಸೆಯಲ್ಲಿ ಸಮಿತಿ ಪಕ್ಷ ಬೇಧ ಮರೆತು ಇಂದಿನಿಂದಲೇ ಕಾರ್ಯೋನ್ಮುಖವಾಗಲಿದೆ ಎಂದರು.

ಈ ಹಿನ್ನೆಲೆಯಲ್ಲಿ ಕಾವೇರಿ ನದಿ ಉಗಮ ಸ್ಥಳದಲ್ಲೇ ಪ್ರಥಮ ಪೂಜೆ ಸಲ್ಲಿಸಿ ಸಮಸ್ಯೆ ಪರಿಹಾರಕ್ಕೆ ಕಾವೇರಿ ಮಾತೆ ಆಶೀರ್ವಾದ ಕೋರಲಾಗಿದೆ. ಸಮಿತಿ ಮೂಲಕ ಕಾವೇರಿ ನದಿ ಹರಿಯುವ ಎಲ್ಲಾ ಜಿಲ್ಲೆಗಳಿಗೂ ತೆರಳಿ ಅಲ್ಲಿ ಸಭೆ ನಡೆಸಿ, ವ್ಯಾಜ್ಯ ಪರಿಹಾರಕ್ಕೆ ಸಲಹೆ ಸೂಚನೆ ಪಡೆಯಲಾಗುವುದು. ಈ ಅಭಿಪ್ರಾಯವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಕಾವೇರಿ ನದಿ ನೀರು ಹಂಚಿಕೆ ಪ್ರಾಧಿಕಾರಕ್ಕೂ ಸಲ್ಲಿಸಿ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು. ಈ ಕಾರ್ಯದಲ್ಲಿ ಯಶಸ್ವಿಯಾಗುವ ಆಶಾಭಾವನೆ ಇದೆ ಎಂದರು.

ಈ ಸಂದರ್ಭ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಕಾಗಿನೆಲೆ ಮಠದ ಶ್ರೀ ಶಿವಾನಂದ ಪುರಿಸ್ವಾಮೀಜಿ, ಶ್ರೀ ಚೆನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸದಾಶಿವ ಸ್ವಾಮೀಜಿ, ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಅಪ್ಪಯ್ಯಸ್ವಾಮೀಜಿ, ಕಾವೇರಿ ನದಿ ರಕ್ಷಣಾ ಸಮಿತಿ ಗೌರವಾಧ್ಯಕ್ಷರಾದ ಡಿ.ಎಸ್.ವೀರಯ್ಯ, ದೇವೇಗೌಡ, ಪ್ರಧಾನ ಕಾರ್ಯದರ್ಶಿ ರಾಜುಗೌಡ ಪ್ರಮುಖರಾದ ರಾಜಣ್ಣ ಜಗದೀಶ್, ಯಶೋಧಾ ರಾಜಣ್ಣ, ಮಂಜುಳಾ ಗೋಪಾಲ್, ಸಿ.ಆರ್.ಸುರೇಶ್, ರಾಮನಗರ, ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



ತಲಕಾವೇರಿಯಲ್ಲಿ ನಡೆದ ವಿಶೇಷ ಪೂಜಾ ಕಾರ್ಯದಲ್ಲಿ ನದಿ ವಿವಾದ ಪರಿಹಾರ ನೋಂದಣಿ ಪತ್ರವನ್ನು ಕಾವೇರಿ ನದಿ ರಕ್ಷಣಾ ಸಮಿತಿಗೆ ವಿವಿಧ ಮಠಾಧೀಶರು ಹಸ್ತಾಂತರಿಸಿ ಶುಭ ಹಾರೈಸಿದರು.

ನೋಂದಣಿ ಪತ್ರ ಹಸ್ತಾಂತರ

ಕಾವೇರಿ ನದಿ ವಿವಾದ ಪರಿಹಾರಕ್ಕೆ ರಚಿಸಲಾಗಿರುವ ಕಾವೇರಿ ನದಿ ರಕ್ಷಣಾ ಸಮಿತಿಯನ್ನು ಬೆಂಗಳೂರಿನಲ್ಲಿ ನೋಂದಣಿ ಮಾಡಲಾಗಿದ್ದು, ಅದರ ಮೂಲ ದಾಖಲಾತಿಯನ್ನು ಇದೇ ಸಂದರ್ಭ ಸಮಿತಿ ಅಧ್ಯಕ್ಷ ಎಚ್.ಕೆ.ರಾಮು ಅವರಿಗೆ ವಿವಿಧ ಮಠಾಧೀಶರ ಸಮ್ಮುಖದಲ್ಲಿ ಶ್ರೀ ಸೋಮನಾಥಸ್ವಾಮೀಜಿ ಹಸ್ತಾಂತರಿಸಿ ಶುಭ ಹಾರೈಸಿದರು.

ವಸತಿ ಯೋಜನೆ ಕಾಮಗಾರಿ ಪ್ರಗತಿ ಸಾಧಿಸಲು ಸೂಚನೆ

ಮಡಿಕೇರಿ, ಅ.25–ಕೊಡಗು ಜಿಲ್ಲೆಯಲ್ಲಿ ಮುಂಗಾರು ಮುಗಿದಿದ್ದು, ವಸತಿ ಯೋಜನೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ವಿವಿಧ ಇಲಾಖೆ ಪ್ರಗತಿ ಪರಿಶೀಲನೆ ಕುರಿತು ನಡೆದ ಸಭೆಯಲ್ಲಿ ಕಾಮಗಾರಿ ಮಾಹಿತಿ ಪಡೆದು ಮಾತನಾಡಿದ ಅವರು, ಜಿಲ್ಲೆಯಲ್ಲಿ ಬಸವ, ಅಂಬೇಡ್ಕರ್, ಪಿಎಂಜಿಎಸ್‌ವೈ, ಮತ್ತಿತರ ವಸತಿ ಯೋಜನೆಯಡಿ 2010–11 ರಿಂದ ಮನೆ ನಿರ್ಮಾಣ ಬಾಕಿ ಇದೆ. ಸಾಧ್ಯವಾದಷ್ಟು ಪ್ರಗತಿ ಸಾಧಿಸುವತ್ತ ಗಮನಹರಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಜಿಲ್ಲಾಧಿಕಾರಿ ವೆಂಕಟ ರಾಜಾ ಮಾತನಾಡಿ, ವಸತಿ ಯೋಜನೆ ಪ್ರಗತಿ ಸಾಧಿಸುವಲ್ಲಿ ತಾಪಂ ಇಓಗಳು ಮತ್ತು ಪಿಡಿಓಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು. ಆ ನಿಟ್ಟಿನಲ್ಲಿ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ನಂತರ ಮಾತನಾಡಿದ ತಾಪಂ ಇಓ ಶೇಖರ್, ಪರಿಶಿಷ್ಟ ಪಂಗಡ ಯೋಜನೆಯಡಿ ವಿಶೇಷವಾಗಿ 4.50 ಲಕ್ಷ ರೂ. ಘಟಕ ವೆಚ್ಚವಿದೆ. ಆದ್ದರಿಂದ ಕನಿಷ್ಠ 5 ಲಕ್ಷ ರೂ.ವರೆಗೆ ಹೆಚ್ಚಿಸಿದರೆ ಮನೆಗಳ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದರು.

ವಸತಿ ಯೋಜನೆ ಸಂಬಂಧ ಮಾಹಿತಿ ನೀಡಿದ ಜಿಪಂ ಸಹಾಯಕ ಕಾರ್ಯದರ್ಶಿ ಜೀವನ್ ಕುಮಾರ್, ಬಸವ ವಸತಿ ಯೋಜನೆಯಡಿ 22,522 ಮನೆ ನಿರ್ಮಿಸುವ ಗುರಿಯಲ್ಲಿ 18,751 ಮನೆಗಳಿಗೆ ಮಂಜೂರಾಗಿದೆ. ಇದರಲ್ಲಿ 12,633 ಮನೆಗಳ ಕಾರ್ಯ ಪೂರ್ಣಗೊಂಡಿದೆ. ಅಂಬೇಡ್ಕರ್ ವಸತಿ ಯೋಜನೆಯಡಿ 5960 ಗುರಿಯಲ್ಲಿ 2252 ಮನೆಗಳಿಗೆ ಮಂಜೂರಾಗಿದ್ದು, 1799 ಮನೆಗಳು ಪೂರ್ಣಗೊಂಡಿದೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 123 ಮನೆಗಳ ಗುರಿ ಇದ್ದು, 123 ಮನೆಗಳಲ್ಲಿ 116 ಮನೆ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದೆ. ಇದರಲ್ಲಿ 51 ಮನೆಗಳು ಪೂರ್ಣಗೊಂಡಿವೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್, ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸತೀಶ್ ಕುಮಾರ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ಪಂಚಾಯತ್ ರಾಜ್ ಇಂಜಿನಿಯರ್ ನಾಯಕ್, ಸುರೇಶ್ ಕುಮಾರ್, ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಬಿ.ಬಸಪ್ಪ, ಡಿಡಿಪಿಐ ಸಿ.ರಂಗಧಾಮಪ್ಪ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮುತ್ತಪ್ಪ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಐಟಿಡಿಪಿ ಇಲಾಖಾಧಿಕಾರಿ ಎಸ್.ಹೊನ್ನೇಗೌಡ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕವಿತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಟರಾಜ, ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಪ್ರಸನ್ನ ಹಾಜರಿದ್ದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಡಾ.ಎನ್.ವಿ.ಪ್ರಸಾದ್ ವಿವಿಧ ಇಲಾಖೆ ಪ್ರಗತಿ ಪರಿಶೀಲನೆ ಕುರಿತು ಮಾಹಿತಿ ಪಡೆದರು.

ಸಮಾನ ಅನುದಾನದೊಂದಿಗೆ ಅಭಿವೃದ್ಧಿಗೊಳಿಸಿ

ಪಪಂ ಸಭೆಯಲ್ಲಿ ಸದಸ್ಯರು, ಅಧಿಕಾರಿಗಳಿಗೆ ಶಾಸಕ ಮಂಜುನಾಥ್ ಸೂಚನೆ

ಹನೂರು, ಅ.25–ಪಟ್ಟಣದ 13 ವಾರ್ಡ್‌ಗಳಿಗೂ ಸಮಾನ ಅನುದಾನ ಹಂಚಿ ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾ ರಿಗಳು ಒಮ್ಮತದಿಂದ ಅಭಿವೃದ್ಧಿ ಕಾರ್ಯ ನಡೆಸಬೇಕು ಎಂದು ಶಾಸಕ ಎಂ.ಆರ್.ಮಂಜುನಾಥ್ ಸೂಚಿಸಿದರು.

ಪಟ್ಟಣ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪಪಂನಲ್ಲಿ ಅಧಿಕಾರಿಗಳು ಪದೇ ಪದೆ ಬದಲಾವಣೆಯಾಗುತ್ತಿರುವುದರಿಂದ ಅಭಿವೃದ್ಧಿಗೆ ಹಿನ್ನೆಡೆಯಾಗಿದೆ. ಆದ್ದರಿಂದ ಪಪಂ ಸದಸ್ಯರು ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಶೇಷ ಅನುದಾನ ಸದ್ಬಳಕೆ ಮಾಡಿಕೊಂಡು ಪಟ್ಟಣದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಸಾರ್ವಜನಿಕರಿಗೆ ಮೂಲ ಸೌಲಭ್ಯ ಒದಗಿಸಬೇಕು ಎಂದು ಸಲಹೆ ನೀಡಿದರು.

ನೀಲ ನಕಾಶೆ ತಯಾರಿಸಿ: ಪಟ್ಟಣ ಪಂಚಾಯಿತಿ ವ್ಯಾಪ್ತಿ ಯುಜಿಡಿ ಹಾಗೂ ರಸ್ತೆ ಅಭಿವೃದ್ಧಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ನೀಲ ನಕಾಶೆ ತಯಾರಿಸಬೇಕು. ಜೊತೆಗೆ ಮೂಲ ಸೌಲಭ್ಯಗಳಿಗೆ ಆದ್ಯತೆ ನೀಡುವ ಮೂಲಕ ಕ್ರಮ ವಹಿಸಬೇಕು ಎಂದರು.

ಇಂದಿರಾ ಕ್ಯಾಂಟೀನ್ ತೆರೆಯಿರಿ: ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆ ಬಳಿ ನಿವೇಶನ ನಿಗದಿ ಮಾಡಿದ್ದು, ಕೂಡಲೇ ಇಂದಿರಾ ಕ್ಯಾಂಟೀನ್ ತೆರೆಯಲು ಕ್ರಮ ಕೈಗೊಳ್ಳುವಂತೆ ಸದಸ್ಯ ಸುದೇಶ್ ಮನವಿ ಮಾಡಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಸಂಜೆ 5 ಗಂಟೆ ನಂತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಇರುವುದಿಲ್ಲ. ಇದರಿಂದ ರೋಗಿಗಳು ಖಾಸಗಿ ಆಸ್ಪತ್ರೆಗಳಿಗೆ ತೆರಳಬೇಕಾಗಿದೆ. ಆದ್ದರಿಂದ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸದಸ್ಯ ಹರೀಶ್ ಕುಮಾರ್ ಮಾತನಾಡಿ, ಪಟ್ಟಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಜನಪ್ರತಿನಿಧಿಗಳಿಗೆ ಸ್ಪಂದಿಸುತ್ತಿಲ್ಲ. ಹೀಗಾಗಿ ಅಭಿವೃದ್ಧಿಗೆ ಹಿನ್ನೆಡೆಯಾಗುತ್ತಿದೆ. ಸ್ವಚ್ಛತೆಗೂ ಆದ್ಯತೆ ನೀಡುತ್ತಿಲ್ಲ ಎಂದು ಆರೋಪಿಸಿದರು.

ಮತ್ತೊಬ್ಬ ಸದಸ್ಯ ಸೋಮಶೇಖರ್ ಮಾತನಾಡಿ, ಪಟ್ಟಣ ಪಂಚಾಯಿತಿ 10ನೇ ವಾರ್ಡ್‌ನಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಜನರ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಮಾಡಿದರು.

ಸಭೆಯಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಮಮ್ತಾಜ್ ಭಾನು, ಉಪಾಧ್ಯಕ್ಷ ಆನಂದ್ ಕುಮಾರ್, ಸದಸ್ಯರಾದ ಮಹೇಶ್, ಸುದೇಶ್, ಸೋಮಶೇಖರ್, ರೂಪಾ, ಮಮತಾ, ತಹಸೀಲ್ದಾರ್ ಗುರುಪ್ರಸಾದ್, ಯುಜಿಡಿ ಎಇಇ ಮಂಜುನಾಥ್, ಇಂಜಿನಿಯರ್ ನಾಗೇಂದ್ರ, ಸಿಬ್ಬಂದಿ ಹಾಜರಿದ್ದರು.



ಹನೂರು ಪಪಂ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿದರು.

ಮುಖ್ಯಾಧಿಕಾರಿಗೆ ಜಿಲ್ಲಾಧಿಕಾರಿ ತರಾಟೆ

ಎರಡೂವರೆ ಲಕ್ಷ ರೂ. ವೆಚ್ಚದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಎರಡೂವರೆ ವರ್ಷ ಬೇಕೆ? ಎಂದು ಮುಖ್ಯಾಧಿಕಾರಿ ಅಶೋಕ್ ಅವರನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ತರಾಟೆಗೆ ತೆಗೆದುಕೊಂಡರು. ಸರ್ಕಾರದಿಂದ ಬರುವಂತ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳದೆ, ಒಬ್ಬರ ಮೇಲೆ ಒಬ್ಬರು ದೂರು ಹೇಳುವುದು ಸರಿಯಲ್ಲ. ಸಾರ್ವಜನಿಕ ಕೆಲಸ ಕಾರ್ಯ ಹಾಗೂ ಪಪಂನ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಸೂಚಿಸಿದರು.

ವಿದ್ಯುತ್ ತಂತಿ ತಗುಲಿ ಮೃತಪಟ್ಟ ರೈತರ ಮನೆಗೆ ಶಾಸಕ ಭೇಟಿ
ಪುಟ್ಟರಂಗಶೆಟ್ಟಿ ಸಾಂತ್ವನ, ವೈಯಕ್ತಿಕ ಪರಿಹಾರ ವಿತರಣೆ

ಚಾಮರಾಜನಗರ, ಅ.25–ತಾಲೂಕಿನ ಅಯ್ಯನಪುರ–ಮಲ್ಲೇದೇವನಹಳ್ಳಿ ಗ್ರಾಮದ ನಡುವೆ ರಸ್ತೆಯಲ್ಲಿ ಬುಧವಾರ ರಾತ್ರಿ ಜಮೀನಿಂದ ಗ್ರಾಮಕ್ಕೆ ಬೈಕ್‌ನಲ್ಲಿ ಬರುತ್ತಿದ್ದಾಗ ವಿದ್ಯುತ್ ತಂತಿ ತಗುಲಿ ಮೃತಪಟ್ಟ ರೈತರಾದ ನಾಗೇಂದ್ರ ಹಾಗೂ ಮಲ್ಲೇಶ್ ಅವರ ಮನೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಶುಕ್ರವಾರ ಭೇಟಿ ನೀಡಿ ಕುಟುಂಬವರಿಗೆ ಸಾಂತ್ವನ ಹೇಳಿ ವೈಯಕ್ತಿಕ ಪರಿಹಾರ ನೀಡಿದರು.

ಇದೇ ವೇಳೆ ಮೃತರ ಕುಟುಂಬದವರು ಶಾಸಕರ ಬಳಿ ತಮ್ಮ ಅಳಲು ತೋಡಿಕೊಂಡರು. ಮೃತ ನಾಗೇಂದ್ರ ಅವರ ಪುತ್ರ ಡಿಪ್ಲೊಮಾ ಪದವೀಧರರಾಗಿದ್ದು, ಸೆಸ್ಕ್‌ನಲ್ಲಿ ಉದ್ಯೋಗ ಒದಗಿಸಬೇಕು ಎಂದು ಕುಟುಂಬದವರು ಮನವಿ ಮಾಡಿದರು. ನಂತರ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಸೆಸ್ಕ್ ಮೇಲಧಿಕಾರಿಗಳೊಂದಿಗೆ ಚರ್ಚಿಸಿ, ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿದರು.

ನಮಗೆ ಚಿಕ್ಕ ಮಕ್ಕಳಿದ್ದು, ಸೆಸ್ಕ್‌ನಿಂದ ಹೆಚ್ಚಿನ ನೆರವು ಕೊಡಿಸಬೇಕು ಎಂದು ಮೃತ ರೈತ ಮಲ್ಲೇಶ್ ಕುಟುಂಬದವರು ಶಾಸಕರಿಗೆ ಮನವಿ ಮಾಡಿದರು. ಯಾವುದೇ ಸಮಯದಲ್ಲೂ ಧೈರ್ಯ ಕಳೆದುಕೊಳ್ಳಬೇಡಿ, ನಿಮ್ಮ ಕುಟುಂಬಕ್ಕೆ ಸೆಸ್ಕ್‌ನಿಂದ ಹೆಚ್ಚಿನ ಅನುಕೂಲ ಮಾಡಿಕೊಡುವುದಾಗಿ ಶಾಸಕರು ತಿಳಿಸಿದರು.

ಇದೇ ವೇಳೆ ತಹಸೀಲ್ದಾರ್ ಗಿರಿಜಾ ಮೃತರ ಪತ್ನಿಯರಿಗೆ ವಿಧವಾ ವೇತನ ಮಂಜೂರಾತಿ ಪತ್ರ ವಿತರಿಸಿದರು. ಸೆಸ್ಕ್ ಇಇ ಪ್ರದೀಪ್, ಎಇಇ ಮುತ್ತುರಾಜ್, ಎಪಿಎಂಸಿ ಸದಸ್ಯ ಎ.ಎಸ್.ಪ್ರದೀಪ್, ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್, ತಾಪಂ ಮಾಜಿ ಅಧ್ಯಕ್ಷ ಚಿಕ್ಕಮಹದೇವು, ಕಾಗಲವಾಡಿ ಚಂದ್ರು, ಹೆಬ್ಬಸೂರು ಮರಿಸ್ವಾಮಿ, ಗ್ರಾಪಂ ಮಾಜಿ ಉಪಾಧ್ಯಕ್ಷ ಲಿಂಗಯ್ಯ, ವಿಜಯೇಂದ್ರ, ನಾಗವಳ್ಳಿ ನಾಗಯ್ಯ ಹಾಜರಿದ್ದರು.



ಅಯ್ಯನಪುರ ಗ್ರಾಮದ ಮೃತ ರೈತರ ಮನೆಗೆ ಭೇಟಿ ನೀಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕ ಪರಿಹಾರ ನೀಡಿದರು.

ಕೋಟೆಕೆರೆಯಲ್ಲಿ ವಾಲ್ಮೀಕಿ ಭಾವಚಿತ್ರ ಮೆರವಣಿಗೆ...



ಬೇಗೂರು ಸಮೀಪದ ಕೋಟೆಕೆರೆ ಗ್ರಾಮದಲ್ಲಿ ವಾಲ್ಮೀಕಿ ಭಾವಚಿತ್ರ ಮೆರವಣಿಗೆ ನಡೆಸುವ ಮೂಲಕ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಗ್ರಾಮದ ಮುಖಂಡ ರಂಗಸ್ವಾಮಿ ನಾಯಕ, ಯಜಮಾನ ಚಿಕ್ಕನಾಯಕ, ವಣಕಾರ ನಾಯಕ, ಚಂದ್ರು, ರೈತ ಮುಖಂಡ ಸಿದ್ದರಾಜು, ಶೇಖರ್ ನಾಯಕ, ದುಂಡು ನಾಯಕ, ಸಿದ್ದನಾಯಕ, ಮಹದೇವ ನಾಯಕ, ಚಿಕ್ಕರಂಗ ನಾಯಕ, ಮಂಜುನಾಥ್, ತಮ್ಮಯ್ಯ ನಾಯಕ, ಶಿವನಾಯಕ, ದೊಡ್ಡಸ್ವಾಮಿ ನಾಯಕ, ಸ್ವಾಮಿ ನಾಯಕ ಇದ್ದರು.

ಕಾರ್ಮಿಕರು ಸೌಲಭ್ಯಗಳ ಅರಿವು ಹೊಂದಬೇಕು

ಕೊಳ್ಳೇಗಾಲ, ಅ.25–ಕಾರ್ಮಿಕರ ರಕ್ಷಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳ ಬಗ್ಗೆ ಕಾರ್ಮಿಕರು ಹೆಚ್ಚಿನ ಅರಿವು ಪಡೆಯುವ ಮೂಲಕ ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಸಿ.ಶ್ರೀಕಾಂತ್ ಸಲಹೆ ನೀಡಿದರು.

ಪಟ್ಟಣದ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ತಾಲೂಕು ಆಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕು ವಕೀಲರ ಸಂಘ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಕಾರ್ಮಿಕರ ಮಂಡಳಿ ಸಹಯೋಗದಲ್ಲಿ ಆಯೋಜಿಸಿದ್ದ ಸಾರ್ವಜನಿಕರು, ಉದ್ಯೋಗದಾತರು, ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳಿಗೆ ಕಾರ್ಮಿಕ ಇಲಾಖೆ ಅನುಷ್ಠಾನ ಕುರಿತ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾರ್ಮಿಕರಿಗೆ ಹೆಚ್ಚಿನ ಕಾನೂನಿನ ಅರಿವು ಮೂಡಿದಲ್ಲಿ ಸೌಲಭ್ಯಗಳ ಬಗ್ಗೆ ತಿಳಿಯಲಿದೆ ಎಂದರು.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ಸುನೀತಾ ಮಾತನಾಡಿ, ಕಾಲ ಬದಲಾದಂತೆ ಎಲ್ಲರೂ ಬದಲಾಗಬೇಕು. ವಿವಿಧ ಸೌಲಭ್ಯಗಳು ಜಾರಿಗೊಳ್ಳುತ್ತಿವೆ. ಆದರೆ, ಅವುಗಳು ಸಮರ್ಪಕವಾಗಿ ತಲುಪಬೇಕಾದರೆ ಅರಿವು ಅಗತ್ಯ ಎಂದು ತಿಳಿಸಿದರು.

ಜಿಲ್ಲಾ ಕಾರ್ಮಿಕ ಇಲಾಖಾಧಿಕಾರಿ ಡಾ.ಎಂ.ಸವಿತಾ ಮಾತನಾಡಿ, ಇಲಾಖೆಯಿಂದ ಆಯೋಜಿಸಿರುವ ಕಾರ್ಯಾಗಾರದ ಸದ್ಬಳಕೆ ಮಾಡಿಕೊಳ್ಳಬೇಕು. ಕಾನೂನು ಎಲ್ಲರಿಗೂ ಒಂದೇ ಹಾಗಾಗಿ ಕಾನೂನಿನ ಅರಿವು ಅಲ್ಪ ಮಟ್ಟಿಗಾದರೂ ತಿಳಿಯಬೇಕು ಎಂದರು.

ಕಾರ್ಯಾಗಾರದಲ್ಲಿ ವಕೀಲರ ಸಂಘದ ಅಧ್ಯಕ್ಷ ಸಿ.ರವಿ, ಉಪಾಧ್ಯಕ್ಷೆ ಸಿ.ಆರ್.ನಿರ್ಮಲ, ಕಾರ್ಯದರ್ಶಿ ಸಿ.ಬಿ.ಮಹೇಶ್ ಕುಮಾರ್, ಕಾರ್ಮಿಕ ನಿರೀಕ್ಷಕ ವಿ.ಎಲ್.ಪ್ರಸಾದ್, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಮಹೇಶ್ ಇನ್ನಿತರರಿದ್ದರು.



ಕೊಳ್ಳೇಗಾಲದಲ್ಲಿ ನಡೆದ ಕಾರ್ಮಿಕ ಇಲಾಖೆ ಅನುಷ್ಠಾನ ಸೌಲಭ್ಯ ಕುರಿತ ಕಾರ್ಯಾಗಾರಕ್ಕೆ ನ್ಯಾಯಾಧೀಶ ಟಿ.ಸಿ.ಶ್ರೀಕಾಂತ್ ಚಾಲನೆ ನೀಡಿದರು.

ಖಾಸಗಿ ಬಸ್ ಡಿಕ್ಕಿ ಬೈಕ್ ಸವಾರ ಸಾವು

ಚಾಮರಾಜನಗರ: ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ವೀರನಪುರ ಕ್ರಾಸ್ ಸಮೀಪದ ಬಣ್ಣಾರಿ ದೇವಸ್ಥಾನದ ಬಳಿ ಶುಕ್ರವಾರ ನಡೆದಿದೆ. ನಗರದ ಗಾಳೀಪುರ ಬಡಾವಣೆಯ ಅಲೀಂ(25) ಮೃತ ಯುವಕ. ಈತ ತೆರಕಣಾಂಬಿ ಹೋಟೇಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದು, ಶುಕ್ರವಾರ ಬೆಳಗ್ಗೆ ನಗರದಿಂದ ತೆರಕಣಾಂಬಿಗೆ ಕೆಲಸಕ್ಕೆಂದು ಬೈಕ್‌ನಲ್ಲಿ ತೆರಳುತ್ತಿದ್ದಾಗ ಬಣ್ಣಾರಿ ದೇವಸ್ಥಾನ ಬಳಿ ಉಡಿಗಾಲ ಕಡೆಯಿಂದ ಬಂದ ಖಾಸಗಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಅಲೀಂ ಸ್ಥಳದಲ್ಲೇ ಮೃತಪಟ್ಟಿದ್ದಾನೆ.



ಉಡಿಗಾಲ ಉಪ ಪೊಲೀಸ್ ಠಾಣೆ ಹಾಗೂ ಸಂಚಾರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಬಸ್ ಅನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಿರಿಯ ಇಂಜಿನಿಯರ್, ಲೈನ್‌ಮ್ಯಾನ್ ಅಮಾನತು

ಚಾಮರಾಜನಗರ, ಅ.25–ತಾಲೂಕಿನ ಅಯ್ಯನಪುರ ಗ್ರಾಮದ ಬಳಿ ರಸ್ತೆಯಲ್ಲಿ ಜೋತು ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಇಬ್ಬರು ರೈತರು ಮೃತಪಟ್ಟ ಹಿನ್ನೆಲೆಯಲ್ಲಿ ಸೆಸ್ಕ್ ಕಿರಿಯ ಇಂಜಿನಿಯರ್ ಹಾಗೂ ಲೈನ್‌ಮ್ಯಾನ್‌ನನ್ನು ಅಮಾನತುಗೊಳಿಸಲಾಗಿದೆ.

ಅಯ್ಯನಪುರ ಗ್ರಾಮದ ವ್ಯಾಪ್ತಿಗೆ ಒಳಪಡುವ ಕಾಗಲವಾಡಿ ಸೆಸ್ಕ್‌ನ ಕಿರಿಯ ಇಂಜಿನಿಯರ್ ಮರಿಸ್ವಾಮಿ ಹಾಗೂ ಲೈನ್‌ಮ್ಯಾನ್ ಆನಂದ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರದೀಪ್ ಕುಮಾರ್ ತಿಳಿಸಿದ್ದಾರೆ.

ಈ ಇಬ್ಬರು ಗ್ರಾಹಕರ ದೂರುಗಳಿಗೆ ಸ್ಪಂದಿಸುತ್ತಿಲ್ಲ. ತಮಗೆ ವಹಿಸಿರುವ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಸಾರ್ವಜನಿಕರು ದೂರಿದರು. ಈ ಹಿನ್ನೆಲೆಯಲ್ಲಿ ಅಮಾನುತುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಬಸವರಾಜಪ್ಪ ನಿಧನ

ಗುಂಡ್ಲುಪೇಟೆ: ಪಟ್ಟಣದ ಬಸವರಾಜಪ್ಪ(64) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ, ಹೋಟೆಲ್ ಉದ್ಯಮಿ ಪ್ರದೀಪ್, ಮನು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ನೇನೆಕಟ್ಟೆಯ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸಂತಾಪ: ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA APPROVED SITES FOR SALE
30x40 sites available, Manasi Nagara Ring Road, Mysore. 200 mts. from Ring Road, near Hotel M Pro Palace, 2 km from Devegowda Circle & Sathagalli KSRTC Depot. Bank loan available. Ready for registration.
9066801322

FULLY FURNISHED FLAT FOR SALE
East facing ground floor at Vijayanagar 3rd Stage.
9353990365

MUDA SITE FOR SALE
ಜೆ.ಪಿ. ನಗರ ರಿಂಗ್ ರೋಡ್ ಪಕ್ಕದ "ನಂಜುಂಡೇಶ್ವರ ಲೇಔಟ್"ನಲ್ಲಿ 30'×40' East ಫೇಸಿಂಗ್ ಸೈಟ್.
Mob: 9886048471

HOUSE FOR SALE
NORTH EAST CONSTRUCTIONS "Turn your Dream into Address"
20x30 - 3 BHK, Brand New House
Pay Just 20 lakhs Down Payment & Remaining Easy EMI
Call: 98800 65122, 76193 99919

ಮೈಸೂರಿನ ಹೃದಯ ಭಾಗದಲ್ಲಿ ಅಧಿಕ ಜನಸಂಪರ್ಕವಿರುವ ಅಗ್ರಹಾರದ ಸಂತೋಷ್ ಹೋಟೆಲ್ ಎದುರು
ಹೊಸ ಮಳಿಗೆ ಬಾಡಿಗೆಗೆ ಇದೆ
ಆಸಕ್ತರು ಸಂಪರ್ಕಿಸಿ
77953 40636

ಮನೆ ಭೋಗ್ಯಕ್ಕೆ ಇದೆ
30x40 ಪೂರ್ವ ಬಾಗಿಲು, 2 ಬೆಡ್ ರೂಂ (Ground Floor) ರಿಂಗ್ ರೋಡ್ ಪಕ್ಕದಲ್ಲಿ ವಿಜಯನಗರ 4ನೇ ಹಂತ, 1ನೇ ಫೇಸ್, ಮೈಸೂರು
9480347407

ಸೈಟು ಮಾರಾಟಕ್ಕಿದೆ
30x40 E/F ಮುಡಾ ಖಾತೆ, ಮೈಸೂರು ವಿಮಾನ ನಿಲ್ದಾಣದ ಹತ್ತಿರ, ಎನ್.ಹೆಚ್.ರೋಡ್
ಬೆಲೆ : 25 ಲಕ್ಷ
9945562267

ವಾಣಿಜ್ಯ ನಿವೇಶನಗಳು ಮಾರಾಟಕ್ಕಿವೆ
1) 50x80 ಪಶ್ಚಿಮ ಮುಖ ಆದಿಚುಂಚನಗಿರಿ 80' ಅಡಿ ರಸ್ತೆ, ಅಪೋಲೋ ಆಸ್ಪತ್ರೆ ರಸ್ತೆ, KHB, 5ನೇ ಫೇಸ್, ಕುವೆಂಪುನಗರ, ಮೈಸೂರು.
2) 45x60 ಉತ್ತರ ಮುಖ 'N' ಬ್ಲಾಕ್ ಕುವೆಂಪುನಗರ, ಕೆಎಸ್ಆರ್‌ಟಿಸಿ ಡಿಪೋ ಹತ್ತಿರ, 80 ಅಡಿ ರಸ್ತೆ, ಮೈಸೂರು.
9448166798

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸೇಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ ಸುವರ್ಣನಗರ ಬಡಾವಣೆಯ ಪಕ್ಕದಲ್ಲಿರುವಂತಹ "ಸಾನ್ವಿ" ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟುಗಳು ಮಾರಾಟಕ್ಕಿವೆ. ಬೆಲೆ: 23 ಲಕ್ಷ, ನೆಗೋಷಿಯಬಲ್.
7892846068

ಬೇಕಾಗಿದ್ದಾರೆ
ಶಾಲಾ ಕಾಲೇಜುಗಳಲ್ಲಿ ಪ್ರಾಜೆಕ್ಟ್ ಕೆಲಸ ಮಾಡಲು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ ಉತ್ತಮವಾಗಿ ಮಾತನಾಡುವ ಕೌಶಲ್ಯ ಹೊಂದಿರಬೇಕು ಮೊದಲು ಬಂದವರಿಗೆ ಆದ್ಯತೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9901080314

20x30 Newly Construction
HOUSE FOR SALE
west facing north door G+2 3BHK Dattagalli, 30x40 new House for Sale west facing north door G+2 Somnathanagar Dattagalli
9900251194
9738884777

ಕಳೆದಿದೆ
ಆಶಾಮಂದಿರ ಮನೆ ನಂ.56, 5ನೇ ಕ್ರಾಸ್, ಅರವಿಂದನಗರ, ಮೈಸೂರು ಈ ಸ್ವತ್ತಿನ ಹಂಗಾಮಿ ಮಂಜೂರಾತಿ ಪತ್ರ ಮತ್ತು ರಹದಾರಿ ಪತ್ರ ಕಳೆದುಹೋಗಿದೆ ಸಿಕ್ಕಿದವರು ಸಂಪರ್ಕಿಸಿ ಕೆ.ಶ್ರೀನಿವಾಸ್
9448872434

WANTED
To work on service division (boys) Qualification: SSLC, PUC, ITI Pass or Fail Smart phone, driving licence, two wheeler required. Age: 18 to 24 Years (First prefrence to freshers) Working place: Mysore
7975368452

ಬೇಕಾಗಿದ್ದಾರೆ
ಸರ್ಕಾರದಿಂದ ಅನುಮತಿ ಪಡೆದ ಸಂಸ್ಥೆಯಿಂದ ಕಿರು ಚಿತ್ರವನ್ನು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲಾ ಕಾಲೇಜುಗಳಲ್ಲಿ ಪ್ರದರ್ಶಿಸಲು ಪ್ರದರ್ಶಕರು ಈ ಕೆಳಕಂಡ ತಾಲೂಕುಗಳಿಗೆ ಬೇಕಾಗಿದ್ದಾರೆ. (ಪಿರಿಯಾಪಟ್ಟಣ, ಎಚ್.ಡಿ.ಕೋಟೆ)
99010 80314

ಮೈಸೂರು ಲ್ಯಾಂಡ್ ಮಾರ್ಟ್
ಬನ್ನೂರು ರಸ್ತೆ, ಟಿ ನರಸೀಪುರ ರಸ್ತೆ, ಸಾತಗಳ್ಳಿ, ವಿದ್ಯಾಶಂಕರ ಬಡಾವಣೆಗಳು 30x40, 40x60, 30X50 ನಿವೇಶನಗಳು ಲಭ್ಯವಿದೆ
9448447035

ಮನೆ ಬಾಡಿಗೆಗಿದೆ
20x30, 30x40, 2 BHK ಸಿಂಗಲ್ ರೂಂ, ರಾಘವೇಂದ್ರ ನಗರ, ಕೇಂದ್ರಿಯ ವಿದ್ಯಾಲಯ ಹತ್ತಿರ, ಮೈಸೂರು.
9945636948

HOME NURSING AVAILABLE FOR
Old age & Bedridden patient, shift / 24 hours
Karunya Home Health Services # 15/1, N.H Palya, Manadavadi Road, Mysore-570008
Experienced Staffs required
8884318087
8951196169

SITE FOR SALE
20X30, 30X40
Bank Loan Available
Sri Rampura Ring Road Mysore
8050345574

ಶೇಖರ್ಸ್ ಗೋಲ್ಡ್ ಕಂಪನಿ (ರಿ) SHEKAR'S GOLD COMPANY (R)
ಪ್ರಿಯ ಗ್ರಾಹಕರೇ ಇಂದಿನ ಚಿನ್ನದ ONLINE ದರಕ್ಕಿಂತ ಹೆಚ್ಚಿನ ಹಣ ನೀಡುತ್ತೇವೆ ಎಂದು ಹೇಳಿ ಗ್ರಾಹಕರಿಗೆ ವಂಚಿಸುತ್ತಾ ಮೈಸೂರಿನ ಘನತೆಗೆ ಧಕ್ಕೆ ಉಂಟು ಮಾಡುತ್ತಿರುವ ಕಂಪನಿಗಳಿಗೆ ಹೋಗಿ ವ್ಯವಹರಿಸಿ ಮೋಸ ಹೋಗದಿರಿ ಗ್ರಾಹಕರೇ......!!!
ನಿಮ್ಮ ಚಿನ್ನದ ಗುಣಮಟ್ಟವನ್ನು ಕರಗಿಸದೆ ಪರೀಕ್ಷಿಸಿ ಪ್ರತಿ ಗ್ರಾಂ ಚಿನ್ನಕ್ಕೆ ಇಂದಿನ ಆನ್ಲೈನ್ ದರವನ್ನು ಕೊಟ್ಟು
+91 8296800249 / 0821-3145928
#1306/24, F01/2, 2ND MAIN, SJH ROAD VIDYARANYAPURAM MYSURU - 570008

7 BHK (G+2) HOUSE FOR RENT
Suitable for : PLAYHOME, DIAGNOSTICS, PG.
Bogadi 2nd Stage, opp. Nirmithi Kendra, MYSORE
Ph : 9845377292

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಮುಡಾ ಅನುಮೋದಿತ ಸೈಟು ಮಾರಾಟಕ್ಕಿದೆ
20x40 E/F ಮುಡಾ ಖಾತೆ ಪಂಚಾಚಾರ್ಯ ಬಡಾವಣೆ (ವಿಜಯನಗರ 4ನೇ ಹಂತ) 48 ಲಕ್ಷ
7338445401

ಸಿಪಾಯಿ ಪ್ರಾಪರ್ಟೀಸ್
1) ಕುಬೇರಾನಂದ ಸಾಗರ ಲೇಔಟ್‌ನಲ್ಲಿ 30x40 ಅಳತೆಯ ಈಸ್ಟ್ ಫೇಸ್ ಸೈಟ್ ಮಾರಾಟಕ್ಕಿದೆ. ಬೆಲೆ 25 ಲಕ್ಷ, ನೆಗೋಷಿಯಬಲ್.
2) ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಫೇಸ್ 2ನೇ ಹಂತದಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಬೆಲೆ 60 ಲಕ್ಷ, ನೆಗೋಷಿಯಬಲ್.
ನಂಜುಂಡಸ್ವಾಮಿ ಹೆಚ್.ಎಸ್., ಮಾಜಿ ಸೈನಿಕರು
Mob: 9483862050

SUMP & TANK CLEANING
Mob: 9606838940

HOUSE SALE Kuvempunagar
MUDA,GF 2 BHK,FF 2 Rooms,Residential Old House,35x55,N/F, Park Opposite,
Near Vijaya Bank Circle, Contact Owner,Brokers Excuse
9035412545

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 8.7 ಮೀಟರ್ x 12 ಮೀಟರ್, ಮುಡಾ ಖಾತಾ (ಇ–ಖಾತಾ) 36 ಲಕ್ಷ, ಡೈರೆಕ್ಟ್ ಓನರ್
9342123373

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR SALE
30x50 S/F Brahmananda Sagara Phase-1
8050821108

WANTED
1) Office Assistant (should know Tamil & Hindi) ; 2) IT Administrator ; 3) Car Driver 4) Truck Driver Heavy ; 5) Farm Supervisor. Contact:
6366042375
Send your resume on WhatsApp

ಮನೆ ಬಾಡಿಗೆಗೆ ಇದೆ
ಮನೆ ನಂ.292, 2ನೇ ಹಂತ, 7ನೇ ಕ್ರಾಸ್, 17ನೇ ಮೇನ್, ಸಾಯಿಬಾಬಾ ದೇವಸ್ಥಾನದ ಹತ್ತಿರ 'E' ಬ್ಲಾಕ್, ಜೆ.ಪಿ.ನಗರ ಸಸ್ಯಾಹಾರಿಗಳಿಗೆ ಮಾತ್ರ
9844107130

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ ಆಲನಹಳ್ಳಿ ಚಿಕ್ಕಳ್ಳಿ, ಮೇಟಗಳ್ಳಿ ಕೆ.ಆರ್.ಆಸ್ಪತ್ರೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್ ವೈಸರ್, ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ.
8971367078
8660309477

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

neem BOND PLATINUM® PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಶೋರೂಮ್‌ಗಳಿಗೆ ಮತ್ತು ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ,ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಎಜುಕೇಶನ್ ಇರಬಹುದು, AGE ಲಿಮಿಟ್ 18 TO 55, SALARY 18000 TO 38000 ಇರುತ್ತದೆ , ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ, HR MADAM,
9632831680
7411273440

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಅಡುಗೆ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಊಟ ವಸತಿ ಉಚಿತ ಸ್ಥಳ....ಸುಳ್ಯ
9902176566

WANTED TEACHER
JNANAJYOTHI VIDYALAYA (High school), BEERIHUNDI, Wanted Mathematics and Science teacher, Spoken English teacher for high school immediately.
9845390377
8197057626

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ, ಫ್ರಂಟ್ ಆಫೀಸ್ ಮತ್ತು ಅಕೌಂಟ್ ನಿರ್ವಹಣೆಗಾಗಿ, *ಬಿ.ಕಾಮ್/ಡಿಪ್ಲೊಮಾ (ಸಿ.ಪಿ)* ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ...
8073393505

ಬೇಕಾಗಿದ್ದಾರೆ
ಕಾವೇರಿ ಎಜುಕೇಶನ್ ಟ್ರಸ್ಟ್ (ರಿ) ನಗುವಿನಹಳ್ಳಿ, ಶ್ರೀರಂಗಪಟ್ಟಣ ತಾ|| ನಮ್ಮ ವಿದ್ಯಾಸಂಸ್ಥೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತರು ದಿನಾಂಕ: 28–10–2024 ರಂದು ತಮ್ಮ ಮೂಲದಾಖಲಾತಿಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳುವುದು (ಸಮಯ: ಬೆಳಿಗ್ಗೆ 11 ಗಂಟೆ) ಮೈಸೂರು ಸಿಟಿ ಬಸ್ ನಿಲ್ದಾಣದಿಂದ ಬಸ್ ಮಾರ್ಗ ಸಂಖ್ಯೆ 315B,178A
8105505269
ಸಹಿ/–ಕಾರ್ಯದರ್ಶಿಗಳು


V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ ಕಂಪನಿ ಮತ್ತು ಆಫೀಸ್‌ಗಳಿಗೆ ಆಫೀಸ್ ಕೆಲಸಗಳಿಗೆ 7ನೇ, 10ನೇ, ಪಿಯುಸಿ, ಐಟಿಐ ಡಿಗ್ರಿ ಪಾಸ್/ ಫೇಲ್ ಆದಂತಹ ನಗರ ಗ್ರಾಮೀಣ ಹಳ್ಳಿಯ ಯುವಕ ಯುವತಿಯರಿಗೆ ಊಟ ವಸತಿ ಯೊಂದಿಗೆ ಸಂಬಳ 18,000/- 35000/-. ಸಂಪರ್ಕಿಸಿ:
8884075899
8884076664

ಬೇಕಾಗಿದ್ದಾರೆ
1. ವಾಹನ ಚಾಲಕರು
2. ಕ್ಯಾಂಟೀನ್ ಕೆಲಸಕ್ಕೆ ಹುಡುಗರು ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.
9964586817
9343299998

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸದ್ಗುರು ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
9448229184
7899625268

ಟೈಲರ್‌ಗಳು ಬೇಕಾಗಿದ್ದಾರೆ
ಪಾರ್ಟ್‌ಟೈಮ್
ವಿಜಯನಗರ 4ನೇ ಹಂತ
8217884837
9845819941

ಸೈಟ್ ಮಾರಾಟಕ್ಕಿದೆ
ಮೈಸೂರು ಸಿಟಿ ಜೆಎಸ್‌ಎಸ್ ನೌಕರರ ಬಡಾವಣೆ 1ನೇ ಹಂತ ರಾಜ್‌ಕುಮಾರ್ ರಸ್ತೆ ಮೂಡಾ ಕಾರ್ಪೋರೇಷನ್ ಖಾತೆ ಹೊಂದಿರುವ 35x50 ಅಳತೆಯ ನಿವೇಶನ ಕೂಡಲೇ ಮಾರಾಟಕ್ಕಿದೆ. ಆಸಕ್ತರು ದಯವಿಟ್ಟು ಸಂಪರ್ಕಿಸಿ:
8197708175
9448212742

28x40, ಕಾರ್ನರ್ ಸೈಟು ಮಾರಾಟಕ್ಕಿದೆ
16 ಲಕ್ಷದ 50 ಸಾವಿರಗಳು DTCP 'A' ಖಾತೆ GSS ಲೇಔಟ್ TVS ಫ್ಯಾಕ್ಟರಿ ತಳೂರು ಹತ್ತಿರ ಮೈಸೂರು
9972557534

ಸಮಾಜ ಸೇವೆ
ಎಲ್ಲಾ ರೀತಿಯ ಆರೋಗ್ಯಕ್ಕೆ "ಔಷಧವಿಲ್ಲದ ಚಿಕಿತ್ಸೆ" ಮತ್ತು ಇತರ ಸಮಸ್ಯೆಗಳಿಗೆ ಪ್ರಾಣಶಕ್ತಿಯಿಂದ ಪರಿಹಾರವನ್ನು ಉಚಿತವಾಗಿ 27–10–2024ರ ಭಾನುವಾರ 9:00 ರಿಂದ 5:00 ಕಲಿಸಿಕೊಡುತ್ತೇವೆ. ಸ್ಥಳ: ಇಂಟರ್ ನ್ಯಾಷನಲ್ ಯೂಥ್ ಹಾಸ್ಟೇಲ್, ಗೋಕುಲಂ, ಮೈಸೂರು
9916935669

ಬೇಕಾಗಿದ್ದಾರೆ
ಸೆಕ್ಯೂರಿಟಿ ಸುಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ+ಪಿಎಫ್+ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು ಸಿಟಿ, ಬನ್ನೂರು ರಸ್ತೆ, ಹೆಬ್ಬಾಳು ಕೈಗಾರಿಕ ನಗರ ಮತ್ತು ಹಿನಕಲ್
7829393555
9739376832,9886200104

WANTED
Tele Callers (Female) 10th and Above - Age 20Y to 30Years Earn 8K up to 10K Fixed Salary + Incentive Birla Sun Life (Agency Partner Office) Saraswathipuram, Mysore
9900844455

P.G.ಯಲ್ಲಿ
ಉಳಿದುಕೊಂಡು ಅಡುಗೆ ಮಾಡಲು ಮತ್ತು ಸಹಾಯಕ ಮಹಿಳೆಯರು ಬೇಕಾಗಿದ್ದಾರೆ.
9845367333

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

Life Partner ಆಗಲು ಶ್ರೀಮಂತ ವರನಿಗೆ ವಧು ಬೇಕಾಗಿದ್ದಾರೆ
ಲಿಂಗಾಯತ 49/5.6/ ಡಾಕ್ಟರೇಟ್ ಪದವೀಧರ Indendent & Well Settlled 5 ಲಕ್ಷಕ್ಕಿಂತ ಅಧಿಕ ಆದಾಯ ಮತ್ತು ತೋಟ/ ಮನೆ ಇರುವಂತಹ ವಿಚ್ಛೇದಿತ ವರನಿಗೆ ವಿದ್ಯಾವಂತೆ/ವಿಧವೆ/ವಿಚ್ಛೇದಿತೆ/ ನೌಕರಸ್ಥೆ/ಒಡವೆ/ ವಧುಬೇಕು ಯಾವುದೇ ಜಾತಿಯ ಅಭ್ಯಂತರವಿಲ್ಲ ಮಕ್ಕಳಿದ್ದರು ಪರವಾಗಿಲ್ಲ. (ಸರಳ ವಿವಾಹಕ್ಕೆ ಮೊದಲ ಆದ್ಯತೆ)
9742458242

ತೋಟ ಮಾರಾಟಕ್ಕಿದೆ
3 ಎಕರೆ 25 ಗುಂಟೆ ರಾಷ್ಟ್ರೀಯ ಹೆದ್ದಾರಿಯಿಂದ 1.5 ಕಿ.ಮೀ, ನಿಮಿಷಾಂಭ ದೇವಸ್ಥಾನದ ಹತ್ತಿರ ಗಂಜಾಂ, ಶ್ರೀರಂಗಪಟ್ಟಣ ತಾ||
9945898244
9945658828

ಹೊಸ ಮನೆ ಮಾರಾಟಕ್ಕಿದೆ
30x40 North Face G & First Floor ಬೆಲೆ 1.40 ಲಕ್ಷ Near MSRTC Layout J P Nagar Mysore
9448271349
(ಮಧ್ಯವರ್ತಿಗಳು ಕ್ಷಮಿಸಿರಿ)

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, SSLC, PUC, ITI, Diploma, Any Degree Pass or Fail ಸ್ಥಳ: ಕುಶಾಲನಗರ, ಮಡಿಕೇರಿ, ಪಿರಿಯಾಪಟ್ಟಣ, ಸೋಮವಾರ ಪೇಟೆ, ಅವರಿಗೆ ಮೊದಲ ಆದ್ಯತೆ ವೇತನ: 15000 ರಿಂದ 32000 ವಿಶೇಷ ಸೂಚನೆ: ಪುರುಷ ಅಭ್ಯರ್ಥಿಗಳಿಗೆ ಮಾತ್ರ ವಯಸು: 18–35 ವರ್ಷ
8904129168
9880747643

ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಮಹಿಳೆಯರು ಪುರುಷರು ಕೇರ್ ಟೇಕರ್ ಹೋಮ್ ನರ್ಸ್ ANM/ GNM SSLC ಪಾಸ್ /ಫೇಲಾದ ಯುವಕ ಯುವತಿಯರು ಹಾಗೂ ಅಡುಗೆ ಮನೆ ಕೆಲಸದವರು ಸಂಪರ್ಕಿಸಿ ಕೆಲಸದ ವೇಳೆ ಬೆಳಿಗ್ಗೆ 8.30 ರಿಂದ ಸಂಜೆ 5.30 ರಾತ್ರಿ 12 ಗಂಟೆ / 24 ಗಂಟೆ ಬರುವಾಗ ಯಾವುದೇ ಫೀಜ್ ಇರುವುದಿಲ್ಲ ಆಧಾರ್ ಮತ್ತು ಭಾವಚಿತ್ರದೊಂದಿಗೆ ಖುದ್ದಾಗಿ ಸಂಪರ್ಕಿಸಿ:
8123252840

ತಕ್ಷಣ ಬೇಕಾಗಿದ್ದಾರೆ
Sri Sapthagiri Builders & Developers Hebbal 1st Stage, 7th Main Road, Mysuru
MARKETING HEAD - 3 Nos.
Basic salary 15 to 20 + incentives
TELECALLERS: 2 Nos.
Basic salary 10 to 12 + incentive.
Mob: 9606977963, 9591828444, 9731667555

WANTED
Electrical Engineer
Qualification: Diploma / BE in Electrical Engineering (Female only).
(2 years+ experience in handling ESCOM GK,WS and Linkline works)
Contact: 6366366388
Call between: 10 AM to 5 PM
Mail your C.V to: acpltd123@gmail.com

S.K. Construction
ಹೊಸ ಮನೆ ಕಟ್ಟಬೇಕೆ, ಚಿಂತೆ ಬೇಡ. ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ.
Mob: 9620528490

Electric Scooter
ನಮ್ಮಲ್ಲಿ ಎಲ್ಲಾ ಕಂಪನಿಯ ಎಲೆಕ್ಟ್ರಿಕ್ ಸ್ಕೂಟರ್ SALES ಮತ್ತು SERVICE ಮಾಡಲಾಗುತ್ತದೆ.
9844915155
9844915554

ಇಂದೇ ಸಂಪರ್ಕಿಸಿ
ಮೈಸೂರು ಪ್ರಸಿದ್ಧ Office Showroom & Company ಗಳಿಗೆ 7th, 10th, PUC, Degree, ITI, Diploma, Pass/Fail ಆದ ಯುವಕ/ಯುವತಿಯರು Packing, Helper, Telecalling, Data Entry, Receptionist, Line Incharge, Billing ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ 14500–39000 (ESI+PF+OT) ಸೇರಿ
9164052361,9740468212

ಜೀವನ ಸಂಗಾತಿ ಬೇಕಾಗಿದ್ದಾರೆ
ವಿಚ್ಛೇದಿತ ಒಕ್ಕಲಿಗ, 41 ವರ್ಷ, ಮೈಸೂರಿನಲ್ಲಿ ನೆಲೆಸಿರುವ ವ್ಯಕ್ತಿಗೆ ಉತ್ತಮ ಜೀವನ ಸಂಗಾತಿ ಬೇಕಾಗಿದ್ದಾರೆ.
Mob: 9448476516

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವರುಣ / ವಾಜಮಂಗಲ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ, ನಂಜನಗೂಡು ರಸ್ತೆ.
Mob: 9686071750

ಮನೆ ಬಾಡಿಗೆಗೆ ದೊರೆಯುತ್ತದೆ
ಮಂಡ್ಯ ನಗರದ ಬಂದೀಗೌಡ ಬಡಾವಣೆಯ ಎಲ್‌ಐಸಿ ಹಿಂಭಾಗದ 2 ಬಿಎಚ್‌ಕೆ ಮನೆ (ಪೂರ್ವದ ಬಾಗಿಲು) ಬಾಡಿಗೆಗೆ ದೊರೆಯುತ್ತದೆ.
9448679792

ಸುಲಭ ಕಂತುಗಳಲ್ಲಿ ನಿವೇಶನ
ನಿಮ್ಮ ಕನಸಿನ ನಿವೇಶನವನ್ನು ಕಡಿಮೆ ದರದಲ್ಲಿ ಹಾಗೂ ಸುಲಭ ಕಂತುಗಳಲ್ಲಿ ಪಡೆಯಬೇಕೇ ಹಾಗಾದರೆ ಇಂದೇ ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಾಗಿ
9980959598, 9632653710

ಬೇಕಾಗಿದ್ದಾರೆ
3rd Standard ವಿದ್ಯಾರ್ಥಿಗೆ ಮನೆಗೆ ಬಂದು ಟ್ಯೂಷನ್ ಹೇಳಿಕೊಡುವ ಟೀಚರ್ ಬೇಕಾಗಿದ್ದಾರೆ. ಸ್ಥಳ: ಮೈಸೂರು
Mob: 9945779995

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಸರಸ್ವತಿಪುರಂ ಎನ್.ಆರ್.ಮೊಹಲ್ಲಾ ಹಾಗೂ ಕೆ.ಆರ್.ಮೊಹಲ್ಲಾ ಶಾಖೆಗೆ ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಹಾಗೂ ಪಾರ್ಸಲ್ ಡಿವಿಜನ್‌ಗೆ Full Time ಅಥವಾ Part Time ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನಹೊಂದಿರತಕ್ಕದ್ದು.)
9449871790

ಅರ್ಚಕರು ಬೇಕಾಗಿದ್ದಾರೆ
ಮೈಸೂರಿನ ಗೋಕುಲಂ 1ನೇ ಹಂತದಲ್ಲಿರುವ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜಾ ವಿಧಿಗಳನ್ನು ಸಲ್ಲಿಸಲು 5 ರಿಂದ 6 ವರ್ಷಗಳ ಅನುಭವವಿರುವ ಅಯ್ಯಂಗಾರ್ ಅಥವಾ ಬ್ರಾಹ್ಮಣರು 50 ವರ್ಷಗಳ ಮೇಲ್ಪಟ್ಟಿರುವವರು ಸಂಬಳ 7,500. ಉಚಿತ ವಸತಿ ಸೌಲಭ್ಯ. ಭೇಟಿಯ ಸಮಯ: ಬೆಳಿಗ್ಗೆ 8 ರಿಂದ 10 ಗಂಟೆ, ಸಂಜೆ 6 ರಿಂದ 8 ಗಂಟೆ.
9916312261, 9900470003

HOUSE FOR LEASE
2 BHK 3 BATHROOM, SEMI-FURNISHED, OPEN KITCHEN, INDEPENDENT HOUSE FOR LEASE (Rs.15,00,000) @ HPO & RMS LAYOUT, SHAKTHINAGAR, MYSORE, VEGETARIAN ONLY (BROKER EXCUSE)
Mob: 9448536782

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಸಸ್ಯಾಹಾರಿ ಹೋಟೆಲ್‌ಗೆ ಕಿಚನ್ ಸುಪರ್ ವೈಸರ್– 2 ; ದೋಸೆ ಭಟ್ಟರು – 2 ; ಕಾಫಿ ಟೀ ಜ್ಯೂಸ್‌ಮೇಕರ್ – 3 ; ಟೇಬಲ್ ಕ್ಲೀನರ್ – 3 ; ಸಪ್ಲೇಯರ್ – 2. ಕೂಡಲೇ ಸಂಪರ್ಕಿಸಿ:
7899929233

SITES FOR SALE
Approved by DTCP 20x30, 20x40, 30x40 Bogadi Main Road, Near Navodaya Schools, G.B. Saraguru Gate.
Mob: 9632454592

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಬೇಲದಕುಪ್ಪೆ ಮಹದೇಶ್ವರಸ್ವಾಮಿ ಜಾತ್ರೆಯ ಸಿದ್ಧತೆ ಬಗ್ಗೆ ಎಸಿ ಚರ್ಚೆ

ಜಾತ್ರೆಯನ್ನು ಭಕ್ತರಿಗೆ ತೊಂದರೆಯಾಗದಂತೆ ಆಚರಿಸಲು ಸೂಚನೆ



ಜಾತ್ರೆಯ ಸಿದ್ದತೆ ಬಗ್ಗೆ ಅಧಿಕಾರಿಗಳ ಸಮ್ಮುಖದಲ್ಲಿ ದೇವಸ್ಥಾನದ ಸ್ಥಳ ಪರಿಶೀಲನೆ ನಡೆಸಿದ ಹುಣಸೂರು ಉಪ ವಿಭಾಗಾಧಿಕಾರಿ ಎಚ್.ಬಿ.ವಿಜಯ್‌ಕುಮಾರ್, ತಹಸೀಲ್ದಾರ್ ರುಕಿಂಯಾ ಬೇಗಂ, ತಾಪಂ ಇಒ ಧರಣೇಶ್, ಇಲಾಖಾಧಿಕಾರಿಗಳು.

ಸರಗೂರು, ಅ.25– ಬೇಲದಕುಪ್ಪೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವವನ್ನು ಭಕ್ತಾದಿಗಳಿಗೆ ಯಾವುದೇ ತೊಂದರೆಯಾಗದಂತೆ ಅದ್ಧೂರಿಯಾಗಿ ಆಚರಿಸುವಂತೆ ತಾಲೂಕು ಮಟ್ಟದ ಅಧಿಕಾರಿಗಳಿಗೆ ಹುಣಸೂರು ಉಪ ವಿಭಾಗಾಧಿಕಾರಿ ಎಚ್.ಬಿ.ವಿಜಯ್ ಕುಮಾರ್ ಸೂಚನೆ ನೀಡಿದ್ದಾರೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಶ್ರೀಕ್ಷೇತ್ರ ಬೇಲದಕುಪ್ಪೆ ಮಹದೇಶ್ವರ ಜಾತ್ರೆ ಸಿದ್ಧತೆ ಬಗ್ಗೆ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಾಲೂಕು ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ಗುರುವಾರ ದೇವಸ್ಥಾನದ ಸ್ಥಳ ಪರಿಶೀಲನೆ ನಡೆಸಿ ನಂತರ ಹೆಡಿಯಾಲ ಉಪವಲಯ ಕಚೇರಿಯ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಬೇಲದಕುಪ್ಪೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಸಂದರ್ಭದಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತದೆ. ದೇವಸ್ಥಾನಕ್ಕೆ ಬರಲು ವಿವಿಧೆಡೆಯಿಂದ ಬಸ್ ವ್ಯವಸ್ಥೆ, ಅಂಗಡಿ ಮುಂಗಟ್ಟು ಹಾಗೂ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು ಸರಬರಾಜು ಇನ್ನಿತರ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಇಲಾಖಾಧಿಕಾರಿಗಳ ಸಮ್ಮುಖದಲ್ಲಿ ಮುಂದಿನ ವಾರದಲ್ಲಿ ಸಭೆ ನಡೆಸುವಂತೆ ಅವರು ತಿಳಿಸಿದರು.

ಸಭೆಯಲ್ಲಿ ತಹಸೀಲ್ದಾರ್ ರುಕಿಯಾ ಬೇಗಂ, ತಾಪಂ ಇಓ ಧರಣೀಶ್, ತಾಲೂಕು ಆರೋಗ್ಯಾಧಿಕಾರಿ ಡಾ. ಎಚ್.ಟಿ. ರವಿಕುಮಾರ್, ಎಸಿಎಫ್ ಸತೀಶ್, ಧಾರ್ಮಿಕ ದತ್ತಿ ಇಲಾಖೆ ಇಓಗಳಾದ ರಘು, ರಾಕೇಶ್, ಆರ್ ಎಫ್‌ಓ ವಿವೇಕ್, ಅಮೃತಾ, ಎಇಇ ಗೋವಿಂದನಾಯಕ, ಕೆಇಬಿ ಎಇಇ ದೀಪಿಕಾ, ಪಿಡಿಓಗಳಾದ ಚಿನ್ನಸ್ವಾಮಿ, ಪರಮೇಶ್, ಕಂದಾಯ ಇಲಾಖೆ ಸಿಬ್ಬಂದಿ ರವೀಂದ್ರ, ಮುಜೀಬ್, ಶ್ರೀನಿವಾಸ್, ಗ್ರಾಪಂ ಸದಸ್ಯರು, ಸಾರ್ವಜನಿಕರು, ಗ್ರಾಮಸ್ಥರು ಇದ್ದರು.

ತಾಯಿ, ಮಗು ಮರಣ ಪ್ರಮಾಣ ಕಡಿಮೆಗೊಳಿಸಿದ

ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆಗೆ ರಾಷ್ಟ್ರಮಟ್ಟದ ಲಕ್ಷ್ಯ ಪ್ರಶಸ್ತಿ



ತಿ.ನರಸೀಪುರ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ನ್ಯಾಷನಲ್ ಹೆಲ್ತ್ ಮಿಷನ್ ಕೊಡಮಾಡುವ ರಾಷ್ಟ್ರಮಟ್ಟದ ಲಕ್ಷ್ಯ ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಆಸ್ಪತ್ರೆಯ ಸಿಬ್ಬಂದಿ ಪ್ರಶಸ್ತಿ ಪತ್ರದೊಂದಿಗೆ ಸಂಭ್ರಮಿಸಿದರು.

ತಿ.ನರಸೀಪುರ, ಅ.25– ಹೆರಿಗೆ ಹಾಗೂ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ತಾಯಿ ಹಾಗೂ ಶಿಶು ಮರಣ ಪ್ರಮಾಣ ಕಡಿಮೆಗೊಳಿಸುವಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ತಾಲೂಕು ಸರಕಾರಿ ಸಾರ್ವಜನಿಕ ಆಸ್ಪತ್ರೆಯು ರಾಷ್ಟ್ರ ಮಟ್ಟದ ಲಕ್ಷ್ಯ ಪ್ರಶಸ್ತಿಗೆ ಭಾಜನವಾಗಿದೆ ಎಂದು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್ ಹೇಳಿದರು.

ನ್ಯಾಷನಲ್ ಹೆಲ್ತ್ ಮಿಷನ್ ವತಿಯಿಂದ ಕೊಡಮಾಡುವ ಲಕ್ಷ್ಯ ಪ್ರಶಸ್ತಿ ದೊರಕಿದ ಹಿನ್ನೆಲೆಯಲ್ಲಿ ಮಾಹಿತಿ ಹಂಚಿಕೊಳ್ಳಲು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಕೇಂದ್ರ ಸರಕಾರದ ಉತ್ತಮ ಯೋಜನೆಯಾದ 'ಲಕ್ಷ್ಯ' ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ತಾಲೂಕು ಆಸ್ಪತ್ರೆ ಶ್ರಮಿಸಿದ್ದು, ಸ್ವಚ್ಛತೆ, ಹೆರಿಗೆ ಪ್ರಮಾಣ, ಶಸ್ತ್ರಚಿಕಿತ್ಸೆ ಪ್ರಮಾಣ, ಹೊರರೋಗಿಗಳ ಸಂಖ್ಯೆ, ಲೇಬರ್ ರೂಂ, ಮೆಟರ್ನಿಟಿ ಓಟಿಗಳ ಗುಣಮಟ್ಟ, ಸ್ವಚ್ಛತೆಯ ಪ್ರತಿ ತಿಂಗಳ ವರದಿ ಆಧರಿಸಿ ಜಿಲ್ಲಾ ಸಮೀಕ್ಷಾ, ರಾಜ್ಯ ಮತ್ತು ರಾಷ್ಟ್ರಮಟ್ಟದ ಲಕ್ಷ್ಯ ಮೌಲ್ಯಮಾಪನ ತಂಡ ಆಗಮಿಸಿ ಪರಿಶೀಲಿಸಿದ ನಂತರ ತಂಡ ನೀಡಿದ ವರದಿಯನ್ವಯ ರಾಷ್ಟ್ರೀಯ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯು ಅಧಿಕೃತವಾಗಿ ಪ್ರಶಸ್ತಿ ಘೋಷಣೆ ಮಾಡಿದೆ ಎಂದರು.

ಇಲ್ಲಿನ ಆಸ್ಪತ್ರೆಯ ಎಲ್ಲಾ ವೈದ್ಯರು, ಸಿಬ್ಬಂದಿಗಳು ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಿದ್ದು ಅದಕ್ಕಾಗಿ ಅವರು ಅಭಿನಂದನೆಗೆ ಅರ್ಹರಾಗಿದ್ದಾರೆ. ಪ್ರಮಾಣ ಪತ್ರದೊಂದಿಗೆ 3 ವರ್ಷದವರೆಗೂ ವಿಶೇಷ ಅನುದಾನ ದೊರಕಲಿದ್ದು, ಇದನ್ನು ಮಾರ್ಗಸೂಚಿ ಅನ್ವಯ ಬಳಸಿಕೊಳ್ಳಲಾಗುವುದು ಎಂದು ತಿಳಿಸಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ರಾಷ್ಟ್ರ ಮಟ್ಟದ ಲಕ್ಷ್ಯ ಪ್ರಶಸ್ತಿ ದೊರಕಿರುವುದು ತಾಲೂಕಿನ ಹೆಗ್ಗಳಿಕೆಯಾಗಿದ್ದು, ವೈದ್ಯರ ತಂಡ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಆಸ್ಪತ್ರೆಯಲ್ಲಿ ನವಜಾತ ಶಿಶುಗಳ ಆರೈಕೆಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗುವುದು. ಇದೇ ಗುಣಮಟ್ಟ ಮುಂದುವರೆದರೆ ಗುಣ ಮಟ್ಟದ ಚಿಕಿತ್ಸೆ, ಜನಸ್ನೇಹಿ ವಾತಾವರಣ, ಸ್ವಚ್ಛತೆ ಮಾನದಂಡಗಳಿಗೆ ಕಾಯಕಲ್ಪ ಪ್ರಶಸ್ತಿಗೂ ಅರ್ಹತೆ ದೊರಕಲಿದೆ ಎಂದರು.

ಪ್ರಸೂತಿ ಸ್ತ್ರೀ ರೋಗ ತಜ್ಞ ಡಾ.ನವೀನ್ ಮಾತನಾಡಿ ಉತ್ತಮ ಗುಣಮಟ್ಟದ ಚಿಕಿತ್ಸೆಯೊಂದಿಗೆ ಮೆಟರ್ನಿಟಿ ಓಟಿಯಲ್ಲಿ ಶೇ 97 ರಷ್ಟು ಗುಣಮಟ್ಟ ಸಾಧನೆಯೊಂದಿಗೆ ಪ್ಲಾಟಿನಂ ಬ್ಯಾಡ್ಜ್ ಪಡೆದಿದ್ದೇವೆ. 2019ರಿಂದಲೂ ಸತತ ಪ್ರಯತ್ನದೊಂದಿಗೆ ಲಕ್ಷ್ಯ ಪ್ರಶಸ್ತಿಗಾಗಿ ನಿರಂತರ ಪ್ರಯತ್ನ ಮಾಡಲಾಗುತ್ತಿತ್ತು. 2023–24 ನೇ ಸಾಲಿಗೆ ಪ್ರಶಸ್ತಿ ದೊರಕಿರುವುದು ಸಂತಸ ತಂದಿದೆ ಎಂದರು.

ಡಾ.ರಮ್ಯಾ, ಡಾ.ರಿತೇಶ್, ಮಕ್ಕಳ ತಜ್ಞೆ ಡಾ. ಮಾನಸ, ಡಾ.ನಂದಿನಿ, ಅರವಳಿಕೆ ತಜ್ಞೆ ಡಾ. ನೀಲವೇಣಿ, ನೇತ್ರ ಪರೀಕ್ಷಕ ಆರ್. ಉಮೇಶ್ ಕುಮಾರ್, ಶುಶ್ರೂಷಾಧಿಕಾರಿ ಪ್ರಭಾಮಣಿ, ಪೊನ್ನಮ್ಮ, ಜಯಂತಿ, ಟಿ.ಎಲ್.ಶ್ವೇತ, ತುಳಸೀಮಣಿ, ಮಹಾದೇವಿ, ಲತಾದೇವಿ, ಪದ್ಮಾವತಿ, ಅರ್ಚನ, ನಿರ್ಮಲ, ವೀಣಾ, ಸುಜಾತ, ಪ್ರಭಾರ ಶುಶ್ರೂಷಾಧಿ ಕಾರಿ ಗೀತಾ, ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ಜಯಮ್ಮ, ನಾಗಮ್ಮ, ಕಾವ್ಯ, ಶೋಭಾ ಸೇರಿದಂತೆ ಮತ್ತಿತರಿದ್ದರು.

ಸೇತುವೆ ನಿರ್ಮಾಣಕ್ಕೆ ಶಾಸಕರಿಂದ ಭೂಮಿ ಪೂಜೆ



ಸೇತುವೆ ನಿರ್ಮಾಣಕ್ಕೆ ಶಾಸಕ ದರ್ಶನ್ ಗುದ್ದಲಿಪೂಜೆ ನೆರವೇರಿಸಿದರು.

ಮಲ್ಕುಂಡಿ, ಅ.25– ಸಮೀಪದ ಹಾಡ್ಯ ಹುಂಡಿ ಗ್ರಾಮದಿಂದ ಮಡುವಿನ ಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಧ್ಯ 50 ಲಕ್ಷ ರೂ. ವೆಚ್ಚದ ಸೇತುವೆ ನಿರ್ಮಾಣಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುತ್ತಿದ್ದು, ಕ್ಷೇತ್ರದಲ್ಲಿ ಯಾವುದೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ತನ್ನಿ. ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು. ನಮ್ಮ ಸರ್ಕಾರ ನುಡಿದಂತೆ ನಡೆಯುವ ಸರ್ಕಾರವಾಗಿದೆ. ಚುನಾವಣೆ ವೇಳೆ ರಾಜ್ಯದ ಮತದಾರರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಬಡವರ ಪರ ಕೆಲಸ ಮಾಡುತ್ತಿದೆ. ಗೃಹ ಲಕ್ಷ್ಮಿ ಯೋಜನೆಯಿಂದ ಬಡ ಮಹಿಳೆಯರಿಗೆ ಅನುಕೂಲವಾಗಿದೆ. ನಮ್ಮ ಸರ್ಕಾರ ಇನ್ನೂ 5 ವರ್ಷ ಆಡಳಿತ ನಡೆಸಲಿದ್ದು, ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯ ಕೆ. ಮಾರುತಿ, ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಹೋಬಳಿ ಯುವ ಘಟಕದ ಅಧ್ಯಕ್ಷ ಹಾಡ್ಯ ಆದರ್ಶ, ಮಹೇಶ್, ಗ್ರಾಪಂ ಸದಸ್ಯೆ ಮಂಗಳಮ್ಮ, ಪಟೇಲ್ ಮಹದೇವಪ್ಪ, ಹೆಡಿಯಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಬಳ್ಳೂರಹುಂಡಿ ಶಿವನಾಗಪ್ಪ, ಇಂಜಿನಿಯರ್ ಬಸವರಾಜ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ದೊಡ್ಡೇಕೊಪ್ಪಲು ಗ್ರಾಪಂಗೆ ರಾಜೇಶ್ವರಿ ಅಧ್ಯಕ್ಷೆ



ದೊಡ್ಡೇಕೊಪ್ಪಲು ಗ್ರಾಪಂಗೆ ರಾಜೇಶ್ವರಿ ಅಧ್ಯಕ್ಷೆಯಾಗಿ ಆಯ್ಕೆಯಾದರು.

ಕೆ.ಆರ್.ನಗರ, ಅ.25– ತಾಲೂಕಿನ ದೊಡ್ಡೇಕೊಪ್ಪಲು(ಡೋರ್ನಹಳ್ಳಿ) ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಅರಕೆರೆ ಕೊಪ್ಪಲು ಗ್ರಾಮದ ರಾಜೇಶ್ವರಿ ಬಲರಾಮ್ ಚುನಾಯಿತರಾದರು, ಈವರೆಗೆ ಅಧ್ಯಕ್ಷರಾಗಿದ್ದ ಶ್ವೇತಾ ರವಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಪಂಚಾಯಿತಿ ಆಡಳಿತ ಕಚೇರಿಯಲ್ಲಿ ಚುನಾವಣೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ರಾಜೇಶ್ವರಿ ಬಲರಾಮ್ ಮತ್ತು ಸುನೀತಾ ರಾಮೇಗೌಡ ನಾಮಪತ್ರ ಸಲ್ಲಿಸಿದರು. ಆನಂತರ ನಡೆದ ಚುನಾವಣೆಯಲ್ಲಿ 14 ಮತಗಳಿಸಿದ ರಾಜೇಶ್ವರಿ ಬಲರಾಮ್ ಆಯ್ಕೆಯಾದರೆ ಕೇವಲ 7 ಮತಗಳನ್ನು ಪಡೆದ ಸುನೀತಾ ರಾಮೇಗೌಡ ಪರಾಭವಗೊಂಡಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಸಮಾಜ ಕಲ್ಯಾಣಾಧಿಕಾರಿ ಹೆಚ್.ಎಲ್. ಶಂಕರಮೂರ್ತಿ ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಕಾವ್ಯರಾಜು, ಸದಸ್ಯರಾದ ಕೆ.ಪಿ.ಜಗದೀಶ್, ದೊಡ್ಡೇಕೊಪ್ಪಲು ಕೃಷ್ಣ, ಲಕ್ಷ್ಮಿ ರೇವಣ್ಣ, ಕೆ.ಎಸ್.ಯೋಗೇಶ್, ಚೌಕಹಳ್ಳಿ ಶೇಖರ್, ನಂಜುಂಡ, ಕುಮಾರ್, ಬಿ.ಎಂ.ಗಿರೀಶ್, ಕೆ.ಬಿ.ಪಲ್ಲವಿ, ಭಾಗ್ಯ ಕರೀಗೌಡ, ಮಾರ್ಕ್ ಮಹದೇವ್, ರಾಮನಾಯಕ, ಮಹೇಶ್‌ಗೌಡ, ಮಹದೇವಮ್ಮ, ಸವಿತಾ ಸ್ವಾಮೀಗೌಡ, ಸಾವಿತ್ರಮ್ಮ, ಸುಮ ರಾಜೇಶ್, ಪಿಡಿಓ ಎಸ್.ಜೆ.ರಮೇಶ್, ಕಾರ್ಯದರ್ಶಿ ಸೋಮಶೇಖರ್, ಸಿಬ್ಬಂದಿಗಳಾದ ಗಣೇಶ್, ಮಹೇಶ್, ಕಿರಣ್ ಹಾಜರಿದ್ದರು.

ಅಧ್ಯಕ್ಷರ ಆಯ್ಕೆ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ಸಂಭ್ರಮಿಸಿದರಲ್ಲದೆ, ಶಾಸಕ ಡಿ.ರವಿಶಂಕರ್ ಮತ್ತು ಕೆಪಿಸಿಸಿ ಸದಸ್ಯ ದೊಡ್ಡಸ್ವಾಮೇಗೌಡರವರಿಗೆ ಜೈಕಾರದ ಘೋಷಣೆ ಮೊಳಗಿಸಿದರು. ನೂತನ ಅಧ್ಯಕ್ಷರನ್ನು ಕಾಂಗ್ರೆಸ್ ಮುಖಂಡರಾದ ಜವರೇಗೌಡ, ಕೆ.ಜೆ.ಕುಮಾರ್, ರೇವಣ್ಣ, ಜಯರಾಮು, ಶಿವರಾಜು, ಮಹದೇವ್, ರುದ್ರಿ, ಚೌಕಹಳ್ಳಿ ಶಿವಯ್ಯ ಸೇರಿದಂತೆ ಹಲವು ಮಂದಿ ಅಭಿನಂದಿಸಿದರು.

ನೀರಿನ ಹೊಂಡಕ್ಕೆ ಬಿದ್ದು ಒದ್ದಾಡುತ್ತಿದ್ದ ಹಸುವನ್ನು ರಕ್ಷಿಸಿದ ಅಗ್ನಿಶಾಮಕ ದಳ, ಪುರಸಭಾ ಸಿಬ್ಬಂದಿ



ಕೆ.ಆರ್.ನಗರ, ಅ.25– ಪಟ್ಟಣದ ಸಿಲ್ವರ್ ಜೂಬಿಲಿ ರಸ್ತೆಯಲ್ಲಿರುವ ಖಾಸಗಿ ನಿವೇಶನದಲ್ಲಿ ಮನೆ ನಿರ್ಮಾಣಕ್ಕೆಂದು ತೆಗೆದಿದ್ದ ಹೊಂಡದಲ್ಲಿ ಆಹಾರ ಅರಿಸಿ ಬಂದು ಆಯಾ ತಪ್ಪಿ ಬಿದ್ದು ಒದ್ದಾಡುತ್ತಿದ್ದ ಹಸುವನ್ನು ಅಗ್ನಿಶಾಮಕ ಸಿಬ್ಬಂದಿ ಮತ್ತು ಪುರಸಭಾ ಸದಸ್ಯರು ರಕ್ಷಿಸಿದ್ದಾರೆ.

ವಿಷಯ ತಿಳಿದ ತಕ್ಷಣ ಅಗ್ನಿಶಾಮಕ ಠಾಣಾಧಿಕಾರಿ ಮತ್ತು ಸಿಬ್ಬಂದಿ ಹಾಗೂ ಪುರಸಭೆಯ ಸಿಬ್ಬಂದಿಗಳು ನೀರಿನ ಹೊಂಡದಲ್ಲಿ ಬಿದ್ದು ನರಳುತ್ತಿದ್ದ ಹಸುವನ್ನು ಮೇಲೆತ್ತುವ ಕಾರ್ಯಾಚರಣೆ ಯಶಸ್ವಿಯಾಗಿ ನಡೆಸಿದರು.

ಈ ವೇಳೆ ಮಾತನಾಡಿದ ಅಗ್ನಿಶಾಮಕ ಠಾಣಾಧಿಕಾರಿ ಲಕ್ಷ್ಮಿಕಾಂತ್ ಯಾದವ್, ನಗರ ಪ್ರದೇಶ ಹಾಗೂ ಗ್ರಾಮಾಂತರ ಸೇರಿದಂತೆ ಇಂತಹ ಪ್ರಕರಣಗಳು ಹೆಚ್ಚು ಸಂಭವಿಸುತ್ತಿದ್ದು, ಹೊಂಡಾಗಳ ಬಗ್ಗೆ ಮುಂಜಾಗ್ರತ ಕ್ರಮಗಳನ್ನು ವಹಿಸುವಂತೆ ತಿಳಿಸಿದರು.

ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್ ಮಾತನಾಡಿ, ಖಾಲಿ ನಿವೇಶನಗಳಲ್ಲಿ ಪುರಸಭೆಯವರು ಸ್ವಚ್ಛತೆ ಮಾಡುವುದಿಲ್ಲ. ನಿವೇಶನದ ಮಾಲೀಕರು ಕಾಲ ಕಾಲಕ್ಕೆ ಸ್ವಚ್ಛತೆಯ ಜೊತೆಗೆ ಕಟ್ಟಡ ನಿರ್ಮಾಣಕ್ಕೆ ಎಂದು ತೆಗೆಯುವ ಹೊಂಡಾಗಳನ್ನು ಕೆಲಸವಾದ ನಂತರ ಮುಚ್ಚುವುದು ಸೂಕ್ತ ಎಂದು ತಿಳಿಸಿದರು.

ಈ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣೆಯ ಸಿಬ್ಬಂದಿಗಳಾದ ನಾಗೇಶ್, ಅಶೋಕ್, ಮೋಹನ್ ಕುಮಾರ್, ಸಚಿನ್, ಹರೀಶ್, ಸೂರ್ಯ, ಪುರಸಭಾ ಸಿಬ್ಬಂದಿಗಳಾದ ಡ್ರೈವರ್ ರಘು, ರಮೇಶ್, ಮೇಸ್ತ್ರಿ ಶ್ರೀರಾಮ್, ಭಂಡಾರಿ, ವೇಣು, ಚಂದನ್, ಮಹದೇವ್, ಸುದೀಪ್, ಮಧು, ಚೇತನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ವಿಶ್ವ ಮಾನ್ಯತೆ ಹಾದಿಯಲ್ಲಿ ಕಬಡ್ಡಿ ಕ್ರೀಡೆ



ಪ್ರಶಸ್ತಿಯೊಂದಿಗೆ ಆಟಗಾರರನ್ನು ಕಾಣಬಹುದು.

ಕಂಪಲಾಪುರ, ಅ.25– ಗ್ರಾಮೀಣ ಕ್ರೀಡೆಗಳಲ್ಲಿ ಒಂದಾದ ಕಬಡ್ಡಿ ಇಂದು ವಿಶ್ವಮಾನ್ಯತೆ ಪಡೆದಿದೆ ಎಂದು ಪತ್ರಕರ್ತ ಬಿ.ಆರ್. ಶರತ್ ಕುಮಾರ್ ಅಭಿಪ್ರಾಯಪಟ್ಟರು.

ಸಮೀಪದ ಭೋಗನಹಳ್ಳಿಯ ಶ್ರೀ ಸೋಮೇಶ್ವರ ಕ್ರೀಡಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ 2ನೇ ವರ್ಷದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಸಮಾರೋಪದಲ್ಲಿ ಮಾತನಾಡಿ, ವ್ಯಕ್ತಿಯ ದೈಹಿಕ ಸದೃಢತೆ ಜೊತೆಗೆ ಪ್ರತಿಭೆ ಅನಾವರಣಕ್ಕೆ ಕ್ರೀಡಾಕೂಟಗಳು ಸಹಕಾರಿಯಾಗಲಿವೆ. ಕ್ರೀಡಾಪಟುಗಳು ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿ ಕೃಷ್ಣ ಮಾತನಾಡಿ, ಕ್ರೀಡೆಗಳಲ್ಲಿ ಸೋಲು–ಗೆಲುವು ಸಾಮಾನ್ಯ. ಎರಡನ್ನೂ ಸಮನಾಗಿ ಸ್ವೀಕರಿಸಬೇಕು. ಕ್ರೀಡಾಪಟುಗಳು ಕ್ರೀಡೆಗಳಲ್ಲಿನ ಫಲಿತಾಂಶ ನಿರೀಕ್ಷಿಸುವುದಕ್ಕಿಂತ ಭಾಗವಹಿಸುವ ಧೈರ್ಯವನ್ನು ಪ್ರದರ್ಶಿಸಬೇಕು ಎಂದರು. ಮುಖಂಡರಾದ ಪ್ರಾಣೇಶ್, ಯೋಗಾನಂದ, ಶಶಾಂಕ್, ಮಂಜುನಾಥ್, ಭರತ್, ಯಶ್ವಂತ್, ಪ್ರಜ್ವಲ್, ಶಿವು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಕ್ರೀಡಾಪಟುಗಳು, ಗ್ರಾಮಸ್ಥರು ಹಾಜರಿದ್ದರು.

ಗ್ರಾಪಂ ಉಪಾಧ್ಯಕ್ಷೆ ಪತಿ ಅನುಮಾನಾಸ್ಪದ ಸಾವಿನ ಪ್ರಕರಣ

ಮತ್ತೊಬ್ಬ ಆರೋಪಿಯ ಬಂಧನ



ಧನರಾಜ್ ಭೂಲಾ

ನಂಜನಗೂಡು, ಅ.25– ತಾಲೂಕಿನ ದೇವರಸನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಸೌಭಾಗ್ಯ ಪತಿ ನಂಜುಂಡಸ್ವಾಮಿ ಅನುಮಾನಾಸ್ಪದವಾಗಿ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಶಂಕರಪುರ ನಿವಾಸಿ ರೌಡಿ ಶೀಟರ್ ಧನರಾಜ್ ಭೂಲಾ ಬಂಧಿತ ಆರೋಪಿ. ಈಗಾಗಲೇ ಪ್ರಕರಣ ಸಂಬಂಧ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಹಾಗೂ ಗ್ರಾಪಂ ಸದಸ್ಯ ಗೋವರ್ಧನ್, ಜಾಹಿರ್, ಮಣಿಕಂಠ, ಮಹೇಂದ್ರ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು ಶುಕ್ರವಾರ ಬೆಳಗ್ಗೆ ಮತ್ತೊಬ್ಬ ಆರೋಪಿ ಧನರಾಜ್ ಭೂಲಾರನ್ನು ಬಂಧಿಸಿದ್ದಾರೆ. ಇದರೊಂದಿಗೆ ಆರೋಪಿಗಳ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಈ ಹಿಂದೆಯೂ ಕೂಡ ಪಿಸ್ತೂಲ್ ಮಾರಾಟ ಪ್ರಕರಣದಲ್ಲಿ, ಹಾಗೂ ಹಲವಾರು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಧನರಾಜ್ ಭೂಲಾ ಈ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದಾನೆ ಹಾಗೂ ಕೃತ್ಯದಲ್ಲಿ ಈತನೇ ದೂರವಾಣಿಯ ಮೂಲಕ ಸಂಪರ್ಕದಲ್ಲಿದ್ದು, ಮಾಸ್ಟರ್ ಮೈಂಡ್ ಆಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ

ಬೋರಪ್ಪ



ತಿ.ನರಸೀಪುರ, ಅ.25– ತಾಲೂಕಿನ ಕುರುಬೂರು ಗ್ರಾಮದ ನೀರು ಬಳಕೆದಾರರ ಮಾಜಿ ನಿರ್ದೇಶಕ ಕೆ.ಬಿ.ಬೋರಪ್ಪ (72) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 3 ಗಂಟೆಗೆ ಸ್ವಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಶಿವಕುಮಾರ್



ಹೆಚ್.ಡಿ.ಕೋಟೆ, ಅ.25– ತಾಲೂಕಿನ ಹೈರಿಗೆ ಗ್ರಾಪಂ ಪಿಡಿಓ ಶಿವಕುಮಾರ್(46) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮೈಸೂರಿನ ಶಾರದದೇವಿ ನಗರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಣ್ಣಮ್ಮ



ಮೈಸೂರು, ಅ.25– ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಲೇಟ್ ನಂಜುಂಡ ಅವರ ಪತ್ನಿ ಸಣ್ಣಮ್ಮ(70) ಶುಕ್ರವಾರ ನಿಧನರಾದರು.

ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಡಿ.ಕೋಟೆ ತಾಲೂಕಿನ ಅಕ್ರಮಗಳ ತನಿಖೆಗೆ ಆಗ್ರಹಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ ಪಟ್ಟಣದ ತಾಲೂಕು ಆಡಳಿತ ಸೌಧದ ಎದುರು ದಸಂಸ ಸಂಘಟನೆಯ ಪದಾಧಿಕಾರಿಗಳು ತಾಲೂಕು ಆಡಳಿತ ವಿರುದ್ಧ ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ, ಅ.25– ತಾಲೂಕಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಿ ಭ್ರಷ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಕ್ಕೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಸಂಘಟನೆ ವತಿಯಿಂದ ಪ್ರತಿಭಟನಾ ಧರಣಿ ನಡೆಸಲಾಯಿತು.

ಪಟ್ಟಣದ ತಾಲೂಕು ಆಡಳಿತ ಭವನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ತಾಲೂಕಿನಲ್ಲಿ ಜನರ ಸಮಸ್ಯೆ ಬಗೆಹರಿಸಲು ಸಾಧ್ಯವಾಗದ ತಹಸೀಲ್ದಾರ್ ಹಾಗೂ ಅಧಿಕಾರಿಗಳನ್ನು ತನ್ನ ಕಪಿ ಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡು ಸ್ವತಂತ್ರವಾಗಿ ಸಾರ್ವಜನಿಕರ ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ದಸಂಸ ಜಿಲ್ಲಾ ಪ್ರಧಾನ ಸಂಚಾಲಕ ಮಲ್ಲಹಳ್ಳಿ ನಾರಾಯಣ್, ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಈ ದೇಶದ ಪ್ರಜೆಗಳೇ ಪ್ರಭುಗಳು. ಇಲ್ಲಿನ ಅಧಿಕಾರಿಗಳು, ಜನಪ್ರತಿನಿಧಿಗಳು ಕೇವಲ ಜನಸೇವಕರು ಮಾತ್ರ. ಆಡಳಿತ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಪ್ರಜೆಗಳಿಗೆ ಉತ್ತಮ ಸೇವೆಯನ್ನು ಕಲ್ಪಿಸಿದರೆ ಮಾತ್ರ ಈ ದೇಶ ಸುಭೀಕ್ಷೆಯಿಂದಿರಲು ಸಾಧ್ಯ ಮತ್ತು ಅಧಿಕಾರಿಗಳು ಜನಪ್ರತಿನಿಧಿಗಳು ನಮ್ಮ ಆದರ್ಶ ವ್ಯಕ್ತಿಗಳಾಗಿ ನಿಲ್ಲಲು ಸಾಧ್ಯ. ಆದರೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಕಂಟಕಪ್ರಾಯರಾದರೆ, ಪ್ರಜೆಗಳು ಅವರ ವಿರುದ್ಧ ತಿರುಗಿ ಬಿದ್ದರೆ ಕಾನೂನು ಸುವ್ಯವಸ್ಥೆ ಹಾಳಾಗಿ ಜನರೇ ಇವರಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ.

ಇಲ್ಲಿನ ತಹಸಿಲ್ದಾರ್ ಜನರ ಸೇವೆಯ ಬದಲಿಗೆ ಜನರ ಸಮಸ್ಯೆಗಳನ್ನೇ ಹೆಚ್ಚು ಮಾಡುವಂತಹ ಜನವಿರೋಧಿ ಅಧಿಕಾರಿಯಾಗಿ ಮಾರ್ಪಾಡಾಗಿದ್ದಾರೆ. ಕಟ್ಟೆ ಮನುಗನಹಳ್ಳಿ ಗ್ರಾಮದ ಸರ್ವೆ ನಂಬರ್ 78ರಲ್ಲಿ ರೈತ ಬೆಳೆದ ಲಕ್ಷಾಂತರ ರೂ. ಮೌಲ್ಯದ ಬೆಳೆ ಇಂದು ಕೊಳೆತು ರೈತನ ಬದುಕನ್ನು ಮೂರಾಬಟ್ಟೆ ಮಾಡಲು ಇಲ್ಲಿಯ ತಹಸಿಲ್ದಾರ್‌ರವರೇ ಕಾರಣರಾಗಿದ್ದಾರೆ. ರೈತನ ಜಮೀನಿಗೆ ರಸ್ತೆ ಬಿಡಿಸಿ ಕೊಡುವಂತೆ ರೈತ ತಹಸಿಲ್ದಾರ್ ಅವರನ್ನು ಅನೇಕ ಬಾರಿ ಮನವಿ ಮಾಡಿಕೊಂಡಿದ್ದರು. ಅಲೆಸಿ ಅಲೆಸಿ ಕಾಲ ಕಳೆದಿದ್ದಾರೆ ಎಂದು ಆರೋಪಿಸಿದರು.

ಹುಣಸೂರು ಉಪ ವಿಭಾಗಾಧಿಕಾರಿಗಳ ಕಚೇರಿಯಿಂದ ಆಗಮಿಸಿದ ಅಧಿಕಾರಿ ಯದು ಗಿರೀಶ್ ಅವರು ಸ್ಥಳಕ್ಕೆ ಬಂದು ಪ್ರತಿಭಟನಾಕಾರರನ್ನು ಮನವೊಲಿಸಿ, ಈ ಸಂಬಂಧ ಉಪ ವಿಭಾಗಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ಆಗ ಪ್ರತಿಭಟನಾಕಾರರು ಪ್ರತಿಭಟನೆಯನ್ನು ಕೈಬಿಟ್ಟರು.

ಪ್ರತಿಭಟನೆಯಲ್ಲಿ ದೊಡ್ಡಸಿದ್ದು, ಸಣ್ಣ ಕುಮಾರ್, ಕಾಳಪ್ಪಾಜಿ, ರವಿ, ಮಹೇಶ್, ರಾಚಪ್ಪ, ಸಮೀಉಲ್ಲಾ, ಕುಮಾರಸ್ವಾಮಿ, ಕುಮಾರ್, ಮಹಾದೇವಮ್ಮ, ಗ್ಯಾಸ್ ಪ್ರಕಾಶ್, ಅನುಷಾ, ಗೀತಾ, ಬಸವರಾಜು, ಗೋವಿಂದರಾಜು, ಕೃಷ್ಣ, ನಾಗೇಂದ್ರ, ರಾಜೇಗೌಡ ಇದ್ದರು.

-: ಹಕ್ಕೊತ್ತಾಯಗಳು :-

- ಭೂ ಮಾಫಿಯಾಗಳ ಜೊತೆ ಶಾಮೀಲಾಗಿ ಸರ್ಕಾರಿ ಭೂಮಿ ಕಬಳಿಸುವ ವ್ಯವಸ್ಥೆಯಲ್ಲಿ ಪಾಲುದಾರರಾಗಿರುವ ತಹಸೀಲ್ದಾರ್ ಅವರನ್ನು ಕೂಡಲೇ ಅಮಾನತು ಮಾಡಬೇಕು.
- ರೈತರು ಬೆಳೆದ ಬೆಳೆಯನ್ನು ಸಾಗಿಸಲು ಜಮೀನಿನಿಂದ ರಸ್ತೆ ಸಂಪರ್ಕ ಕಲ್ಪಿಸಿ ಕೊಡಬೇಕು.
- ಮೋಸ ಮಾಡಿ ಅಕ್ರಮವಾಗಿ ಜಮೀನನ್ನು ಲಪಟಾಯಿಸಿರುವ ಭೂ ಗಳ್ಳರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಸರ್ಕಾರಿ ಭೂಮಿಯನ್ನು ರಕ್ಷಣೆ ಮಾಡಬೇಕು.

"ಸರ್ಕಾರದ ವಿವಿಧ ಸೇವೆಗಳನ್ನು ಒದಗಿಸುವ ಕರ್ನಾಟಕ ಒನ್ ಕೇಂದ್ರವನ್ನು ತೆರೆಯಲು ಅರ್ಜಿ ಆಹ್ವಾನಿಸಿದ ಸಂದರ್ಭದಲ್ಲಿ ಅನೇಕರು ಅರ್ಜಿ ಸಲ್ಲಿಸಿದ್ದರೂ ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿ ಗ್ರಾಮಲೆಕ್ಕಿಗ ರಾಜೇಶ್ ತಮಗೆ ಬೇಕಾದವರಿಗೆ ಆದ್ಯತೆ ನೀಡುವುದರ ಮುಖಾಂತರ ಸರ್ಕಾರವನ್ನು ವಂಚಿಸಿ, ಒಬ್ಬ ನಿಜವಾದ ಫಲಾನುಭವಿಗೆ ಅನ್ಯಾಯ ಮಾಡಿದ್ದಾರೆ. ಇವರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ.

-ಗ್ಯಾಸ್ ಪ್ರಕಾಶ್, ಪ್ರತಿಭಟನಾಕಾರ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

GODOWN FOR RENT / LEASE
Office or agency use (750 sq.ft.) 8th Cross, Sunnadakeri, K.R. Mohalla, Agrahara, Mysore. Rent Rs. 9000
8050807788

FOR SALE
1. Properties at Kuvempu Nagar Starting @ 35L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. Commercial Properties @ Saraswathi Puram, Kuvempu Ngr & Hunsur Rd
PRAKRUTHI PROPERTIES
95386 90359, 90359 90359

ಮುಡಾ ಸೈಟು ಮಾರಾಟಕ್ಕಿದೆ
ಮುಡಾ ಅನುಮೋದಿತ ಸೈಟು 30x40, S/F ಪಾರ್ಕ್ ಎದುರು, ವಿಜಯನಗರ, 4ನೇ ಹಂತ, 2ನೇ ಫೇಸ್, 83 ಲಕ್ಷ
7338445412

CHANGE OF NAME
I, R. Purushotham Naidu, residing at #4371, 11th Cross, St. Mary's Road, N.R. Mohalla, Mysore-570 007, have changed my name from Purushotham to R. Purushotham Naidu on my own free will sworn in before Notary C.R. Seetharam, Mysore, vide affidavit dated 25-10-2024.
Sd/- R.Purushotham Naidu

WE ARE HIRING TELECALLERS
Job opportunity for both male & female any langauges (Kannada, Tamil, Telugu), immediate joining spot offering. * Any qualification: SSLC, PUC etc. * With attractive salary * Collections loan recovery, office Any, SGA Financial Services, #271, (Ashraya Complex), Lakshmi Vilas Road, Beside Jaganmohana Palace, Mysore-2. Contact:
8105624293|8197626762

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಗೊಂಬೆ ಪ್ರದರ್ಶನದಲ್ಲಿ ಮಾಹಿತಿಯೂ ಇದ್ದರೆ ಒಳ್ಳೆಯದು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಕಿವಿಮಾತು

ಮೈಸೂರು, ಅ.25(ಎಸ್‌ಪಿಎನ್)– ಭಾರತೀಯ ಪರಂಪರೆಯಲ್ಲಿ ದಸರಾ ಗೊಂಬೆ ಪ್ರದರ್ಶನಕ್ಕೆ ವಿಶೇಷ ಸ್ಥಾನವಿದೆ. ಈ ಸಂದರ್ಭದಲ್ಲಿ ಗೊಂಬೆ ಪ್ರದರ್ಶನ ಯಾವ ಸನ್ನಿವೇಶದ್ದು ಎಂಬ ಕಥೆಗಳ ಮೂಲಕ ಸಾರ್ವಜನಿಕರಿಗೆ ತಿಳಿಸುವ ಕೆಲಸವಾಗಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸಲಹೆ ನೀಡಿದರು.

ಮೈಸೂರಿನ ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ಎದುರಿನ ವಿಜಯ ವಿಠಲ ವಿದ್ಯಾಸಂಸ್ಥೆ ಆವರಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಸಂಸ್ಕೃತಿ ಸಿಂಚನ ಪ್ರಶಸ್ತಿ ಪ್ರದಾನ, ಭಾವಯಾನ ಗೀತಾ ಗಾಯನ, ನವರಾತ್ರಿ ಗೊಂಬೆ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ನಾನು ಚಿಕ್ಕ ವಯಸ್ಸಿನವನಿದ್ದಾಗ ಚರ್ಚ್ ಆವರಣದಲ್ಲಿ ಕ್ರಿಸ್‌ಮಸ್ ವೇಳೆ ಏಸುಕ್ರಿಸ್ತನ ಗೊಂಬೆ ಪ್ರದರ್ಶಿಸಿ, ಏಸುಕ್ರಿಸ್ತನ ಜನ್ಮ ಕುರಿತಾದ ಮಾಹಿತಿಯನ್ನು ಆ ಗೊಂಬೆ ಬಳಿ ಪ್ರದರ್ಶಿಸುತ್ತಿದ್ದರು. ಗೊಂಬೆ ಪ್ರದರ್ಶನ ವನ್ನು ನೋಡಲು ಬರುವವರಿಗೆ ಅದರ ಮಾಹಿತಿ ತಿಳಿದುಕೊಳ್ಳಲಿ ಎಂದು. ಹಾಗಾಗಿ ದಸರಾ ಸಂದರ್ಭದಲ್ಲಿ ವಿವಿಧ ಬಡಾವಣೆಗಳಲ್ಲಿ ಗೊಂಬೆ ಪ್ರದರ್ಶನ ಮಾಡುತ್ತಾರೆ. ಆದರೆ, ಆ ಪ್ರದರ್ಶನದ ಮಾಹಿತಿಯೇ ಮನೆಯವರಿಗೆ ಇರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮನೆಗಳಲ್ಲಿ ಆಯೋಜಿಸುವ ಗೊಂಬೆ ಪ್ರದರ್ಶನ ರಾಮಾಯಣ, ಮಹಾಭಾರತ ಅಥವಾ ಬೇರೆ ಯಾವುದೇ ಸನ್ನಿವೇಶವಾಗಿರಲಿ ಗೊಂಬೆ ಕೂರಿಸುವವರಿಗೆ ಪ್ರದರ್ಶನದ ಸ್ಪಷ್ಟ ಮಾಹಿತಿ ಇರಬೇಕು. ಇದನ್ನು ನೋಡಲು ಬರುವವರಿಗೂ ಇದರ ಮಾಹಿತಿ ಲಭ್ಯವಾದರೆ ಉತ್ತಮ ಎಂದರು.

ನಂತರ ಮೈಸೂರಿನ ವಿವಿಧ ಕ್ಷೇತ್ರದ ಸಾಧಕಿಯರಾದ ಸರಸ್ವತಿ ಶ್ರೀಮಂತರಾವ್, ಲಕ್ಷ್ಮೀಶಿವರಾಂ, ಇಂದ್ರಾಣಿ ಶಂಕರ್, ಉಮಾ ನಂಜುಂಡಯ್ಯ, ಶ್ರೀಲತಾ ಹೆಗಡೆ ಅವರಿಗೆ ಈ ಸಾಲಿನ 'ಸಂಸ್ಕೃತಿ ಸಿಂಚನ ಪ್ರಶಸ್ತಿ' ಪ್ರದಾನ ಮಾಡಲಾಯಿತು.



ಮೈಸೂರಿನ ವಿವಿಧ ಕ್ಷೇತ್ರದ ಸಾಧಕಿಯರಾದ ಸರಸ್ವತಿ ಶ್ರೀಮಂತರಾವ್, ಲಕ್ಷ್ಮೀ ಶಿವರಾಂ, ಇಂದ್ರಾಣಿ ಶಂಕರ್, ಉಮಾ ನಂಜುಂಡಯ್ಯ, ಶ್ರೀಲತಾ ಹೆಗಡೆ ಅವರಿಗೆ ಈ ಸಾಲಿನ 'ಸಂಸ್ಕೃತಿ ಸಿಂಚನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ನವರಾತ್ರಿ ವೇಳೆ ಮನೆಗಳಲ್ಲಿ ಗೊಂಬೆ ಪ್ರದರ್ಶಿಸಿ ಬಹುಮಾನ ಗಳಿಸಿದ ರೇವತಿ ರಾಮಸ್ವಾಮಿ, ಶ್ರೀದೇವಿ ಶ್ರೀವತ್ಸ, ಗೀತಾ ರಘುರಾಂ, ಜಯಶ್ರೀ ಶೇಷಾದ್ರಿ, ಇಂದ್ರಾಣಿ ಶಂಕರ್, ಕೌಸಲ್ಯ, ಪದ್ಮಾ ರವಿಶಂಕರ್, ರೂಪಶ್ರೀ ಶೇಷಾದ್ರಿ, ತನುಜಾ ಅರವಿಂದ್, ಲತಾ ವೆಂಕಟೇಶ್, ಸರಸ್ವತಿ ಶ್ರೀಮಂತರಾವ್, ಸ್ವರೂಪಿಣಿ, ಉಮಾ ನಂಜುಂಡಯ್ಯ, ರಂಗಲಕ್ಷ್ಮಿ ಭಾರತೀಶಂಕರ್, ವಿಜಯಸುದರ್ಶನ್, ಗೀತಾ ಶ್ರೀಹರಿ, ಹೇಮಲತಾ ಕುಮಾರಸ್ವಾಮಿ, ಇಂದಿರಾ ಸುಂದರ್, ಭಾನುಮತಿ ಸುಂದರೇಶನ್, ಉಷಾ ನಾಗರಾಜರಾವ್, ಸವಿತಾ ದಿನೇಶ್, ಪ್ರಜಾ ದಿನೇಶ್, ಸತ್ಯಭಾಮ ಗೋಪಿನಾಥ್, ರಾಜೇಶ್ವರಿ ಗಣೇಶನ್ ಸೇರಿದಂತೆ ಒಟ್ಟು 25 ಮಂದಿಗೆ ಪ್ರಥಮ ಬಹುಮಾನ ನೀಡಿ ಗೌರವಿಸಲಾಯಿತು.

ಅದೇ ರೀತಿ ಜಿ.ಶಾಂತಲ, ರಮಾಮಣಿ, ಶೆಲ್ವಪಿಳ್ಳೈ, ನಮಿತಾ ಜಯಂತಾ, ಪ್ರಮೀಳಾ ರಾಧಾಕೃಷ್ಣ, ಕಲ್ಯಾಣಿ, ಚಂದ್ರಕಲಾ ರಮೇಶ್, ಶ್ಯಾಮಲ ಪ್ರಸನ್ನ, ವಿಜಯಲಕ್ಷ್ಮಿ ಸತ್ಯನಾರಾಯಣ, ಜಯಶ್ರೀ ರಂಗನಾಥ್, ರೇಖಾ ಶ್ರೀನಾಥ್, ನಾಗಶ್ರೀ ಮುಕುಂದ, ನವ್ಯಶ್ರೀ ಯೋಗಾನಂದ ಸೇರಿದಂತೆ ಒಟ್ಟು 17 ಮಂದಿಗೆ ದ್ವಿತೀಯ ಬಹುಮಾನ ನೀಡಿ, ಅಭಿನಂದಿಸಲಾಯಿತು.

ವೇದಿಕೆಯಲ್ಲಿ ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಕಸಾಪ ಕಾರ್ಯದರ್ಶಿ ಮನಲತಾಮೋಹನ್, ಸಮಾಜ ಸೇವಕಿ ಸುಶೀಲ ಶ್ಯಾಮಸುಂದರ್, ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಮಲೆಯೂರು ಪ್ರಭುಸ್ವಾಮಿ ಸೇರಿದಂತೆ ಇತರರಿದ್ದರು. ಶ್ರೀ ಮಾತಾ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ನಾಡಗೀತೆ ಹಾಗೂ ಜಯಚಾಮರಾಜೇಂದ್ರ ಒಡೆಯರ್ ರಚಿತ ಕಾಯೋ ಶ್ರೀಗೌರಿ ಗೀತೆ ಹಾಡಿದರು. ಪದ್ಮ ಪಾಡುವಂತೆ ನಿರೂಪಿಸಿದರು. ಕೌಸಲ್ಯ, ಅಮೀನಾ ಕಾಲೇಖಾನ್ ಕಾರ್ಯಕ್ರಮ ನಿರ್ವಹಿಸಿದರೆ, ರೇವತಿ ರಾಮಸ್ವಾಮಿ ವಂದಿಸಿದರು. ಮೈಸೂರಿನ ರಾಗ ಲಯ ಸಂಗೀತ ಕೇಂದ್ರದ ಹೇಮಲತಾ ಕುಮಾರಸ್ವಾಮಿ, ಉಮಾ ನಂಜುಂಡಯ್ಯ ತಂಡದ ವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಚಾಮುಂಡೇಶ್ವರಿ ದರ್ಶನಕ್ಕೆ ಬಂದಿದ್ದ ಭಕ್ತ ದೇವಿಕೆರೆಯಲ್ಲಿ ಮುಳುಗಿ ಸಾವು

ಮೈಸೂರು, ಅ. 25(ಆರ್‌ಕೆ)– ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿ ದರ್ಶನಕ್ಕೆಂದು ಸ್ನೇಹಿತರೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಬಂದಿದ್ದ ಭಕ್ತನೋರ್ವ ಸ್ನಾನ ಮಾಡುವಾಗ ದೇವಿಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಇಂದು ಮುಂಜಾನೆ ಸಂಭವಿಸಿದೆ.

ಬೆಂಗಳೂರಿನ ವರ್ತೂರು ಹೋಬಳಿ ಮಾರತ್‌ಹಳ್ಳಿ ನಿವಾಸಿ ಚೇತನ್(27) ದುರಂತ ಸಾವಿಗೀಡಾದ ಯುವಕ. ಮಾರತ್‌ಹಳ್ಳಿ ಶ್ರೀ ಎಲ್ಲಮ್ಮ ತಾಯಿ ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡಿದ್ದ ಚೇತನ್, ತನ್ನ ಚಿಕ್ಕಮ್ಮ, ನಾಲ್ವರು ಸ್ನೇಹಿತರೊಂದಿಗೆ ಗುರುವಾರ ರಾತ್ರಿ 9.15 ಗಂಟೆ ವೇಳೆಯಲ್ಲಿ ಚಾಮುಂಡಿಬೆಟ್ಟಕ್ಕೆ ಬಂದಿದ್ದರು.

ಅಷ್ಟರಲ್ಲಿ ದೇವಸ್ಥಾನದ ಬಾಗಿಲು ಬಂದ್ ಆಗಿದ್ದರಿಂದ ಚಾಮುಂಡೇಶ್ವರಿ ದೇವಸ್ಥಾನದ ಅತಿಥಿ ಗೃಹದಲ್ಲೇ ಕೊಠಡಿ ಪಡೆದು ಗುರುವಾರ ವಾಸ್ತವ್ಯ ಹೂಡಿದ್ದರು. ಶುಕ್ರ ವಾರ ಬೆಳಗ್ಗೆ 6 ಗಂಟೆಗೆ ದೇವಸ್ಥಾನದ ಬಾಗಿಲು ತೆರೆಯಲಿದ್ದು, ಅದಕ್ಕೂ ಮೊದಲು ದೇವಿಕೆರೆಯಲ್ಲಿ ಸ್ನಾನ ಮಾಡಿ ಬಂದು ದೇವರ ದರ್ಶನ ಮಾಡಬಹುದು ಎಂದು ಅಲ್ಲಿನ ಅರ್ಚಕರು ಸಲಹೆ ನೀಡಿದ್ದರು.

ಅದರಂತೆ ಇಂದು ಮುಂಜಾನೆ 3.30 ಗಂಟೆಗೆ ಎದ್ದು ಎಲ್ಲಾ 6 ಮಂದಿಯೂ ದೇವಿಕೆರೆಗೆ ಹೋಗಿ ಸ್ನಾನಕ್ಕೆ ಮುಂದಾದರು. ಜಪ ಮಾಡಿ ಮೂರು ಬಾರಿ ನೀರಿನಲ್ಲಿ ಮುಳುಗುತ್ತಿದ್ದ ವೇಳೆ ಚೇತನ್ ಕಾಲು ಜಾರಿ ಆಳದ ನೀರಲ್ಲಿ ಮುಳುಗಿದ್ದಾನೆ. ಸ್ಥಳದಲ್ಲೇ ಇದ್ದ ಕುಟುಂಬದವರು ಹಾಗೂ ಸ್ನೇಹಿತರು ಕೂಗಿಕೊಳ್ಳುತ್ತಿದ್ದ ಶಬ್ದ ಕೇಳಿ ದೇವಿಕೆರೆ ಬಳಿಯ ಬಾವಿಯಲ್ಲಿ ಚಾಮುಂಡೇಶ್ವರಿ ದೇವಿಯ ಅಭಿಷೇಕಕ್ಕೆ ನೀರು ತರಲೆಂದು ಬಂದಿದ್ದ ಅರ್ಚಕರು ಸಹಾಯಕ್ಕೆ ಧಾವಿಸಿದರಾದರೂ ಪ್ರಯೋಜನವಾಗಲಿಲ್ಲ.

ಅರ್ಚಕರು ನೀಡಿದ ಮಾಹಿತಿಯಂತೆ ಸ್ಥಳಕ್ಕೆ ಧಾವಿಸಿದ ಚಾಮುಂಡಿಬೆಟ್ಟದಲ್ಲಿರುವ ಕೆ.ಆರ್.ಠಾಣೆ ಔಟ್‌ಪೋಸ್ಟ್ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ, ಈಜುಗಾರರನ್ನು ಕರೆಸಿಕೊಂಡು ಶೋಧ ನಡೆಸಿ ಬೆಳಗ್ಗೆ 6 ಗಂಟೆ ವೇಳೆಗೆ ಚೇತನ್ ಮೃತದೇಹವನ್ನು ಕೆರೆಯಿಂದ ಹೊರತೆಗೆದರು.

ಕೆ.ಆರ್.ಠಾಣೆ ಇನ್‌ಸ್ಪೆಕ್ಟರ್ ನಾಗೇಗೌಡ, ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮಧ್ಯಾಹ್ನ ವಾರಸುದಾರರಿಗೆ ದೇಹ ಒಪ್ಪಿಸಿದರು. ದೇವಿಕೆರೆ ಸುತ್ತ ಕಬ್ಬಿಣದ ಗ್ರಿಲ್ ಅಳವಡಿಸಲಾಗಿದೆಯಾದರೂ, ಸಾರ್ವಜನಿಕರ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಚಾಮುಂಡೇಶ್ವರಿ ದೇವಿಯ ಅಭಿಷೇಕಕ್ಕೆ ಕೆರೆ ಪಕ್ಕದ ಬಾವಿಯಿಂದ ನೀರು ತರಲಾಗುತ್ತದೆ. ಸಂಬಂಧಪಟ್ಟ ಅರ್ಚಕರ ಬಳಿ ಮಾತ್ರ ಕೀ ಇದ್ದು, ಅಲ್ಲಿ ಬೇರೆಯವರಿಗೆ ಅವಕಾಶವಿಲ್ಲ ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಜೆ.ರೂಪಾ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಯೂಟ್ಯೂಬರ್‌ನಿಂದ ಜೀವ ಬೆದರಿಕೆ

ಮೈಸೂರು, ಅ.25(ಎಂಟಿವೈ)– ಇತ್ತೀಚೆಗೆ ಬಿಡುಗಡೆಯಾದ ನಟ ಧ್ರುವ ಸರ್ಜಾ ನಟಿಸಿರುವ ಕನ್ನಡ ಸಿನಿಮಾ 'ಮಾರ್ಟಿನ್' ಕುರಿತು ಕೆಟ್ಟದಾಗಿ ರೀಲ್ಸ್ ಮಾಡಿದ್ದ ಯೂಟ್ಯೂಬರ್ ಸುಧಾಕರ್‌ಗೌಡ ಎಂಬಾತ ದೂರವಾಣಿ ಮೂಲಕ ತನಗೆ ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದು ಕನ್ನಡ ಫಿಲಂ ಚೇಂಬರ್ ಸಂಸ್ಥೆಯ (ಅಧಿಕೃತ ಕರ್ನಾಟಕ ಫಿಲಂ ಚೇಂಬರ್ ಅಲ್ಲ) ಅಧ್ಯಕ್ಷ ಎಂ.ಎಸ್.ರವೀಂದ್ರ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಟಿನ್ ಚಿತ್ರದಲ್ಲಿ ಧ್ರುವ ಸರ್ಜಾ ಅವರ ನಟನೆ ಚೆನ್ನಾಗಿಲ್ಲ ಎಂದು ಸುಧಾಕರ್ ಗೌಡ ಹಗುರವಾದ ಮಾತುಗಳ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಹಾಕಿದ್ದರು. ಈತನ ವರ್ತನೆ ವಿರುದ್ಧ ವಿರೋಧ ವ್ಯಕ್ತವಾಗಿತ್ತು. ಇದರಿಂದಾಗಿ ಆತ 'ಈ ಮಾತು ಇಷ್ಟರ ಮಟ್ಟಿಗೆ ವೈರಲ್ ಆಗುತ್ತದೆ ಎಂದು ಗೊತ್ತಿರಲಿಲ್ಲ' ಎಂದು ವಿಷಾದಿಸಿದ್ದ. ನಂತರ ನನಗೆ ಸ್ನೇಹಿತರ ಮೂಲಕ ಕರೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ. ಈ ಕುರಿತು ಪೊಲೀಸರಿಗೆ ದೂರು ನೀಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ನಂದೀಶ್ ನಾಯಕ್ ಹಾಗೂ ಕೀರ್ತಿ ಇದ್ದರು.

ಕೆಪಿಎಯಲ್ಲಿ ಜರ್ಮನಿ ಪೊಲೀಸ್ ಅಧಿಕಾರಿಗಳೊಂದಿಗೆ ಸಮಾಲೋಚನೆ



ಮೈಸೂರು, ಅ. 25(ಆರ್‌ಕೆ)– ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ಸಭಾಂಗಣದಲ್ಲಿ ಅಕ್ಟೋಬರ್ 23 ಮತ್ತು 24ರಂದು ಜರ್ಮನಿಯ ಬವೇರಿಯಾ ರಾಜ್ಯದ ಪೊಲೀಸ್ ಅಧಿಕಾರಿಗಳೊಂದಿಗೆ ತರಬೇತಿ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಸಮಾಲೋಚನೆ ನಡೆಸಿದರು.

ಕೆಪಿಎ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಗೃಹ ಇಲಾಖೆ ಮತ್ತು ಜರ್ಮನಿ ದೇಶದ ನಡುವೆ ಬಾಂಧವ್ಯ ಬೆಸೆಯುವ ನಿಟ್ಟಿನಲ್ಲಿ ತರಬೇತಿ ಕುರಿತ ಕೌಶಲ್ಯ ಅಭಿವೃದ್ಧಿ, ವೃತ್ತಿಪರತೆ, ಸನ್ನಿವೇಶ ಆಧಾರಿತ ತರಬೇತಿ ಕುರಿತು ಚರ್ಚಿಸಲಾಯಿತು.

ಬವೇರಿಯಾ ರಾಜ್ಯದಲ್ಲಿ 7 ಕೋಟಿ ಜನಸಂಖ್ಯೆ ಇದ್ದು, ಉತ್ತಮ ಪೊಲೀಸ್ ವ್ಯವಸ್ಥೆ ಹೊಂದಿದೆ ಎರಡೂ ರಾಜ್ಯಗಳ ಪೊಲೀಸ್ ಅಧಿಕಾರಿಗಳಿಗೆ ಕಾನೂನು–ಸುವ್ಯವಸ್ಥೆ, ಅಪರಾಧ ತಡೆ ಮತ್ತು ಪತ್ತೆ, ಸಂಚಾರ ನಿಯಂತ್ರಣ ಹಾಗೂ ಸೈಬರ್ ಕ್ರೈಂ ತಡೆಗಟ್ಟುವ ಬಗ್ಗೆ ಇದೇ ವೇಳೆ ತರಬೇತಿ ನೀಡಲಾಯಿತು.

ಬವೇರಿಯಾ ರಾಜ್ಯದ ತರಬೇತಿ ಮುಖ್ಯಸ್ಥ ಆಂಡ್ರಿಯನ್ ಡೈವೆಲ್ ಎರಡೂ ರಾಜ್ಯಗಳ ಸಮನ್ವಯ ಸಂಸ್ಥೆಯಾದ ಹ್ಯಾನ್ ಸೀಡನ್ ಫೌಂಡೇಷನ್ ಅಧಿಕಾರಿಗಳಾದ ಜುಡಿತ್ ವೇನ್‌ಭರ್ಗರ್, ಡಾ. ಅರುಳ್, ದಕ್ಷಿಣ ವಲಯ ಡಿಐಜಿಪಿ ಡಾ. ಬೋರ ಲಿಂಗಯ್ಯ, ಕೆಪಿಎ ಉಪನಿರ್ದೇಶಕ ಚೆನ್ನಬಸವಣ್ಣ, ರಾಜ್ಯದ 11 ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲರು ಹಾಗೂ ಕೆಪಿಎ ಸಹಾಯಕ ನಿರ್ದೇಶಕರುಗಳು ಈ ಸಂದರ್ಭ ಹಾಜರಿದ್ದರು.

ಜಯನಗರ ಪಾರ್ಕ್‌ನಲ್ಲಿ ಕಾನೂನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಕಾಮಗಾರಿ

ಎಂಜಿಪಿ ಸಂಸ್ಥಾಪಕ ಅಧ್ಯಕ್ಷ ಭಾಮೀ ವಿ.ಶೆಣೈ ಆರೋಪ

ಮೈಸೂರು, ಅ.25(ಪಿಎಂ)– ಕರ್ನಾಟಕ ಉದ್ಯಾನವನಗಳ ಕಾಯ್ದೆ ಪ್ರಕಾರ ಯಾವುದೇ ಉದ್ಯಾನವನದಲ್ಲಿ ಕಟ್ಟಡ ನಿರ್ಮಾಣಕ್ಕೆ ಅವಕಾಶವಿಲ್ಲ. ಅದಾಗ್ಯೂ, ಮೈಸೂರಿನ ಜಯನಗರದ ಉದ್ಯಾನವನವೊಂದರಲ್ಲಿ ನಿಯಮಬಾಹಿರವಾಗಿ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮೀ ವಿ.ಶೆಣೈ ಆರೋಪಿಸಿದ್ದು, ಇದು ಖಂಡನೀಯವೆಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಎಂಜಿಪಿ ಮತ್ತು ರಾಕೇಶ್ ನೇತೃತ್ವದಲ್ಲಿ ಕೆಲವು ಸ್ಥಳೀಯ ಕಾರ್ಯಕರ್ತರು ಈ ಹಿಂದೆ ಪ್ರತಿಭಟನೆ ನಡೆಸಿದ ನಂತರ ಮೈಸೂರು ಮಹಾನಗರ ಪಾಲಿಕೆ ಸದರಿ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸಿತ್ತು. ಹಾಗಾಗಿ ನಾವು ಸದರಿ ಯೋಜನೆಯನ್ನು ಕೈಬಿಡಲಾಗಿದೆ ಎಂದು ಭಾವಿಸಿದ್ದೆವು. ಆದರೆ ಎರಡು ದಿನಗಳಿಂದ ಮತ್ತೆ ಕಾಮಗಾರಿ ಮುಂದುವರೆಸಲಾಗುತ್ತಿದೆ. ಇದನ್ನು ನೋಡಿದರೆ ಪಾಲಿಕೆಗೆ ಕಾನೂನು ಅನುಸರಿಸಲು ಯಾವುದೇ ಆಸಕ್ತಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದು ನಿಜಕ್ಕೂ ದುರಂತವೇ ಸರಿ.

ಉದ್ಯಾನವನದಲ್ಲಿನ ಕಟ್ಟಡ ನಿರ್ಮಾಣ ವಿರೋಧಿಸಿ ಪಾಲಿಕೆ ಇಂಜಿನಿಯರ್ ಮತ್ತು ವಲಯ ಆಯುಕ್ತರನ್ನು ನಾವು ಭೇಟಿ ಮಾಡಿದ್ದಾಗ, ಅವರು ಕೆಲ ನಿವಾಸಿ ಗಳು ಕಟ್ಟಡ ನಿರ್ಮಾಣ ಯೋಜನೆಯನ್ನು ಮುಂದುವರೆಸಲು ಬಯಸುತ್ತಿದ್ದಾರೆಂದು ಸಮರ್ಥಿಸಿಕೊಂಡಿದ್ದರು. ಹೀಗೆ ಕಾನೂನು ಬಗ್ಗೆ ಕಾಳಜಿ ಇಲ್ಲದ ಕೆಲವರ ಮನವಿ ಪುರಸ್ಕರಿಸಿದರೆ ನಮ್ಮ ಎಲ್ಲಾ ಉದ್ಯಾನವನಗಳು ಕಣ್ಮರೆಯಾಗಲಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕೆಲವರು ಕಟ್ಟಡ ನಿರ್ಮಾಣ ಬಯಸಿದರೆ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲವೆಂದು ಅವರಿಗೆ ತಿಳಿಸಿಕೊಡುವುದು ಅಧಿಕಾರಿಗಳ ಕರ್ತವ್ಯವಲ್ಲವೇ? ಚೆಲುವಾಂಬ ಉದ್ಯಾನವನದಲ್ಲಿ ಕಟ್ಟಡ ನಿರ್ಮಿಸುತ್ತಿದ್ದರ ವಿರುದ್ಧ ಪ್ರತಿಭಟನೆ ನಡೆಸಬೇಕಾಯಿತು. ಇಂತಹ ಕಾನೂನು ಉಲ್ಲಂಘನೆ ವಿರುದ್ಧ ನಿರಂತರ ಹೋರಾಟ ಮಾಡಬೇಕಿರುವ ಅನಿವಾರ್ಯತೆ ನಮಗೆ ಎದುರಾಗಿರುವುದು ನಿಜಕ್ಕೂ ದುರಂತವೇ ಸರಿ. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಕೂಡಲೇ ಈ ಬಗ್ಗೆ ಗಮನಹರಿಸಿ ಕಟ್ಟಡ ನಿರ್ಮಾಣ ಕೈಬಿಡಲು ಕ್ರಮ ವಹಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಒಳ ಮೀಸಲಾತಿ ಅವೈಜ್ಞಾನಿಕ ಎಂದು ಆರೋಪಿಸಿ ಪ್ರತಿಭಟನೆ

ಮೈಸೂರು, ಅ.25(ಎಂಟಿವೈ)– ಜಾತಿ ಜನಗಣತಿಯಲ್ಲಿ ಆಗಿರುವ ತಾರತಮ್ಯ ಸರಿಪಡಿಸಿದ ನಂತರವೇ ಒಳಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಭೋವಿ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಹಳೇ ಹಾಲಿ ಡೈರಿ ಬಳಿಯಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಕರ್ನಾಟಕ ರಾಜ್ಯ ಭೋವಿ ಸಂಘರ್ಷ ಸಮಿತಿ ಕಾರ್ಯಕರ್ತರು ಕೆಲಕಾಲ ಪ್ರತಿಭಟನೆ ನಡೆಸಿದರು.

ಜಾತಿ ಜನಗಣತಿ ಅವೈಜ್ಞಾನಿಕವಾಗಿದೆ. ಮಾಜಿ ಸಚಿವ ಜೆ.ಮಾಧುಸ್ವಾಮಿ ನೇತೃತ್ವದ ಉಪಸಮಿತಿ ಸಲ್ಲಿಸಿರುವ ಒಳ ಮೀಸಲಾತಿ ವರದಿಯೂ ಅವೈಜ್ಞಾನಿಕವಾಗಿದೆ. ಇದರಿಂದ ಭೋವಿ ಜನಾಂಗಕ್ಕೆ ಅನ್ಯಾಯವಾದಂತಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ತರಾತುರಿಯಲ್ಲಿ ಒಳಮೀಸಲಾತಿಯನ್ನು ಜಾರಿಗೊಳಿಸಬಾರದು. ಜಾತಿ ಗಣತಿಯಲ್ಲಿರುವ ನ್ಯೂನತೆ, ಲೋಪದೋಷ ಸರಿಪಡಿಸಿದ ನಂತರ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಒಳಮೀಸಲಾತಿ ವರದಿಯಲ್ಲಿ ವಿವಿಧ ಜಾತಿ ಜನಾಂಗಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲ ಗುಂಪಿನಲ್ಲಿ ರಾಜ್ಯದ ಜನಸಂಖ್ಯೆಯಲ್ಲಿ ಶೇ.25.06ರಷ್ಟು ಜನರಿದ್ದು, ಅವರಿಗೆ ಶೇ.6ರಷ್ಟು ಒಳಮೀಸಲಾತಿ ನಿಗದಿ ಮಾಡಲಾಗಿದೆ. ಎರಡನೇ ಗುಂಪಿನಲ್ಲಿ ಶೇ.33.62ರಷ್ಟು ಜನರಿದ್ದು, ಅವರಿಗೆ ಶೇ.5.5ರಷ್ಟು ಒಳ ಮೀಸಲಾತಿ ಒದಗಿಸಲಾಗಿದೆ. ಮೂರನೇ ಗುಂಪಿನಲ್ಲಿ ಭೋವಿ, ಲಂಬಾಣಿ, ವಡ್ಡರ್, ಕೊರಚ ಸೇರಿದಂತೆ 101 ಜಾತಿಗೆ ಸೇರಿದ ಶೇ.27.19ರಷ್ಟು ಜನರಿದ್ದು, ಕೇವಲ ಶೇ.4.5ರಷ್ಟು ಒಳಮೀಸಲಾತಿ ನೀಡಲಾಗಿದೆ. 101 ಉಪ ಜಾತಿಗಳಲ್ಲಿ 99 ಉಪಜಾತಿ ಜನರಿಗೆ ಅನ್ಯಾಯವಾಗಲಿದೆ. ಶೇ.15 ಮೀಸಲಾತಿಯಲ್ಲಿ ಎಡಗೈ ಸಮುದಾಯಕ್ಕೆ ಶೇ.6ರಷ್ಟು, ಬಲಗೈ ಪಂಗಡಕ್ಕೆ ಶೇ.5ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಉಳಿದ ಶೇ.4ರಲ್ಲಿ ಮೀಸಲಾತಿಯನ್ನು 99 ಉಪಜಾತಿಗಳನ್ನು ಸೇರಿಸಲಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.



ಜಾತಿ ಜನಗಣತಿಯಲ್ಲಿನ ಲೋಪ ಸರಿಪಡಿಸಿದ ನಂತರ ಒಳಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಭೋವಿ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಭೋವಿ ಸಂಘರ್ಷ ಸಮಿತಿ ಉಪಾಧ್ಯಕ್ಷ ಆರ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಸ್ ಲೋಕೇಶ್, ಸಹ ಕಾರ್ಯದರ್ಶಿ ಕೆ.ಮೋಹನ್ ಕುಮಾರ್, ಮುಖಂಡರಾದ ವಿ. ನಾಗರಾಜು, ಆರ್. ಮಂಜುನಾಥ್, ಕೆ.ಹನುಮಂತು, ಪ್ರಮೀಳ ರಾಮಚಂದ್ರ, ಸುಗುಣ ಜಿ.ಗೋಪಾಲ್, ರಾಧಾ ಹೆಚ್. ಹನುಮಂತ, ಜಿ.ರಾಜಶೇಖರ್, ವಿ. ಶ್ರೀನಿವಾಸ, ಆರ್.ಮೋಹನ್ ಕುಮಾರ್, ಕೆ.ಮಂಜುನಾಥ್, ಎಸ್.ನಾಗೇಂದ್ರ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ನಸಾಬ್ (ಕ)	1 ಪ್ರದರ್ಶನಗಳು
ಅನ್ನ (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಎಲ್ಲಿಗೆ ಪಯಣ ಯಾವುದೋ ದಾರಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದಿ ಹಂಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯಲಾ ಕುನ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ದೇವರ (ತೆ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಪ್ರಾಪ್ತಿ (ಕ)	2 ಪ್ರದರ್ಶನಗಳು
ಕೃಷ್ಣಂ ಪ್ರಣಯ ಸಖಿ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಮೂಕ ಜೀವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.11.05ಕ್ಕೆ, ಮ.1.30ಕ್ಕೆ, ರಾ.7.15ಕ್ಕೆ, ರಾ.9.45ಕ್ಕೆ, ವೆಟ್ಟೈಯನ್ (ತ): ಸಂ.4ಕ್ಕೆ.
ಸ್ಕ್ರೀನ್ 2	ದಿ ವೈಲ್ಡ್ ರೋಬೋಟ್ (3ಡಿ)(ಇಂ): ಬೆ.11ಕ್ಕೆ, ಮಾರ್ಟಿನ್ (ಕ): ಮ.1.10ಕ್ಕೆ, ವೆಟ್ಟೈಯನ್ (ತ): ಸಂ.4.05ಕ್ಕೆ, ಯಲಾ ಕುನ್ನಿ (ಕ): ರಾ.7.10ಕ್ಕೆ, ನರುಡಿ ಬ್ರದುಕು ನಟನ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಬೆ.10.35ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ಮರ್ಫಿ (ಕ): ರಾ.7ಕ್ಕೆ, ಪಣಿ (ಮ): ರಾ.9.50ಕ್ಕೆ.
ಸ್ಕ್ರೀನ್ 4	ನಸಾಬ್ (ಕ): ಬೆ.10.20ಕ್ಕೆ, ವೆಟ್ಟೈಯನ್ (ತ): ಮ.1.05ಕ್ಕೆ, ಸಂ.6.55ಕ್ಕೆ, ಯಲಾಕುನ್ನಿ (ಕ): ಸಂ.4.15ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

15ನೇ ದಿನ, ಶನಿವಾರ, 26–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಡೆಲ್ಲಿ ರೇಸ್ ಕ್ಲಬ್ ಟ್ರೋಫಿ ಡಿII–1200 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 1.30ಕ್ಕೆ
1. ಜಂಟಲ್ ಮೆನ್ಸ್ ವರ್ಡ್ 2. ಲೀಡ್ ಸಿಂಗರ್ 3. ಮಾಸ್ಟರ್ ವಿಕ್ಟರಿ

II. ಶ್ರೀ ಶೇಷಾಚಲಂ ಮೆಮೋರಿಯಲ್ ಟ್ರೋಫಿ –1400 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ಔರ್ಲ್ 2. ಮಾಸ್ಟರಿ 3. ಅನಾಲೆಕ್ಟ್

III ಆರ್.ಎಂ. ಪುಟ್ಟಣ್ಣ ಮೆಮೋರಿಯಲ್ ಟ್ರೋಫಿ –1200 ಮೀ. 3 ವರ್ಷ (ಟರ್ಮ್ಸ್) ಮಧ್ಯಾಹ್ನ 2.30ಕ್ಕೆ
1. ಮೆಹರಾ 2. ಈಸ್ಟರನ್ ಗೋಲ್ಡ್ 3. ಕನೆಕ್ಟಿಂಗ್ ಡಾಟ್ಸ್

IV. ಬೊಟ್ಟೋಲಾಂಡ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65. ಮ. 3.00ಕ್ಕೆ
1. ಚೋಟಿ ಪಾರಿ 2. ಸಾರ್ಜೆಂಟ್ ರೆಕ್‌ಲೆಸ್ 3. ವಿಲ್ಲಿಂಗ್‌ಟನ್

V. ಹೆಚ್.ಪಿ.ವಿಶ್ವನಾಥನ್ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಮಾಕ್‌ರಾನ್ 2. ಅಶ್ವವೇದಾ 3. ಕಾಂಟ್ರಿಬ್ಯೂಟರ್

VI. ಕೆ.ಟಿ.ಶ್ಯಾಮಯ್ಯಗೌಡ ಮೆಮೋರಿಯಲ್ ಕಪ್ –1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ರಾವಿಶಿಂಗ್ ಫಾರ್ಮ 2. ಪ್ರಿನ್ಸ್ ಕಾರ್ಪೊರೇಟ್ 3. ಸಗೇರಾ

VII. ಶರಣ್ ಲಕ್ಷ್ಮಣ್ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಸೂಪರ್ ಕೈಂಡ್ 2. ಎಮರಾಲ್ಡ್ ಕ್ವೀನ್ 3. ರಿವರ್ ಆಫ್ ಗೋಲ್ಡ್

VIII. ಡೆಲ್ಲಿ ರೇಸ್ ಕ್ಲಬ್ ಟ್ರೋಫಿ ಡಿI–1200 ಮೀ. ರೇಟೆಡ್ 00 ರಿಂದ 25. ಸಂ.5.00ಕ್ಕೆ
1. ರಿವಾಲ್‌ಟರ್ 2. ಡೊಮಿನಾ 3. ಜಸ್ಟ್ ಬ್ಲೂ

ದಿನದ ಅತ್ಯುತ್ತಮ	ರಾವಿಶಿಂಗ್ ಫಾರ್ಮ
ಡಬ್ಬಲ್	ಮೆಹರಾ, ರಿವಾಲ್‌ಟರ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಚಿರಸ್ಮರಣೆ



ವನಜಾ ಬಿ. ಪಂಡಿತ್

ಅಧ್ಯಕ್ಷರು
ಶ್ರೀ ಗಾಯತ್ರಿ ಎಜುಕೇಶನಲ್ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ (ರಿ.)
ಸಿದ್ದಾರ್ಥನಗರ, ಮೈಸೂರು

ಸದ್ಗತಿ ಕೋರುವವರು
ಉಪಾಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರುಗಳು

WISDOM SCHOOL
CBSE, Nanjangud
Hiring Teachers immediately!
- Science , Maths, IT, Dance
- Send CV to **6364911940** or support@wisdomschool.in
- Selected will be called for interview

For enquiry, call
7676110063 (9AM-4PM)

ಮನೆ ಮಾರಾಟಕ್ಕಿದೆ
20x30 ಪೂರ್ವ ದಿಕ್ಕಿನ **G+1**, ವಿಜಯನಗರ 4ನೇ ಹಂತ 2ನೇ ಫೇಸ್, ಬೆಲೆ 83 ಲಕ್ಷ
ಸೈಟು ಮಾರಾಟಕ್ಕಿದೆ
30x40 ಮೂಡಾ ಡಿಜಿಟಲ್ ಖಾತೆ ಕಾರ್ನರ್ ಸೈಟ್ ದಟ್ಟಗಳ್ಳಿ ಬೆಲೆ 52 ಲಕ್ಷ
8660726140

ಕೊನೆಯ 10 ದಿನಗಳು (4–11–2024) ಬನ್ನಿ ಆನಂದಿಸಿ
ಜೆಮಿನಿ ಸರ್ಕಸ್
ಕಾರಂಜಿಕೆರೆ ಬಳಿ, ಮೃಗಾಲಯದ ಹಿಂಭಾಗ, ನಜರ್ ಬಾದ್, ಮೈಸೂರು



ಮಳೆ ಚಿಂತೆ ಬಿಡಿ!
ಜನಸಾಗರ ಹರಿದು ಬರುತ್ತಿದೆ!
ನೋಡಿದವರು ವಾ!! ಅಂತಿದ್ದಾರೆ
ದಿನ 3 ಆಟಗಳು
1ಕ್ಕೆ, 4ಕ್ಕೆ ಮತ್ತು 7ಕ್ಕೆ
ಪ್ರವೇಶ ದರ:
Rs. 150/-, Rs. 250/- Rs. 300/- & Rs. 400/-
ಮುಂಗಡ ಬುಕ್ಕಿಂಗ್ ಸಂಪರ್ಕಿಸಿ: **79070-89704**

SHOBA PROPERTIES
Sites for sale Fully devoloped attached to Govt high school and collage after yelwala
8050009696

Tender / Quotation

CHARKOS GROUP OF INSTITUTION

Invites to participate and provide quotation for the supply of following services, for their College in Vijayanagar 3rd stage, Mysore.

Sl No.	Service Category	Description
1	Food & Beverage	Supply of 3 times meals (Breakfast, Lunch, Dinner) for more than 600 students per day, preferable Kerala food.
2	Security Service	Supply of security guards for College Building & 4-Hostels Building.
3	Housekeeping Service	Supply of housekeeping staff for College Building & 4-Hostels Building.

All quotes to be submitted on or before **30.10.2024**, to the following contact details
Email-accountsmysore@charkosglobal.com
Mob-+91-9319746809

FOR ADVERTISEMENT
STAR OF MYSORE
Please Call: **0821-2496522 / 23**
Email: **ad@starofmysore.com**
ಮೈಸೂರು ಮಿತ್ರ
Please Call: **0821-2496522 / 23**
Email: **ad@mysurumithra.com**



